ಕೊಡಗು ಸಂಗಾತಿ

ಜೂನ್ 1 ರಿಂದ 30, 2001 ಪಾಕ್ಷಿಕ ಪತ್ರಿಕೆ (ಬೇಶ 18-31 - ಕಾರ್ತಿಲ್ 1-16)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 11-12 ಪುಟಗಳು : 24 ಬೆಲೆ ರೂ. : 6-00



2000 ಮಿಲ್ಲೇನಿಯಂನ ರಾಷ್ಟ್ರಪತಿಗಳ ಪೋಲಿಸ್ ಚಿನ್ನದ ಪದಕ ವಿಜೇತ :

ಅರ್ವತ್ತೊಕ್ಲುವಿನ ಶ್ರೀ ಪಟ್ಟಡ ಕೃಷ್ಣಪ್ಪ ಕುಶಾಲಪ್ಪ

ದಕ್ಷಿಣ ವಲಯದ ಪೋಲೀಸ್ ಮಹಾ ದಂಡನಾಯಕಿ ಕಾಂಚನಾ ಭಟ್ಟಚಾರ್ಯರಿಂದ ಪ್ರಶಸ್ತಿ ಪ್ರಧಾನ.

ಮಾರಾಟಕ್ಕಿದೆ

ಉತ್ತಮ ತಳಿಯ 12 ತಿಂಗಳ ಒಂದು ಜೊತೆ (ಗಂಡು + ಹೆಣ್ಣು) ಜರ್ಮನ್ ಶೆಪರ್ಡ್ ಮಾರಟಕ್ಕಿವೆ. ಖಾಯಿಸುದಾರರು ಈ ಕೆಳಗಿನ ವಿಳಾಸದವರನ್ನು ಕೂಡಲೇ ಸಂಪರ್ಕಿಸುವುದು.

ಕೆ.ಜಿ.ಬೋಪಯ್ಯ
ರುಧಿನ ಫಾರಂ, ಮೈಸೂರು - ಮಹದೇವಪುರ - ಮಂಡ್ಯ ರಸ್ತೆ
ಮೈಸೂರು ಖಾಸಗಿ ಬಸ್ ನಿಲ್ದಾಣದಿಂದ 7 ಕಿ. ಮೀ. ✆ : **0821 / 451543**

ಉತ್ತಮ ಛಾಯಾಗ್ರಫಿ ಬೇಕಾಗಿದೆ

ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಜನಾಂಗದ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಉತ್ತಮ ಛಾಯಾಗ್ರಫಿಯನ್ನು ಕಳುಹಿಸಿ ಕೊಟ್ಟಲ್ಲೊ, ಉತ್ತಮವಾದವುಗಳನ್ನು ಮುಖ ಪುಟದಲ್ಲಿ / ಹೊರಪುಟದಲ್ಲಿ ಪ್ರಕಟಿಸಲಾಗುವುದು.

— ಸಂಪಾದಕಿ

ಭವಿಷ್ಯದಲ್ಲಿ ಕೊಡಗು ಸಂಗಾತಿ ಲಾಟರಿ ಯೋಜನೆ

ಇನ್ನು ಮುಂದಕ್ಕೆ ಭವಿಷ್ಯದಲ್ಲಿ ಕೊಡಗು ಸಂಗಾತಿಯು ಪ್ರತಿವರ್ಷನೂ ಲಾಟರಿ ಯೋಜನೆಯನ್ನು ಹಮ್ಮಿಕೊಂಡಿದೆ. ದಿನಾಂಕ 8-4-2001ರಲ್ಲಿಲಾಟರಿ ಯೋಜನೆಯಡಿಯಲ್ಲಿ ಉತ್ತಮ ಆಕರ್ಷಕ ಬಹುಮಾನ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ವಿಜೇತರಿಗೆ ಸಂಗಾತಿ ವಂದನೆಗಳು.

— ವ್ಯವಸ್ಥಾಪಕರು

ಕೊಡಗುಸಂಗಾತಿ ಪತ್ರಿಕೆಯ ಉಪಸಂಪಾದಕ ಹುದ್ದೆಗೆ ಕರೆ

ಕೊಡಗು ಸಂಗಾತಿ, ಪಾಕ್ಷಿಕ ಪತ್ರಿಕೆಯ ಮೈಸೂರಿನ ಹಿನ್‌ಕಲ್‌ನಲ್ಲಿರುವ ಪ್ರಧಾನ ಕಛೇರಿಯಲ್ಲಿ ಉಪ ಸಂಪಾದಕರಾಗಿ ಕೆಲಸ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ. ಗಂಡಸರು, ಹೆಂಗಸರು, ವಿಧವೆಯರು, ನಿವೃತ್ತಿದಾರರು, ನಿರುದ್ಯೋಗಿಯರು ಹೀಗೆ ಯಾರು ಬೇಕಾದರು ಅಪ್ಲೈ ಮಾಡಬಹುದು. ಜಾತಿಯ ಅಭ್ಯಂತರವಿಲ್ಲ. ಸೂಕ್ತ ಸಂಭಾವನೆ ನೀಡಲಾಗುವುದು. ವಿದ್ಯಾಮಟ್ಟ ಪಿ.ಯು.ಸಿ., ಡಿಗ್ರಿ ಅಥವಾ ಪತ್ರಿಕೋದ್ಯಮದವರಾಗಿದ್ದು ಅಕ್ಷರ ಚೆನ್ನಾಗಿರಬೇಕು. ಕನ್ನಡ ಭಾಷಾಜ್ಞಾನ ಚೆನ್ನಾಗಿರಬೇಕು. ಶ್ರದ್ಧೆಯಿರುವ ನಿಷ್ಠಾವಂತ ಅಭಿಮಾನಿಯಾಗಿರಬೇಕು. ಮೈಸೂರಿನ ಹಿನಕಲ್, ಹೂಟ್‌ಗಳ್ಳಿ, ವಿಜಯನಗರ ಸಮೀಪವಿರುವ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಆಸಕ್ತರು ಕೂಡಲೇ ತಮ್ಮ ಪರಿಚಯ ಮೂಲಕ ಸಂಪರ್ಕಸುವುದು ಕೊನೆ ದಿನಾಂಕ 10-6-2001.

✆ : **0821 - 516771**

— ವ್ಯವಸ್ಥಾಪಕರು

ಶುಭ ವಿವಾಹ

ಮೈಸೂರಿನ ರಾಘವೇಂದ್ರ ನಗರ ನಿವಾಸಿ ಬಾಡನ ಸುಬ್ಬಯ್ಯನವರ ಪುತ್ರಿ **ಶಕುಂತಲ** ಮತ್ತು ಬಾಳುಗೋಡು ಗ್ರಾಮದ ಕುಂಜಿಲನ ದಿ|| ಉತ್ತೈಯ್ಯನವರ ಪುತ್ರ **ವಿಕಾಸ್**ರವರ ಶುಭ ವಿವಾಹವು ದಿನಾಂಕ 14-5-2001ರಲ್ಲಿ ಕುಶಾಲನಗರದ ಕಾಳೇಘಾಟ್ ಕಲ್ಯಾಣ ಮಂಟಪದಲ್ಲಿ ಜನುಮ ಜನುಮದ ಅನುಬಂಧಿಗಳಾದರು.

ಈ ನವ ದಂಪತಿಗಳಿಗೆ ಶುಭ ಹಾರೈಕೆಗಳು

ಯಿಂದ : **ಶ್ರೀಮತಿ ಕಡ್ಯದ ರತಿ ಅರುಣ್‌ಕುಮಾರ್,**
"ಪುಣ್ಯ" ವಧು ವರರ ಅನ್ವೇಷಣೆ ಕೇಂದ್ರ & ರಿಯಲ್ ಎಸ್ಟೇಟ್
ಎನ್. ಸಿ. ಜಿ. ಕಾಂಪ್ಲೆಕ್ಸ್, ಅಯ್ಯಪ್ಪ ದೇವಸ್ಥಾನ ಹತ್ತಿರ
ಬಿ.ಎಂ. ರಸ್ತೆ, ಸುಂಟಿಕೊಪ್ಪ, - 571 237, ✆ : **95, 08276/62252**

ತಿದ್ದುಪಡಿ

ಸಂಗಾತಿಯ ಸಂಪುಟ 5, ಸಂಚಿಕೆ 7, ಹೊರಗಿನ ಪುಟ ಕೊನೆಯ ಪುಟದ ಕೊಡಗು ಎಜುಕೇಷನಲ್ ಅಕಾಡೆಮಿಯ ಜಾಯಿಂಟ್ ಸೆಕ್ರೆಟರಿ ಕಾಳೆಯಂಡ್ರ ಮಾಚಯ್ಯ ಅನ್ನು ಖಜಾಂಚಿ ಕಾಳೆಯಂಡ್ರ ಮಾಚಯ್ಯ ಅಂತ ಓದಿಕೊಳ್ಳುವುದು. ಮುದ್ರಣ ದೋಷಕ್ಕೆ ವಿಷಾದಿಸುತ್ತೇವೆ.

- ಸಂಪಾದಕಿ

2001, ಜೂನ್ 1 ರಿಂದ 15 ರ ತನಕ

ಒಳನೋಟ

ಕನ್ನಡ ವಿಭಾಗ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ	**ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. **ಫೋನ್ : 95821/516771**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ	**ಬೈತಡ್ಕ ಜಾನಕಿ ಬೆಳ್ಯಪ್ಪ,** ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, **ಫೋನ್ : 08272/28047**
ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ	**ಕುಂಭಗೌಡನ ಪ್ರವೀಣ್‌ಕುಮಾರ್, ವೆಜಿಟೆಬಲ್ ಶಾಪ್,** ಪಾಂಡನ ಕಾಂಪೌಂಡ್, ಅಪ್ಪಯ್ಯಗೌಡ ರಸ್ತೆ, ಮಡಿಕೇರಿ,
ಕುಶಾಲ ನಗರ	**ಕುಂಭಗೌಡನ ಸೋಮಣ್ಣ,** ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370
ಬೆಂಗಳೂರು ಮಹಾನಗರ	**ಕಲ್ಲುಮುಟ್ಲು ಬಸಪ್ಪ,** ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19, ಫೋನ್ : 080/6500946

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 6 ರೂ., ಅರ್ಧ ವಾರ್ಷಿಕ -75 ರೂ.,

ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಬೇಕಾದಕ್ಕಿಂತ ಹೆಚ್ಚು ಬೆಳೆಯುವುದು

ಕೈಗಾರಿಕಾ ಕಾರ್ಖಾನೆಗಳಲ್ಲಿ ಗುಣಮಟ್ಟದ ಇತಿಮಿತಿ ಇರುವಂತೆ (Quality Control) ವ್ಯವಸಾಯ ಕ್ಷೇತ್ರದಲ್ಲು ಬೆಳೆಸುವ ಇತಿಮಿತಿ (Quality Control) ತರಬೇಕು. ಕಾರಣ ರೈತರು ಹುರುಪಿನಿಂದ ಅತೀ ಹೆಚ್ಚು ಪ್ರಮಾಣದ ಬೆಳೆಯನ್ನು ಬೆಳೆಸಿ ಅವುಗಳ ಬೆಲೆ ಕುಸಿತದಿಂದ ರೈತರು ಕಂಗಾಲಾಗುವ ಹಲವಾರು ಉದಾಹರಣೆಗಳಿವೆ. ಉದಾಹರಣೆಗೆ ಕೊಡಗಿನ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹಾಗೂ ಹಾಸನ ಜಿಲ್ಲೆಯಲ್ಲಿ ಮಿತಿ ಮೀರಿ ಹಸಿಮೆಣಸು ಬೆಳೆದುದರಿಂದ ಕ್ರಯವೇ ಇಲ್ಲದೆ ಲಾರಿ ಲಾರಿಗಟ್ಟಲೆ ಹಸಿ ಮೆಣಸಿನ ಕಾಯನ್ನು ರಸ್ತೆಮೇಲೆ ಚೆಲ್ಲುವ ಪರಿಸ್ಥಿತಿ. ಅದೇ ರೀತಿ ಈರುಳ್ಳಿ, ಹಾಲುಗೆಡ್ಡೆ, ಕಡ್ಲೆಕಾಯಿ, ಕಬ್ಬು ಟೊಮೆಟೋ, ಶುಂಠಿ ಮುಂತಾದ ಬೆಳೆಗಳ ಪರಿಸ್ಥಿತಿಯೂ ಆಗಿ ಹಾಸನ, ಧಾರವಾಡ, ಬೆಳಗಾಂ, ಕೋಲಾರ ಜಿಲ್ಲೆಗಳಲ್ಲಿ ರೈತರು ಜಿಗುಪ್ಸೆಗೊಂಡು ತಾವು ಮಾಡಿದ ಸಾಲವನ್ನು ತೀರಿಸಲಿಕ್ಕಾಗದೆ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳು ಅಲ್ಲಲ್ಲಿ ಕಂಡು ಬರುತ್ತಾ ಇವೆ. ಇದನ್ನು ತಡೆಗಟ್ಟಲು ಸರ್ಕಾರ ಒಂದು ಹಿಡುವಳಿಯಲ್ಲಿ ಇಂತಿಷ್ಟೇ ಬೆಳೆಯನ್ನು ಬೆಳೆಸಬೇಕೆಂದು ನಿಗದಿಪಡಿಸಿ ನಿಗದಿತ ಮಿತಿಗಿಂತ ಹೆಚ್ಚು ಬೆಳೆದವರಿಗೆ ತಕ್ಕ ಶಿಕ್ಷೆಯನ್ನು ಕೊಡಬೇಕೆಂದು ಖಡ್ಡಾಯ ಮಾಡಿದರೆ ಈ ರೀತಿಯ ಅನಾಹುತಗಳಿಗೆ ಎಡೆ ಕೊಡಲಾರದೆಂದು ಸಂಗಾತಿಯ ಸಲಹೆ.

ಹಳೆಗನ್ನಡ ಅಧ್ಯಯನ ಅಗತ್ಯ : ವೆಂಕಟಾಚಲ ಶಾಸ್ತ್ರಿ ಸಲಹೆ

ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದಲ್ಲಿ ಹಳೆಗನ್ನಡ ಅಧ್ಯಯನಕ್ಕೆ ಅವಕಾಶ ಕಲ್ಪಿಸಬೇಕು ಎಂದು ಪ್ರಸಿದ್ಧ ಸಂಶೋಧಕ ಹಾಗೂ ಭಾಷಾತಜ್ಞ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ ಅಭಿಪ್ರಾಯ ಪಟ್ಟಿದ್ದಾರೆ.

ಬೆಂಗಳೂರು ನಗರದ ಜಯನಗರ ಲಯನ್ಸ್ ಕ್ಲಬ್ ಆವರಣದಲ್ಲಿ ಇತ್ತೀಚೆಗೆ ಚಿದಾನಂದ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡುತ್ತಿದ್ದರು.

ಹಳೆಗನ್ನಡದ ಅಧ್ಯಯನ ಕೇವಲ ವಿದ್ವಾಂಸರಿಗೆ ಮಾತ್ರ ಅಲ್ಲ. ಕನ್ನಡ ನಾಡಿನ ಸಾಂಸ್ಕೃತಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಅರಿಯಲು ಹಳೆಗನ್ನಡದ ಅಧ್ಯಯನ ಅಗತ್ಯ ಎಂದು ಒತ್ತಿಹೇಳಿದರು.

ಇತಿಹಾಸ ತಿಳಿಯದೇ ಮುನ್ನಡೆಯುವುದು ಹೇಗೆ ? ಎಂದು ಪ್ರಶ್ನಿಸಿದ ಅವರು, ಶಾಲಾ ಮಟ್ಟದಲ್ಲಿ ಹಳೆಗನ್ನಡ, ವ್ಯಾಕರಣಕ್ಕೆ ಪ್ರಾಮುಖ್ಯತೆ ಕಡಿಮೆಯಾಗಿರುವುದು ಬೇಸರ ತಂದಿದೆ ಎಂದು ವಿಷಾಧ ವ್ಯಕ್ತಪಡಿಸಿದ್ದಾರೆ.

ಕವಿರಾಜಮಾರ್ಗದಿಂದ ಹಿಡಿದು 19-20ನೇ ಶತಮಾನದ ವರೆಗೂ ಕಿಟ್ಟಲ್, ರೈಸ್‌ರ ಕಾರ್ಯ ಶೋಧನೆಗಳನ್ನು ಪುನಃ ಸಂಶೋಧನೆಗೊಳಪಡಿಸಿ ಇತಿಹಾಸವನ್ನು ಕ್ರಮಬದ್ಧವಾಗಿ ಬರೆಯಬೇಕಿದೆ ಎಂದು ಹೇಳಿದ ಅವರು, ವೈಚಾರಿಕ, ಸಂಶೋಧನಾತ್ಮಕ ಸಾಹಿತ್ಯ ಹೆಚ್ಚಾಗಿ ಬರುತ್ತಿರುವುದು ಸಂತಸ ತಂದಿದೆ. ಕನ್ನಡ ವಿಶ್ವವಿದ್ಯಾಲಯ, ವಿವಿಧ ಅಕಾಡೆಮಿ, ಪ್ರಾಧಿಕಾರಗಳು ಕನ್ನಡದ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳ ಅಧ್ಯಯನ ಕಾರ್ಯ ನಡೆಸುತ್ತಿರುವುದು ತೃಪ್ತಿಕರ ಎಂದು ಶ್ಲಾಘಿಸಿದ್ದಾರೆ.

ಭಾವನೆ ಅಭಿಪ್ರಾಯ, ಮಾತುಗಳಿಗೆ ಅಂಟಿಕೊಂಡಿರುವ ಕೊಳೆತೊಳೆಯುವುದು ಶೋಧಕರ ಕೆಲಸ. ಅದನ್ನು ಯುಕ್ತಾಯುಕ್ತವಾಗಿ ಸಮರ್ಥವಾಗಿ ನಿರ್ವಹಿಸುವವನೇ ಸಂಶೋಧಕ.

ಒಳಗೂ ಹಾಗೂ ಹೊರಗೂ ಶೋಧನೆಯಲ್ಲಿ ತೊಡಗುವ ಸಂಶೋಧಕರಿಗೆ ತಿಂಗಳಿಗೆ 60ದಿನಗಳು. ಪ್ರತಿಯೊಂದನ್ನೂ ಸಾಮಾನ್ಯ ಜನರಂತೆ ಅಸಡ್ಡೆಯಿಂದ ಗಮನಿಸದೇ ಬಹಳ ಕಾತುರತೆ, ಆಸಕ್ತಿ ಹಾಗೂ ಆಳವಾದ ಅಧ್ಯಯನ ದೃಷ್ಟಿಯಿಂದ ನೋಡುವುದೇ ಅವರ ಅಭ್ಯಾಸವಾಗಿರಬೇಕೆಂದರು.

ಎಲ್ಲವನ್ನೂ ತಿಳಿದವನು ಎಂದೂ ಸಂಶೋಧಕನಾಗುವುದಿಲ್ಲ. ಅಜ್ಞಾನಿಯೇ ಈ ಕೆಲಸಕ್ಕೆ ಇಳಿಯುವವನು. ಆದರೆ ಇವನಲ್ಲಿ ತನಗೆ ತಿಳಿಯದ್ದನ್ನು ತಿಳಿದು ಕೊಳ್ಳಬೇಕೆಂಬ ಆಸಕ್ತಿ, ಕುತೂಹಲ ಸ್ವಭಾವದವರಾಗಿರಬೇಕು ಎಂದು ತಮ್ಮ ಸಲಹೆಯನ್ನು ನೀಡಿದ್ದಾರೆ.

— ಸಂಗಾತಿ

ವಿ. ಸೂ. ಈ ನಿಟ್ಟಿನಲ್ಲಿ ನಡುಗನ್ನಡದ ಅರೆಭಾಷೆಗೆ ಹೊಸ ತಿರುವು ಸಿಗಬಹುದೇನೋ.

— ಸಂಪಾದಕಿ

ನಗೆಹನಿ — ಧೂಮಪಾನ

ಬೋರಣ್ಣ : ಲೋ, ರಂಗಣ್ಣ ಬೀಡಿ ಸೇದ್ತಾ ಇದ್ದೀಯಲ್ಲೋ?
ರಂಗಣ್ಣ : ಹೌದು ಬೋರಣ್ಣ, ಬೋರಾಯ್ತು ಸೇದ್ತಾ ಇದ್ದೀನಿ.
ಬೋರಣ್ಣ : ಅಲ್ಲಾ ಬೀಡಿ ಸೇದೋದು ಆರೋಗ್ಯಕ್ಕೆ ಕೆಟ್ಟದ್ದಲ್ವ.
ರಂಗಣ್ಣ : ಬೀಡಿ ಸೇದೋದು ಕೆಟ್ಟದ್ದು ಅಂತ ಗೊತ್ತಿರುವುದಕ್ಕೆ ಅದನ್ನು ಸುಟ್ಟು ಹಾಕುತ್ತಿದ್ದೀನಿ.

— ಪಟ್ಟಡ ಹಂಪಿ ಸುಬ್ಬಯ್ಯ, ಮದೆ.

ಪಶ್ಚಿಮ ನೈರುತ್ಯದ ಬಾಗಿಲು — ಗಂಡಸಿನ ಬದುಕು ಬಯಲು.

ಮಕ್ಕಳ ಮನವ ಕಾಡುವ ಕೀಳರಿಮೆ

ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲಿ ಕೆಲವೊಂದು ಘಟನೆಗಳು ನಡೆಯುತ್ತವೆ. ಅವುಗಳು ವಿದ್ಯಾರ್ಥಿಗಳಲ್ಲಿ ಏಳಿಗೆಯನ್ನು ತರಬಹುದು, ನಿರ್ನಾಮಕ್ಕೂ ದೂಡಬಹುದು. ಆದರೆ ಚಿಕ್ಕಂದಿನಿಂದಲೂ ನನ್ನ ಕೈಲಿ ಏನೂ ಆಗೋಲ್ಲಾ, ಬೇರೆಯವರ ತರಹ ನನ್ನ ಹತ್ತಿರ ದುಡ್ಡಿಲ್ಲ, ಅವರಷ್ಟು ರೂಪವಂತೆ/ತನಲ್ಲ ಎಂಬ ಕೀಳರಿಮೆ ಬೆಳೆಸಿಕೊಂಡರೆ ಮತ್ತು ಹಾಗೇ ಸಾಯುವವರೆಗೆ ಇದ್ದು ಬಿಟ್ಟರೆ ಏನಾಗಬಹುದು ಯೋಚಿಸಿ?

ನಮಗೆ ಚಿಕ್ಕಂದಿನಿಂದಲೂ ಕೀಳರಿಮೆ ಇರುತ್ತದೆ. ಜಾತಿ ಜಾತಿ ಮಧ್ಯೆ, ಬಡವ ಶ್ರೀಮಂತ ಇನ್ನೂ ಇತ್ಯಾದಿ ಅಂಶಗಳನ್ನು ನಾವು ಪ್ರಬುದ್ಧರಾದಂತೆಲ್ಲಾ ಮರೆಯಾಗಬೇಕು. ನಾಲ್ಕಾರು ಜನರ ಎದುರು ಸಮರ್ಥವಾಗಿ ಮಾತನಾಡಬಲ್ಲಷ್ಟು ಆತ್ಮಸ್ಥೈರ್ಯ ಬೆಳೆಸಿ ಕೊಳ್ಳಬೇಕು. ಆದರೆ ಇದನ್ನು ಎಷ್ಟು ಜನ ಬೆಳೆಸಿಕೊಳ್ಳುತ್ತಾರೆ ?

ಚಿಕ್ಕಮಕ್ಕಳಾಗಿದ್ದಾಗ ತಮ್ಮಲ್ಲೇ ಕೀಳರಿಮೆ. ಅರ್ಥವಾಗ ದ್ದನ್ನು ಪುನಃ ಕೇಳಲಾರರು. ಇಂದು ಪ್ರಶ್ನೆ ಕೇಳಿಬಿಟ್ಟರೆ, ನಾಳೆ ಗುರುಗಳು ನಮ್ಮನ್ನು ಪ್ರಶ್ನೆಕೇಳಿ ಬಾರಿಸಿಯಾರು ಎಂಬ ಕೀಳರಿಮೆ. ಇದು ಬೆಳೆಯುತ್ತಾ ಬೆಳೆಯುತ್ತಾ ಸ್ನಾತಕೋತ್ತರ ವಿದ್ಯಾರ್ಥಿಗಳ ತನಕವೂ ಬಂದುಬಿಡುತ್ತದೆ. ಒಬ್ಬ ವಿದ್ಯಾರ್ಥಿ ಚೆನ್ನಾಗಿ ಓದಬಹುದು. ಆದರೆ ಗುರುಗಳ ಜೊತೆ ಮಾತನಾಡದೆ, ಚರ್ಚಿಸದೆ ಸಂಪೂರ್ಣ ವ್ಯಕ್ತಿಯಾಗಿ ಮಾರ್ಪಾಡಾಗಲಾರ.

ಎಷ್ಟೋ ಜನ ವಿದ್ಯಾರ್ಥಿಗಳು ವಾರ್ತಾಪತ್ರಿಕೆಗಳನ್ನು ಓದುವುದಿಲ್ಲ. ಓದಿದರೂ ಸಾಂಸ್ಕೃತಿಕ, ರಾಜಕೀಯ, ಹೊಸ ಆವಿಷ್ಕಾರ, ಆರ್ಥಿಕ ವಿಷಯಗಳ ಬಗ್ಗೆ ಗಮನ ಕೊಡುವುದಿಲ್ಲ. ಯಾಕೆಂದರೆ ಇವೆಲ್ಲಾ ಅರ್ಥವಾಗಲಾರವೆಂಬ ಕೀಳರಿಮೆ. ಎಷ್ಟೋ ಜನ ವಿದ್ಯಾರ್ಥಿ ಮಿತ್ರರು ವಾರ್ತೆ ಬಂದರೆ ಟಿ.ವಿ. ಆಫ್ ಮಾಡುತ್ತಾರೆ, ಇಲ್ಲವೆ ಚಾನಲ್ ತಿರುಗಿಸುತ್ತಾರೆ. ಅವರಿಗೆ ಅಲರ್ಜಿ ಎಂಬ ಕೀಳರಿಮೆ.

ಸ್ನಾತಕೋತ್ತರ ಪದವಿಗೆ ಬಂದ ನಂತರವೂ ವಿದ್ಯಾರ್ಥಿಗಳು ಅಧ್ಯಾಪಕರ ಜೊತೆ ಮಾತನಾಡಲು ಹೆದರುತ್ತಾರೆ. ಒಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಕೊಟ್ಟಿರುವುದಿಲ್ಲ. ಸೆಮಿನಾರ್ ಇದ್ದರೆ ಆ ದಿನ ಚಕ್ಕರ್! ಆಸೆಗಳು ಮಾತ್ರ ತುಂಬಾ ಇರುತ್ತವೆ. ಇಂತಹವರಿಗೆ ತಮ್ಮ ಆತ್ಮಶಕ್ತಿಯ ಮೇಲೆ ಸಾಧಿಸಲಾರೆನೆಂಬ ಕೀಳರಿಮೆ, ಇಲ್ಲವೆ ಅತಿಯಾದ ಆತ್ಮವಿಶ್ವಾಸ. ಅದು ತಂದೊಡ್ಡಬಹುದಾದ ದುರಂತ ಮಾತ್ರ ಘೋರ.

ಇಂಗ್ಲೀಷ್ ಕಲಿತಿಲ್ಲವೆಂಬ ಕಾರಣಕ್ಕೆ ಇಂಗ್ಲಿಷ್ ಮಾತನಾಡುವ ವಿದ್ಯಾರ್ಥಿಗಳೊಂದಿಗೆ ಮಾತನಾಡಲು ಕೀಳರಿಮೆ. ಇಂತಹವರು ಇಂಗ್ಲಿಷನ್ನು ಕಷ್ಟಪಟ್ಟಾದರೂ ಕಲಿಯೋಣ ಎಂಬ ಆಸಕ್ತಿಯನ್ನು ಹುಟ್ಟಿಸಿಕೊಂಡಿರುವುದಿಲ್ಲ. ಓದಿದರೂ ಹತ್ತಾರು ಲೈನುಗಳನ್ನು ಓದಿ 20-30 ಶಬ್ದಗಳನ್ನು ಶಬ್ದಕೋಶದಲ್ಲಿ ಹುಡುಕಬೇಕಾಗಿ ಬಂದಾಗ, ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಲ್ಲವೆ ಎಂಬ ಸಮಾಧಾನ ತಂದುಕೊಳ್ಳುತ್ತಾರೆ. ಇಂತಹ ವಿದ್ಯಾರ್ಥಿಗಳು ಕಠಿಣ ಶ್ರಮಪಟ್ಟು, ಕಲಿಯಲಾರದೆ ನನಗೆ ಅರ್ಥವಾಗದು ಎಂಬ ಕೀಳರಿಮೆ ಬೆಳೆಸಿಕೊಂಡಿರುತ್ತಾರೆ.

ಪದವಿ ಮುಗಿಸಿದ್ದರೂ ಸಹಾ ನಮ್ಮ ವಿದ್ಯಾರ್ಥಿ ಮಿತ್ರರಿಗೆ ಬ್ಯಾಂಕ್ ಚಲನ್, ಜಾತಿ ಪ್ರಮಾಣ ಪತ್ರ, ಟಿ.ಸಿ.ಗಾಗಿ ಅರ್ಜಿಯನ್ನು ಬರೆಯಲು ಸಹಾ ಬರುವುದಿಲ್ಲ. ಇದನ್ನು ಕಲಿಯಬೇಕು ಎಂದು ಅನ್ನಿಸಿರುವುದಿಲ್ಲ. ಇವುಗಳನ್ನು ಕೇಳಿಬಿಟ್ಟರೆ ಬೇರೆಯವರು ಏನು ತಿಳಿದುಕೊಳ್ಳುತ್ತಾರೆ ಎಂಬ ಕೀಳರಿಮೆ. ಯಾವ ವಿಷಯಕ್ಕೆ ಹೇಗೆ ಬರೆಯಬೇಕು ಎಂಬುದನ್ನು ಕಾಣದೆ ಬೇರೆಯವರು ಬರೆದುಕೊಟ್ಟುದನ್ನು ಸೀದಾ ಹಾಗೆ ಕೊಟ್ಟುಬರುತ್ತಾರೆ. ಇದು ಅವರಿಗೆ ಕೇಳಿ ತಿಳಿದುಕೊಳ್ಳಲಾಗದ, ಸಮಾಜಕ್ಕೆ ಒಗ್ಗಿಕೊಳ್ಳಲಾಗದ, ಅವಮಾನಗಳನ್ನು ಮೀರಿ ನಿಲ್ಲಲಾರದ ಕೀಳರಿಮೆಗಳು.

ಇಲ್ಲಿ ಯಾರ ತಪ್ಪು ಎಂದು ಹೇಳೋಣ,

ಸರಕಾರದ್ದೇ? ಅಧ್ಯಾಪಕರದ್ದೇ, ತಂದೆ ತಾಯಿಗಳದ್ದೇ, ಇಲ್ಲಾ ಸಮಾಜದ್ದೇ ಎಲ್ಲರೂ ಹೊಣೆಗಾರರೇ. ಏನೇ ಇರಲಿ, ನಾವು ಬೆಳೆಯುತ್ತಾ ಹೋದಂತೆಲ್ಲಾ ಕೀಳರಿಮೆ ಮಾಯವಾಗ ಬೇಕು, ಅವುಗಳಿಗೆಲ್ಲಾ ನಮ್ಮಲ್ಲೇ ಉತ್ತರ ಇದೆ. ಹುಡುಕಬೇಕು. ಒಳ್ಳೆಯ ಚಿಂತನೆ, ಮಹಾನ್ ಸಾಧಕರ ಚರಿತ್ರೆ ಅಥವಾ ಪುಸ್ತಕಗಳನ್ನು ಓದಬೇಕು.

ಖಂಡಿತಾ ನಾವು ಇವೆಲ್ಲದರಿಂದ ಕೀಳರಿಮೆ ಮೀರಿ ನಿಲ್ಲಬಹುದು. ಆಗ ಮಾತ್ರ ಅಭಿವೃದ್ಧಿ ಸಾಧ್ಯ.

— ಬಿ. ಯೋಗಾನಂದಸ್ವಾಮಿ ಎಂ. ಎ.
ಪತ್ರಿಕೋದ್ಯಮ, ಮೈಸೂರು.

ದೆಹಲಿಯಲ್ಲಿ 18ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ

ದೆಹಲಿ ಕರ್ನಾಟಕ ಭವನದ ಸಭಾಂಗಣದಲ್ಲಿ 18ನೇ ರಾಷ್ಟ್ರೀಯ ಕನ್ನಡ ಸಮ್ಮೇಳನವು ಏಪ್ರಿಲ್ 7ರಿಂದ 8ರ ತನಕ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಸದಸ್ಯಕಾರ್ಯದರ್ಶಿ ಪ್ರೊ. ಎನ್. ಆರ್. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

— ಸಂಗಾತಿ

ಬೆಂಗಳೂರಿನಲ್ಲಿ ಕೊಡಗು ಎಜುಕೇಶನಲ್ ಅಕಾಡಮಿ (ರಿ.) ಉದಯ ಜನಾಂಗಕ್ಕೆ ಯುವ ನಾಯಕರುಗಳ ಕೊಡುಗೆ

ಒಂದು ಜನಾಂಗ ಅಭಿವೃದ್ಧಿ ಹೊಂದಬೇಕಾದರೆ, ಆ ಜನಾಂಗದ ಸರ್ವರು ವಿದ್ಯಾವಂತರಾಗಬೇಕು. ವಿದ್ಯೆಯಿಂದ ಬುದ್ಧಿ ವಿಕಸನ ಹೊಂದಿ ಇಂದಿನ ಸಮಾಜಕ್ಕೆ ತಕ್ಕಂತೆ ನಡೆದು ಕೊಳ್ಳುವುದಾಗಲಿ ಸಮಾಜದಲ್ಲಿ ಜನಾಂಗಕ್ಕೆ ಮಾನ್ಯತೆ ದಕ್ಕುವುದಾಗಲಿ ವಿದ್ಯೆಯಿಂದ ಮಾತ್ರ ಸಾಧ್ಯ. ವಿದ್ಯೆ ಸಮಾಜದ ಕಳಂಕವನ್ನು, ದಾರಿದ್ರ್ಯವನ್ನು, ಅಂಟು ಜಾಡ್ಯದಂತಹ ಧರ್ಮಾಂಧತೆಯನ್ನು ಹೋಗಲಾಡಿಸುವ ಔಷಧಿ. ಯಾರು ಈ ಔಷಧಿಯ ಸೇವನೆ ಸರಿಯಾಗಿ ಸೇವಿಸುತ್ತಾರೋ ಅವರಿಗೆ ಮೇಲೆ ಹೇಳಿದ ರೋಗಗಳು ಸೋಂಕಲಾರವು. ನಮ್ಮ ಜನಾಂಗ ಈ ರೀತಿಯ ಅಂದಕಾರದಿಂದ ಹೊರಬರಬೇಕು. ಸಮಾಜದಲ್ಲಿ ಅನ್ಯ ಜನಾಂಗದಂತೆ ನಮ್ಮ ಜನಾಂಗ ಮುಂದುವರಿಯಬೇಕು. ಇದಕ್ಕೆ ನಮ್ಮ ಹಿರಿಯರು ಸಾಕಷ್ಟು ಪ್ರಯತ್ನಿಸಿದರೂ ಸರಿಯಾಗಿ ಜನಾಂಗದಿಂದ ಪ್ರೋತ್ಸಾಹ ದೊರೆಯದೆ ಇಂದು ನಾವು ಧಾರ್ಮಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಹಾಗೂ ಶೈಕ್ಷಣಿಕವಾಗಿ ಹಿಂದೆ ಬೀಳುವಂತಾಗಿದೆ. ಈ ಕೊರತೆಯನ್ನು ನೀಗಲು ಶೈಕ್ಷಣಿಕವಾಗಿ ಮುಂದುವರಿಯುವುದು ಒಂದೇ ದಾರಿಯೆಂದು ಮನಗಂಡ ಜನಾಂಗದ ಚಿಂತಕ, ಹೆಸರುವಾಸಿ ವಕೀಲರೂ ಆದ ಮೊಟ್ಟನ ರವಿಕುಮಾರ್ ಹಾಗೆಯೇ ಜನಾಂಗದ ಚಿಂತಕ, ಹೆಸರುವಾಸಿ ಉದ್ಯಮಿ, ಯುವನಾಯಕ ಕುದುಪಜೆ ಗಣಪತಿ, ಅಲ್ಲದೆ ಜನಾಂಗದಲ್ಲಿ ಬುದ್ಧಿ ಜೀವಿಗಳಲ್ಲಿ ಒಬ್ಬರೂ, ಬೆಂಗಳೂರು ಗೌಡಸಮಾಜದ ಅಧ್ಯಕ್ಷರೂ, ಹೆಸರುವಾಸಿ ಉದ್ಯಮಿ, ದಾನಿಗಳು, ರಾಜಕೀಯವಾಗಿ ಪ್ರಭಾವಿ ವ್ಯಕ್ತಿ ಅಮ್ಮವ್ವನ ವಾಸುರವರು ಚಿಂತನೆಯನ್ನು ಮಾಡಿ, ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಈ ಮಾರ್ಗ ಸೂಕ್ತವೆಂದು ಮನಗಂಡು ತುರ್ತುಸಭೆಯನ್ನು ನಡೆಸಲು ಯೋಚಿಸಲಾಗಿ 2000-2001ನೇ ಸಾಲಿಗೆ ನಮ್ಮ ಈ ಜನಾಂಗದ ಹಿತವನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿನ ಗೌಡ ಮಾಜದ ಕಟ್ಟಡದಲ್ಲಿ ಕೊಡಗು ಎಡುಕೇಶನಲ್ ಅಕಾಡಮಿ ಸಂಸ್ಥೆಯನ್ನು ಹುಟ್ಟುಹಾಕಲು ಬೆಂಗಳೂರಿನಲ್ಲಿ ನೆಲೆಸಿರುವ ಹತ್ತು ಕುಟುಂಬ ಹದಿನೆಂಟು ಗೋತ್ರದ ಕುಲಸ್ಥರ ಸಭೆ ಕರೆದು, ಅಂತಿಮವಾಗಿ ಒಂದು ನಿರ್ಧಾರಕ್ಕೆ ಬರಲಾಗಿ, ಈ ಸಂಸ್ಥೆಗೆ ಕೊಡಗು ಎಜುಕೇಶನಲ್ ಅಕಾಡಮಿ ಎಂದು ನಾಮಕರಣ ಮಾಡಲಾಯಿತು.

ಈ ಸಂಸ್ಥೆಗೆ ಆಡಳಿತ ಮಂಡಳಿ ಹಾಗೂ ಸಲಹಾ ಮಂಡಳಿಯನ್ನು ರಚಿಸಲಾಗಿ ಡಾ|| ಗುಡ್ಡೇರ ಚಿನ್ನಯ್ಯನವರನ್ನು ಅಧ್ಯಕ್ಷರನ್ನಾಗಿ, ಶ್ರೀಮತಿ ವಸಂತಿಯವರನ್ನು ಉಪಾಧ್ಯಕ್ಷರನ್ನಾಗಿ, ಮೊಟ್ಟನ ರವಿಕುಮಾರ್‌ರವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ, ಕೆಟೋಳಿ ಯತೀಶ್‌ಕುಮಾರ್‌ರವರನ್ನು ಜಂಟಿ ಕಾರ್ಯದರ್ಶಿಯನ್ನಾಗಿ, ಅಲ್ಲದೆ ಕಾಳೇಯಂಡ್ರ ಮಾಚಯ್ಯನವರನ್ನು ಖಜಾಂಚಿಯನ್ನಾಗಿ ನೇಮಿಸಿಲಾಯಿತು. ನಂತರ ಈ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗೆ ದುಡಿಯಬಹುದಾದ, ಭರವಸೆಯ ನಿರ್ದೇಶಕರುಗಳಾಗಿ ನಂಗಾರು ನಾಣಯ್ಯ, ಅಮ್ಮವ್ವನ ವಾಸು, ಕುದುಪಜೆ ಗಣಪತಿ, ಅಮೆ ಹಿಮಲಾಕ್ಷಿ, ಬಿಟ್ಟೀರ ಚೊಂದಮ್ಮ, ಚೆಟ್ಟಿಮಾಡ ಪ್ರಸಾದ್ ಪೂವಯ್ಯ, ನಂಗಾರು ನಿಂಗರಾಜು, ನಂಗಾರು ರಾಮಚಂದ್ರ, ಪಾಣತ್ತಲೆ ಪದ್ಮನಾಭ, ಹಾಗೂ ಬೈತಡ್ಕ ಜೋಯಪ್ಪನವರು ನೇಮಕಗೊಂಡಿರುತ್ತಾರೆ. ಹಾಗೆಯೇ ಜನಾಂಗದ ಹಿರಿಯರು, ಯುವಕರ ಪ್ರೋತ್ಸಾಹಿಗಳು, ಬುದ್ಧಿಜೀವಿಗಳು ಆದ ಕಾವೇರಮ್ಮನ ಡಾ|| ಬೋಜಪ್ಪನವರು, ಕೋಳಿಬೈಲು ಬೆಳ್ಯಪ್ಪನವರು I.A.S., ತೋಟಂಬೈಲು ಬೆಳ್ಯಪ್ಪ, ಮಾವಾಜಿ ಬಾಲಕೃಷ್ಣ, ಸಿರಕಜೆ ಚಿಣ್ಣಪ್ಪ, ಹಾಗೂ ಚೀಯಂಡಿ ಬಸಪ್ಪನವರುಗಳು ಸಲಹಾ ಸಮಿತಿಯ ಸದಸ್ಯರುಗಳಾಗಿ ನೇಮಕಗೊಂಡಿರುತ್ತಾರೆ.

ಬೆಂಗಳೂರಿನ ಜನಾಂಗದ ಬುದ್ಧಿಜೀವಿಗಳ ಕೂಟ ಮುಂದೆ ಜನಾಂಗದ ಆತ್ಮಸ್ಥೈರ್ಯವನ್ನು ಹೆಚ್ಚಿಸುವುದಲ್ಲದೆ, ಜನಾಂಗದ ಬೆನ್ನೆಲುಬು ಆಗಲಿದೆ ಎಂಬ ಆತ್ಮ ವಿಶ್ವಾಸ ನನಗಿದೆ.

"ಕೊಡಗು ಎಜುಕೇಶನಲ್ ಅಕಾಡಮಿ (ರಿ)" ಯಡಿಕೇರಿಯಲ್ಲಿ "ಕಾವೇರಿ ನೇಶನಲ್ ಪಬ್ಲಿಕ್ ಸ್ಕೂಲ್" ಎಂಬ ಶಾಲೆಯನ್ನು ಇದೇ ಜೂನ್ ತಿಂಗಳಿಂದ ಪ್ರಾರಂಭಿಸಲಾಗುವುದಲ್ಲದೆ, ಜನಾಂಗದಿಂದ ಹೆಚ್ಚಿನ ಸಹಕಾರವನ್ನು ನಿರೀಕ್ಷಿಸುತ್ತದೆ. ಈಗಾಗಲೇ ಹಲವರು ಮುಂದೆ ಬಂದು ಸದಸ್ಯರಾಗಿ ಸಹಕಾರ ನೀಡಿರುವು ದಲ್ಲದೆ, ಭರವಸೆಯನ್ನು ಸಹ ಕೊಟ್ಟಿರುತ್ತಾರೆ. ಜನಾಂಗದ ಪ್ರತಿಯೊಂದು ಸಂಸಾರದವರು ಈ ಸಂಸ್ಥೆಯ ಸದಸ್ಯರಾಗಿ ಸಹಕರಿಸಬೇಕೆಂದು ಆಡಳಿತ ಮಂಡಳಿ ಜನಾಂಗದಲ್ಲಿ ಕಳಕಳಿಯ ಮನವಿಯನ್ನು ಮಾಡುತ್ತದೆ. ಹೆಚ್ಚಿನ ವಿವರಗಳೇನಾದರೂ ಬಯಸಿದಲ್ಲಿ, ಅಥವಾ ಸಂಪರ್ಕಿಸಬೇಕಾದಲ್ಲಿ ಕೊಡಗು ಗೌಡ ಸಮಾಜ ಬೆಂಗಳೂರಿನ ದೂರವಾಣಿ ಸಂಖ್ಯೆ : 3539555 ಯನ್ನು ಉಪಯೋಗಿಸಬಹುದು.

— ತಡಿಯಪ್ಪನ ಕುಮಾರಜಯ, ಮೈಸೂರು

ಮಾನವನಿಗೆ ಅವಶ್ಯಕವಾದ ಅಮೃತ ನುಡಿಗಳು

ಹಣವು ಬರುವಾಗ ಎರಡುಕಾಲಿನಿಂದ ಬರುತ್ತದೆ ಹೋಗುವಾಗ ನೂರು ಕಾಲುಗಳಿಂದ ಓಡುತ್ತದೆ.

ಪ್ರಪಂಚವು ಸತ್ಯ ಆಸತ್ಯಗಳೆಂಬ ಸಕ್ಕರೆ ಮರಳುಗಳ ಒಂದು ಮಿಶ್ರಣ. ಇದು ಒಂದು ಇರುವೆಯಂತೆ. ಇಲ್ಲಿ ಸಕ್ಕರೆಯನ್ನು ಮಾತ್ರ ತೆಗೆದು ಕೊಳ್ಳಬೇಕು.

— ಮುಕ್ಕಾಟಿ ಮದು ಪೂಣಚ್ಚ, ಹೊಸ್ಕೇರಿ

ತಮಿಳುನಾಡಿನ ವ್ಯಕ್ತಿಯಿಂದ "ಕೊಡಗು ಎಜುಕೇಶನಲ್ ಅಕಾಡಮಿ" ಬೆಂಗಳೂರಿಗೆ 1,17,000/- ರೂ. ಗಳ ಸ್ಕಾಲರ್‌ಷಿಪ್ ಕೊಡುಗೆ

ಸಾಮಾನ್ಯವಾಗಿ ಒಂದು ಜನಾಂಗದ ಅಭಿವೃದ್ಧಿಯನ್ನು ಬಯಸಿ ಆ ಜನಾಂಗದ ದಾನಿಗಳೇ ಕೊಡುಗೆ ನೀಡುವುದು ಸಹಜ, ಸತ್ಯವೂ ಕೂಡ. ಬೇರೆ ಜನಾಂಗದ ಸಂಸ್ಥೆಗಳಿಗೆ ದೇಣಿಗೆಯಾಗಲಿ, ಸಹಾಯವನ್ನಾಗಲಿ, ಇತರೆ ಜನಾಂಗದವರು ನೀಡುವುದು ಸಾಮಾನ್ಯವಾಗಿ ವಿರಳ. ಈ ಅಪರೂಪದ ವ್ಯಕ್ತಿಯೆ ತಮಿಳುನಾಡಿನಲ್ಲಿ ಜನಿಸಿದ ಅಮೇರಿಕಾದಲ್ಲಿ ವಾಸವಿರುವ ಡಾ|| ಗೋವಿಂದ ಸ್ವಾಮಿ ನಾಗರಾಜನ್. ಇವರು ಅಮೇರಿಕಾದ ಟೆನ್ನೆಸ್ಸಿ ರಾಜ್ಯ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಫ್ ಫಿಜಿಕ್ಸ್ ಆಗಿರುತ್ತಾರೆ. ಈ ವ್ಯಕ್ತಿ ತನ್ನ ಧರ್ಮಪತ್ನಿ ಶ್ರೀಮತಿ ರತ್ನನಾಗರಾಜನ್ ಸ್ಕಾಲರ್‌ಷಿಪ್ ಟ್ರಸ್ಟನ್ನು ರಚಿಸಲು ಅಮೇರಿಕಾದಿಂದ 2,500 ಡಾಲರ್ ಅಂದರೆ ನಮ್ಮ ದೇಶದ ಬೆಲೆಯ 1,17,000/- (ಒಂದು ಲಕ್ಷದ ಹದಿನೇಳು ಸಾವಿರ) ರೂ. ಗಳ ಚೆಕ್ಕನ್ನು ಕಳುಹಿಸಿರುವುದಲ್ಲದೆ ಈ ಹಣದ ಖಾತೆಯನ್ನು ತೆರೆದು ಅದರಿಂದ ಬರುವ ಬಡ್ಡಿ ಹಣದಲ್ಲಿ ಬಡಮಕ್ಕಳಿಗೆ, ಅದರಲ್ಲಿಯೂ ಉನ್ನತ ಶ್ರೇಣಿಯಲ್ಲಿ ಓದುವವರಿಗೆ ಅವರ ವಾರ್ಷಿಕ ಬೋಧನಾ ಶುಲ್ಕ, ಪಠ್ಯಪುಸ್ತಕ, ಹಾಗೂ ಇನ್ನಿತರ ಶುಲ್ಕಗಳು ಮೀರದಂತೆ ಸ್ಕಾಲರ್‌ಷಿಪ್ ನೀಡಲಾಗುವುದು, ಹಾಗೆಯೇ ಕಾಲಕಾಲಕ್ಕೆ ಸ್ಕಾಲರ್ ಷಿಪ್ ಹಣವನ್ನು ಹೆಚ್ಚಿಸುತ್ತೇನೆ ಎಂಬ ಭರವಸೆಯನ್ನು ಡಾ. ಗೋವಿಂದಸ್ವಾಮಿ ನಾಗರಾಜನ್ ನೀಡಿರುತ್ತಾರೆ. ಈ ಹಣವನ್ನು ಕೊಡಗು ಎಜುಕೇಶನಲ್ ಅಕಾಡಮಿ (ರಿ.) ಅಸ್ತಿತ್ವದಲ್ಲಿ ಇರುವವರೆಗೆ ಇದರ ಪ್ರಯೋಜನವನ್ನು ಪಡೆಯಬಹುದಾಗಿದೆಯಲ್ಲದೆ ಕಾರಣಾಂತರದಿಂದ ಈ ಸಂಸ್ಥೆ ನಿರ್ಜೀವಗೊಂಡಲ್ಲಿ 1,17,000/- (ಒಂದು ಲಕ್ಷದ ಹದಿನೇಳು ಸಾವಿರ) ರೂ.ಗಳನ್ನು ಶ್ರೀಮತಿ ರತ್ನ ನಾಗರಾಜನ್‌ರವರಿಗೆ ಹಿಂತಿರುಗಿಸುವ ಷರತ್ತಿನೊಂದಿಗೆ ಕೊಡುಗೆಯಾಗಿ ನೀಡಿರುತ್ತಾರೆ.

ಈ ಮಾನವ ಜೀವಿಯ ಮನಗೆದ್ದು ಈ ಸಂಸ್ಥೆಗೆ ಕೊಡುಗೆ ತಂದು ಕೊಟ್ಟವರೆ, ಈ ಸಂಸ್ಥೆಯ ಸಂಸ್ಥಾಪಕರಲ್ಲಿ ಒಬ್ಬರಾದ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮೊಟ್ಟನ ರವಿಕುಮಾರ್‌ರವರು. ಇದೇ ಬಗೆಯ ಕೊಡುಗೆಗಳನ್ನು ಇನ್ನೂ ಹಲವು ಪಡೆಯುವ ವಿಶ್ವಾಸವನ್ನು ಸಹ ರವಿಕುಮಾರ್ ಹೊಂದಿರುತ್ತಾರೆ. ಇವರಿಗೆ ಜನಾಂಗ ಅಭಿನಂದನೆ ಸಲ್ಲಿಸುವುದರ ಜೊತೆಯಲ್ಲಿಯೇ ಡಾ|| ಗೋವಿಂದಸ್ವಾಮಿ ನಾಗರಾಜನ್‌ರವರಿಗೂ ಸಲ್ಲಿಸಲು ಮರೆಯಬಾರದು. ನಮ್ಮ ಜನಾಂಗದ ಉಧಾರಿಗಳೂ, ಶ್ರೀಮಂತರು, ಹಾಗೂ ವಿಶಾಲ ಮನೋಭಾವದವರು ಈ ರೀತಿಯ ಕೊಡುಗೆಗಳನ್ನು ನೀಡುವರೆಂಬ ಪರಮ ನಂಬುಗೆ ನನ್ನದಾಗಿದೆ.

— ತಡಿಯಪ್ಪನ ಕುಮಾರಜಯ, ಮೈಸೂರು.

ಮೈಕ್ರೋಸ್ಕೋಪ್‌ನಲ್ಲಿ ಅತಿ ಸಣ್ಣ ಪದಾರ್ಥಗಳು ದೊಡ್ಡದಾಗಿ ಕಾಣಿಸುವುದು ಹೇಗೆ ?

ಬರಿ ಕಣ್ಣಿಗೆ ಕಾಣದಂತಹ ಅತಿ ಸೂಕ್ಷ್ಮ ಪದಾರ್ಥಗಳನ್ನು ನಾವು ಮೈಕ್ರೋಸ್ಕೋಪ್ ಮೂಲಕ ನೋಡುತ್ತೇವೆ. ಬ್ಯಾಕ್ಟೀರಿಯಾ, ಅತಿ ಸಣ್ಣ ಜೀವಿಗಳ ಕೋಶಗಳು, ಹಾಗೂ ಇತರ ಅನೇಕ ಸೂಕ್ಷ್ಮ ಜೀವಿಗಳನ್ನು ನಾವು ಮೈಕ್ರೋಸ್ಕೋಪ್ ಮೂಲಕ ದೊಡ್ಡ ಗಾತ್ರದಲ್ಲಿ ನೋಡಬಹುದು, ಅವುಗಳ ರಚನೆ ಹೇಗಿದೆ ಎಂಬುದನ್ನು ಸಹ ಚೆನ್ನಾಗಿ ತಿಳಿಯಬಹುದು.

ಮೈಕ್ರೋಸ್ಕೋಪ್‌ನಲ್ಲಿ ಎರಡು ಕಾನ್‌ವೆಕ್ಸ್ ಲೆನ್ಸ್‌ಗಳಿರುತ್ತವೆ. ಇವೆರಡೂ ಲೆನ್ಸ್‌ಗಳನ್ನು ಕೊಳವೆಯೊಂದರ ಎರಡೂ ತುದಿಗಳಲ್ಲಿ ಅಳವಡಿಸಲಾಗಿರುತ್ತದೆ. ಈ ಲೆನ್ಸ್‌ಗಳ ಕೇಂದ್ರಕ್ಕೂ ಮತ್ತು ನಾಭಿಗೂ ಇರುವ ದೂರ ಬಹಳ ಕಡಿಮೆಯಾಗಿರುತ್ತದೆ. ವಸ್ತುವಿನತ್ತ ಇರುವ ಲೆನ್ಸ್‌ಗೆ ಅಬ್ಜೆಕ್ಟೀವ್ ಲೆನ್ಸ್ (Objective Lense) ಎನ್ನುವರು. ಈ ಲೆನ್ಸ್‌ನ ಕೇಂದ್ರಕ್ಕೂ ಮತ್ತು ನಾಭಿಗೂ ಅತಿ ಕಡಿಮೆ ದೂರ ಇರುತ್ತದೆ. ಇನ್ನೊಂದು ಲೆನ್ಸ್, ನಾವು ವಸ್ತುವನ್ನು ನೋಡುವುದಕ್ಕಾಗಿ ಇರುತ್ತದೆ. ಇದಕ್ಕೆ ಐ ಲೆನ್ಸ್ (Eye Lense) ಎನ್ನುವರು. ಇದರ ಪೋಕಲ್ ಲೆಂಥ್ ಬಹಳ ಜಾಸ್ತಿ ಇರುತ್ತದೆ. ನಾವು ನೋಡಬೇಕಾದ ವಸ್ತುವನ್ನು, ನಾವು Objective Lense ಬಳಿ ಇರುವ ಪ್ಲಾಟ್‌ಫಾರಂನ ಮೇಲೆ 'ಎ' ಇಡುತ್ತೇವೆ. ಈ ಲೆನ್ಸ್ ವಸ್ತುವಿನ ದೊಡ್ಡ ಗಾತ್ರದ ನಿಜವಾದ ಬಿಂಬವನ್ನು 'ಬಿ' ಯಲ್ಲಿ ಉಂಟುಮಾಡುತ್ತದೆ. 'ಬಿ' ಯಲ್ಲಿ ಮೂಡಿದ ಈ ಬಿಂಬ ಐ ಲೆನ್ಸ್‌ನಿಂದ (Eye Lense) ನೋಡುವುದಕ್ಕೆ ಒಂದು ವಸ್ತುವಾಗುತ್ತದೆ. ಈ ರೀತಿ ಅತಿ ಸಣ್ಣ ವಸ್ತುಗಳು ಸಹ ಮೈಕ್ರೋಸ್ಕೋಪ್‌ನಲ್ಲಿ ಅತಿ ದೊಡ್ಡದಾಗಿ ಕಾಣಿಸುತ್ತವೆ. ಆ ವಸ್ತುಗಳ ಸೂಕ್ತ ರಚನೆಗಳನ್ನು ಸಹ ನಾವು ಅತ್ಯಂತ ಸ್ಪಷ್ಟವಾಗಿ ನೋಡಬಹುದು.

ಮೈಕ್ರೋಸ್ಕೋಪ್ ಒಂದು ವಸ್ತುವಿನ ಗಾತ್ರವನ್ನು ಅದರ ನಿಜವಾದ ಗಾತ್ರದ 1000 ಪಟ್ಟು ಹೆಚ್ಚು ದೊಡ್ಡದು ಮಾಡಿ ತೋರಿಸುತ್ತದೆ. ಈ ಉಪಕರಣ ಬೆಳಕನ್ನು ಬಳಸಿಕೊಂಡು, ವಸ್ತುವಿನ ದೊಡ್ಡ ಗಾತ್ರದ ಬಿಂಬವನ್ನು ನಮಗೆ ನೀಡುವುದರಿಂದ, ಇದನ್ನು ನಾವು ಆಪ್ಟಿಕಲ್ ಮೈಕ್ರೋಸ್ಕೋಪ್ (Optical Microscope) ಎಂದು ಕರೆಯುತ್ತೇವೆ. ಅತಿ ಸೂಕ್ಷ್ಮಾಣುಜೀವಿಗಳ ಜಗತ್ತಿನ ಬಗ್ಗೆ ಅಧ್ಯಯನ ನಡೆಸುವುದಕ್ಕಾಗಿ ಇಂದು ನಾವು ಅನೇಕ ಬಗೆಯ ಆಪ್ಟಿಕಲ್ ಮೈಕ್ರೋಸ್ಕೋಪ್‌ಗಳನ್ನು ಕಾಣುತ್ತೇವೆ.

— ಸಂಗ್ರಹ

ಉತ್ತರ ವಾಯುವ್ಯದ ದ್ವಾರ — ನಿರಂತರ ಚಂಚಲತೆಯ ವ್ಯವಹಾರ

ಕುಯ್ಯಮುಡಿ ಯುವಕ ಸಂಘದ ಮೂರನೇ ವರ್ಷದ ವಾರ್ಷಿಕೋತ್ಸವ



ಭಾಗಮಂಡಲ ಸನಿಹದ ಸಣ್ಣಪುಲಿಕೋಟು ಗ್ರಾಮದ ಕುಯ್ಯಮುಡಿ ಮನೆತನದವರ ಕುಯ್ಯಮುಡಿ ಯುವಕ ಸಂಘ (ರಿ.) ದ ವಾರ್ಷಿಕೋತ್ಸವವು ಏಪ್ರಿಲ್ 15 ರಂದು ಕುಯ್ಯಮುಡಿ ಐನ್ ಮನೆಯ ಆವರಣದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಮೊಟ್ಟನ ಅಮುಲು ದೇವಯ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಸದಸ್ಯರುಗಳಾದ ಹೊಸೂರು ಸತೀಶ್ ಕುಮಾರ್‌ನವರು ಆಗಮಿಸಿ, ಮಾತನಾಡುತ್ತ ಯುವಕರು ತಮ್ಮ ಅಭಿವೃದ್ಧಿಯನ್ನು ತಾವೇ ರೂಪಿಸಿಕೊಳ್ಳಬೇಕು. ಅಲ್ಲದೆ ಯುವಕರು ಬರೀ ಕ್ರೀಡೆಗೆ ಮಾತ್ರ ಮಹತ್ವ ನೀಡದೆ ಪ್ರತಿದಿನ ಸಂಘದ ಆವರಣದಲ್ಲಿ ನೃತ್ಯ ಜನಪದ ಹಾಡುಗಾರಿಕೆ, ಚಿತ್ರಕಲೆ ಇತ್ಯಾದಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಯುವಕರಿಂದ ಒಂದು ಗ್ರಾಮ ಅಭಿವೃದ್ಧಿಯಾದರೆ ಒಂದು ಜಿಲ್ಲೆ ಅಭಿವದ್ಧಿಯಾಗುತ್ತದೆ. ಒಂದು ಜಿಲ್ಲೆ ಅಭಿವೃದ್ಧಿಯಾದರೆ ಒಂದು ರಾಜ್ಯ ಅಭಿವೃದ್ಧಿಯಾಗುತ್ತದೆ. ಒಂದು ರಾಜ್ಯ ಅಭಿವೃದ್ಧಿಯಾದರೆ ಆಗ ದೇಶ ಅಭಿವೃದ್ಧಿಯಾಗುತ್ತದೆ. ಯುವಕ ಯುತಿಯರು ಸಮಾಜ ಸೇವೆಗೆ ಹೆಚ್ಚಿನ ಒತ್ತು ಕೊಟ್ಟು ಸಮಾಜದ ಕರೆಗೆ ಸ್ಪಂದಿಸಬೇಕು ಎಂದು ಅಭಿಪ್ರಾಯಿಸಿದರು.

ಇನ್ನೋರ್ವ ಅತಿಥಿ ಭಾಗಮಂಡಲ ವಲಯದ ಜಿಲ್ಲಾ ಯುವ ಒಕ್ಕೂಟದ ನಿರ್ದೇಶಕರುಗಳಾದ ಮುಕ್ಕಾಟಿ ಗಣಪತಿ (ಗಣೇಶ್) ಮಾತನಾಡುತ್ತಾ ಯುವಕರು ಯಾವ ರೀತಿ ಮುಂದೆ ನಡೆಯಲು ಹೆಜ್ಜೆ ಇಡಬೇಕು, ಯುವಕರು ಯಾವ ಯಾವ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂಬುದರ ಬಗ್ಗೆ ಮಾಹಿತಿ ನೀಡಿದರು. ಅಲ್ಲದೆ ಭಾಗಮಂಡಲದ ವ್ಯವಸಾಯ ಸೇವಾ ಬ್ಯಾಂಕ್‌ನ ಸದಸ್ಯರು ಮತ್ತು ಪಂಚಾಯತ್ ಸದಸ್ಯರುಗಳಾದ ಕುಯ್ಯಮುಡಿ ಸೀತಾರಾಮನವರು ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಸಭೆಯಲ್ಲಿ ಕುಯ್ಯಮುಡಿ ಸೋಮಪ್ಪ, ಚಂಗಪ್ಪ, ಮಾಯಪ್ಪ, ಕರ್ನೇಯ್ಯನ ಜಯನಂದ ಇವರುಗಳು ಸಬೆಯಲ್ಲಿ ಉಪಸ್ಥಿತರಿದ್ದರು.

ಮೊದಲಿಗೆ ಕ್ರೀಡಾ ಉದ್ಘಾಟನೆಯನ್ನು ಕೆ.ಎನ್. ಸೀತಾರಾಮರವರು ಮಾಡಿದರು

ಮೊದಲಿಗೆ. ದೀಪಿಕರವರು ಪ್ರಾರ್ಥಿಸಿದರೆ ಸಂಘದ ಕಾರ್ಯದರ್ಶಿ ಕೀರ್ತಿಕುಮಾರನವರು ವರದಿ ವಾಚಿಸಿದರು. ಕಾವೇರಿ ಪದವಿ ಪೂರ್ವ ವಿದ್ಯಾಲಯದ ಉಪನ್ಯಾಸಕರುಗಳಾದ ಕುಯ್ಯಮುಡಿ ಆರ್. ಪೂಣಚ್ಚರವರು ನಿರೂಪಿಸಿ ಸ್ವಾಗತಿಸಿ ವಂದಿಸಿದರು.

— ಕುಯ್ಯಮುಡಿ ಸುನೀಲ್, ಹೊಸ್ಕೇರಿ

ಕವನ : ನೀತಿಯ ಮಾತುಗಳು

ಗುರುಗಳನೆಂದು ಮರೆಯಲು ಬೇಡ
ಭಂಡರ ಸಂಗವ ಮಾಡಲು ಬೇಡ
ಸ್ನೇಹವನೆಂದೂ ಮರೆಯಲು ಬೇಡ

ಮೂರ್ಕನ ಸಂಗಡವಾದಿಸಬೇಡ
ಮಾತಿಗೆ ತಪ್ಪಿ ನಡೆಯಲೂ ಬೇಡ
ಭಾಗವ ಮಾಡದೇ ತಿನ್ನಲೂ ಬೇಡ

ರೋಗವನ್ನು ಅರಿಯದೇ ಔಷಧಿ ಬೇಡ
ರಾಗವನ್ನು ಅರಿಯದೇ ಹಾಡಲೂ ಬೇಡ
ವಂಚನೆ ಜೀವನ ನಿನಗದು ಬೇಡ

ಸುಳ್ಳನ್ನು ಹೇಳಿ ಜೀವಿಸಲೂ ಬೇಡ
ಹೆತ್ತಕರುಳನು ಮರೆಯಲು ಬೇಡ
ಜಗಳಕ್ಕೆ ನಿಂತಲ್ಲಿ ಹೆದರಲೂ ಬೇಡ

ಬಡವರನೆಂದೂ ಹೀಯ್ಯಾಳಿಸಬೇಡ
ಮನೆಯವರನೆಂದೂ ದ್ವೇಷಿಸಬೇಡ
ಹೇಳಿದ ಕೆಲಸವ ಮರೆಯಲು ಬೇಡ
ಧರ್ಮಕ್ಕೆ ತಪ್ಪಿ ಹೋಗಲೂ ಬೇಡ.

— ರಚನೆ : ಹುಲಿಮನೆ ಸಹದೇವ, ಮದೆ ಗ್ರಾಮ.

ಕಣ್ಣು

ನನ್ನವಳ ಕಣ್ಣೋ
ಹದ್ದಿನ ಕಣ್ಣು
ಏಕೆಂದರೆ
ತುಂಬಾ ಸೂಕ್ಷ್ಮ
ಸೀರೆ ಆಯುವುದರಲ್ಲಿ
ಅವಳ ಕಣ್ಣು

— ರಚನೆ : ಕಾನಡ್ಕ ಹನೀಶ್, ಮರಗೋಡು

ಉತ್ತರದ ದ್ವಾರ ಉತ್ತಮ – ಪ್ರಗತಿಯ ರತ್ನಹಾರ

2000 ಮಿಲ್ಲೇನಿಯಂನ ರಾಷ್ಟ್ರಪತಿಗಳ ಪೋಲಿಸ್ ಚಿನ್ನದ ಪದಕ ವಿಜೇತ ಅರ್ವತ್ತೊಕ್ಲುವಿನ ಶ್ರೀ ಪಟ್ಟಡ ಕೃಷ್ಣಪ್ಪ ಕುಶಾಲಪ್ಪ.

ಶ್ರೀಯುತರು ಮಡಿಕೇರಿ ತಾಲೂಕು ಅಪ್ಪಂಗಳ ಸಮೀಪ ಅರ್ವತ್ತೊಕ್ಲು ನಿವಾಸಿ ದಿವಂಗತ ಕೃಷ್ಣಪ್ಪ ಮತ್ತು ಗಂಗಮ್ಮ ದಂಪತಿಗಳಿಗೆ 1951ನೆಯ ಜೂನ್ 10ರಲ್ಲಿ ದ್ವಿತೀಯ ಪುತ್ರರಾಗಿ ಜನ್ಮ ಪಡೆದರು. ಪ್ರೌಢವಿದ್ಯಾಭ್ಯಾಸವನ್ನು ಮಡಿಕೇರಿ ಸೆಂಟ್‌ಮೈಕೇಲ್ ಹಾಗೂ ಡಿಗ್ರಿಯನ್ನು ಆಗಿನ ಸರಕಾರಿ ಹಿರಿಯ ಕಾಲೇಜಿನಿಂದ 1974ರಲ್ಲಿ ಪಡೆದರು. ಅವರು ತನ್ನ ಬಿ.ಇಡಿ ಡಿಗ್ರಿಯನ್ನು ವಿರಾಜಪೇಟೆ ಸರ್ವೋದಯ ಕಾಲೇಜಿನಿಂದ 1975ರಲ್ಲಿ ಪಡೆದು ತಂದೆ ತಾಯಂದಿರಿಗೆ ಹೆಚ್ಚಿನ ಜವಾಬ್ದಾರಿಕೆಯ ಪುತ್ರರೆನಿಸಿಕೊಳ್ಳಲು ಯಾವುದಾದರೂ ಸರಕಾರಿ ಉದ್ಯೋಗಕ್ಕೆ ಸೇರಿಕೊಳ್ಳುವುದೆಂದು ಸಕಲ ಪ್ರಯತ್ನ ಪಟ್ಟರೂ ಬೇರೆ ದಿಕ್ಕುತೋಚದೆ ಕೇಂದ್ರೀಯ ಔದ್ಯೋಗಿಕ ಸುರಕ್ಷಾ ಪಡೆಯಲ್ಲಿ ಮಾಮೂಲಿ ಕಾನ್‌ಸ್ಟೇಬಲ್ ಆಗಿ 1-4-77ರಲ್ಲಿ ಸೇರ್ಪಡೆಗೊಂಡರು. ಆ ಹುದ್ದೆಯು ಅವರ ವಿದ್ಯಾಮಟ್ಟಕ್ಕೆ ಸರಿ ಸಮವಾಗಿಲ್ಲದಿದ್ದರೂ ಧೃತಿಗೆಡದೆ ತಾನು ಒಂದಾದರೊಂದು ದಿನ ಇದೇ ಪಡೆಯಲ್ಲಿ ಉತ್ತಮ ಮಟ್ಟಕ್ಕೇರುವ ಛಲವನ್ನು ಕಟ್ಟಿದರು.

ಶ್ರೀ ಕುಶಾಲಪ್ಪನವರು ಕಾನ್ಸ್ಟೇಬಲರಾಗಿ ಸೇರ್ಪಡೆಯಾಗಿ ತನ್ನ ಮೂಲ ತರಬೇತಿಯನ್ನು ಬೆಂಗಳೂರಿನ ಗಡಿರಕ್ಷಣಾ ಪಡೆಯ ತರಬೇತು ಕೇಂದ್ರ, ಯಲಹಂಕದಲ್ಲಿ ಮುಗಿಸಿದ ಅವರಿಗೆ ಪ್ರಥಮ ಪೋಸ್ಟಿಂಗ್ ಬಿಹಾರಿನ ರಾಂಚಿಗೆ ಫೆಬ್ರವರಿ 1980ರಲ್ಲಿ ಆಯಿತು. ಅಲ್ಲಿ ಸೇವೆಸಲ್ಲಿಸುತ್ತಿದ್ದಾಗ ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ಕ್ಲಾರ್ಕ್ ಹುದ್ದೆಯ ಪರೀಕ್ಷೆಯಲ್ಲಿ ಕುಳಿತು ತೇರ್ಗಡೆಯಾಗಿ 1981ರಲ್ಲಿ ವಿಶಾಖಪಟ್ಟಕ್ಕೆ ವರ್ಗಾವಣೆಯಾಗಿ, ಸಬ್‌ಇನ್ಸ್‌ಪೆಕ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಮತ್ತು ಹುದ್ದೆಗೆ ಆಯ್ಕೆಯಾಗಿ ಹರಿಯಾಣದ ಮಧುಬನ ಪೋಲೀಸ್ ತರಬೇತು ಕಾಲೇಜಿನಲ್ಲಿ ತರಬೇತು ಮುಗಿಸಿ ಬಿಹಾರಿನ ಜಾರಿಯಾಕ್ಕೆ ವರ್ಗಾವಣೆ ಅಂದರೆ ಅಲ್ಲಿನ BCCLನಲ್ಲಿ ಮಾರ್ಚ್ 1983ರಿಂದ ಜುಲೈ 1987ರ ವರೆಗೆ ನಿಷ್ಠೆಯಿಂದ ಸೇವೆ ಸಲ್ಲಿಸಿ ಮೆಚ್ಚುಗೆಗೆ ಪಾತ್ರರಾದರು. ಅನಂತರ 1987ರಲ್ಲಿ ಮದ್ರಾಸಿನ ONCGಗೆ ವರ್ಗಾವಣೆ ಆಗಿ ಬಂದು 1988ರಲ್ಲಿ ಇನ್ಸ್‌ಪೆಕ್ಟರ್ ಹುದ್ದೆಗೆ ಬಡ್ತಿಹೊಂದಿ, MRL ಮದ್ರಾಸಿಗೆ ಹೋಗಿ ಅಲ್ಲಿ ಜುಲೈ 1990ರ ವರೆಗೆ ಸೇವೆ ಸಲ್ಲಿಸಿದರು.

ನಿಷ್ಠಾವಂತ ಸೇವೆಯ ಹಿನ್ನೆಲೆಯು ಇನ್ನೂ ಹೆಚ್ಚಿನ ಜವಾಬ್ದಾರಿಕೆಯ ಕೇಂದ್ರಬಿಂದುಗಳಿಗೆ ವರ್ಗವಾಗಿ ಹೋಗುವಂತೆ ಮಾಡುತ್ತಾ ಬಂತು. 1990ರಲ್ಲಿ ಮಂಗಳೂರಿನ NMPTಗೆ ವರ್ಗಾವಣೆ ಆಗಿ ಹೆಚ್ಚಿನ ಜವಾಬ್ದಾರಿಕೆಯು ತನ್ನ ಹೆಗಲ ಮೇಲೆ ಬಿತ್ತು. ಡಿಸಂಬರ್ 94ರ ವರೆಗೆ ಅಲ್ಲಿ ಸೇವೆ ಸಲ್ಲಿಸಿ, ಮದ್ರಾಸಿನ MPTಗೆ ಪುನಃ ವರ್ಗಾವಣೆಯಾಯಿತು. ಮೇ 1988ರ ತನಕ ಅಲ್ಲಿ ದುಡಿದು ಅದೇ ವರ್ಷ ಈಗಿನ ಕಾರ್ಯಕ್ಷೇತ್ರವಾದ ಮುಂಬೈನ MDLಗೆ ವರ್ಗವಾಗಿ ಬಂದು ಇನ್ನೂ ಹೆಚ್ಚಿನ ಕಾರ್ಯತತ್ಪರತೆಯ ದುಡಿಮೆ ಇವರ ಪಾಲಿಗೆ ಬಂತು. ಅದೇ ಸೇವೆಯು ತನ್ನನ್ನು ಗುರುತಿಸಿ ಕೊಳ್ಳುವಂತೆ ಎಡೆಮಾಡಿಕೊಟ್ಟಿತು. ಹೀಗೆ ಅವರ ನಾನಾ ಕಡೆಯ ನಿಷ್ಠಾವಂತ ಸೇವೆಯನ್ನು ಪರಿಗಣಿಸಿ ಅವರ ಕೇಂದ್ರ ಔದ್ಯೋಗಿಕಾ ಸುರಕ್ಷಾ ಪಡೆಯ ಡೈರೆಕ್ಟರ್ ಜನರಲ್ ಅವರು 1997ರಲ್ಲಿ ಶ್ರೀಯುತರಿಗೆ ಪ್ರಶಂಸಾ ಪದಕವಿತ್ತು ಗೌರವಿಸಿದರು.

ಗೌರವಕ್ಕೆ ಪಾತ್ರರಾದ ಇವರ ಕಳೆದ 24ವರ್ಷಗಳ ದೀರ್ಘ ಕಾಲ ಕೇಂದ್ರ ಔದ್ಯೋಗಿಕ ಸುರಕ್ಷಾಪಡೆಯಲ್ಲಿ ಸಲ್ಲಿಸಿರುವ ಗಣನೀಯ ಸೇವೆ ಪರಿಗಣಿಸಿ 2000ರ ಪ್ರಸಕ್ತಸಾಲಿನ ರಾಷ್ಟ್ರಪತಿ ಪದಕ ಪ್ರಕಟಿಸಲಾಯಿತು. ಆಗಸ್ಟ್ 15ರಂದು ಮುಂಬೈನ ರಾಷ್ಟ್ರೀಯ ಫರ್ಟಿಲೈಸರ್ಸ್ ಕಂಪನಿಯಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ **ಪೋಲೀಸ್ ಮಹಾನಿರ್ದೇಶಕಿ ಶ್ರೀಮತಿ ಕಾಂಚನಾ ಭಟ್ಟಾಚಾರ್ಯ** ಅವರು ರಾಷ್ಟ್ರಪತಿಗಳ ಪರವಾಗಿ ಈ ಪ್ರಶಸ್ತಿಯನ್ನು ಶ್ರೀ ಕುಶಾಲಪ್ಪನವರಿಗೆ ನೀಡಿ ಗೌರವಿಸಿದರು.

ರಾಷ್ಟ್ರದ ಅತ್ಯುತ್ತಮ ಮಟ್ಟದ ಗೌರವ ಪಡೆದಿರುವ ಪೋಲೀಸ್ ಇನ್ಸ್‌ಪೆಕ್ಟರ್ ಪಿ. ಕೆ. ಕುಶಾಲಪ್ಪನವರು 1982ರಲ್ಲಿ ಪಾಲೂರು ನಿವಾಸಿ ಬೈತಡ್ಕ ಶ್ರೀಮತಿ ಮತ್ತು ಶ್ರೀ ಅಪ್ಪಣ್ಣ, ಗಂಗಮ್ಮ ದಂಪತಿಗಳ 3ನೇ ಪುತ್ರಿ ನಾಗವೇಣಿ (ರಾಣಿ) ಯವರನ್ನು ವಿವಾಹವಾಗಿ, ಭವ್ಯಾ, ದಿವ್ಯಾ ಮತ್ತು ವಿದ್ಯಾ ಎಂಬ ಮುದ್ದಿನ ಮೂವರು ಸುಪುತ್ರಿಯವರನ್ನು ಪಡೆದಿರುತ್ತಾರೆ. ಪುತ್ರಿಯರು ಕ್ರಮವಾಗಿ ಕೇಂದ್ರಿಯ ವಿದ್ಯಾಲಯ ಮಾನ್‌ಖುರ್ದ್, ಮುಂಬಯಿ ಯಲ್ಲಿ ಮತ್ತು XII, X, VIII Std. ಗಳಲ್ಲಿ ಕಲಿಯುತ್ತಿದ್ದಾರೆ.

ಸಾಧಾರಣ ಒಂದು ಕೃಷಿಕ ಕುಟುಂಬದಲ್ಲಿ ಜನಿಸಿ, ತನ್ನ ಮನೆಗೆ, ಇಡೀ ಗೌಡಜನಾಂಗಕ್ಕೆ ಮಾತ್ರವಲ್ಲ ಅವರ ಕೀರ್ತಿ, ಯಶಸ್ಸು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟಕ್ಕೇರಿಸಲು ಅವರಿಗೆ ಶ್ರೀ ರಕ್ಷೆಯಾಗಿರುವ ಅವರ ನಿಷ್ಠಾವಂತ ಗುಣ, ಕಾರ್ಯನಿಷ್ಠೆ, ಪ್ರಜ್ಞಾಶೀಲತೆ, ಸಮಾಜದೊಂದಿಗಿರುವ ಅವರ ಸೌಮ್ಯತೆ ಇವುಗಳು ನಮ್ಮ ಜನಾಂಗದ ಯುವ ಪೀಳಿಗೆಗೆ ಮಾದರಿಯಾಗಿರಲಿ ಮತ್ತು ನಮ್ಮ ಕುಲಗುರು ಶ್ರೀ ವೆಂಕಟರಮಣಸ್ವಾಮಿಯು ಅವರಿಗೂ ಅವರ ಸಂಸಾರಕ್ಕೂ ಇನ್ನೂ ಹೆಚ್ಚಿನ ಆಯುರಾರೋಗ್ಯ ಸಂಪತ್ತುಗಳನ್ನು ಕರುಣಿಸಲಿ ಎಂದು ಕೊಡಗು ಸಂಗಾತಿ ಹಾರೈಸುತ್ತದೆ.


— ಬೈತಡ್ಕ ಬೆಳ್ಯಪ್ಪ, LIC, ಮಡಿಕೇರಿ

ಸೂಕ್ತಿ

ಮನೆ ಮನೆಯಲ್ಲಿ ಬೆಳಗಲಿ
ಈ ನಮ್ಮ ಕೊಡಗು ಸಂಗಾತಿ
ಅದರಲ್ಲಡಗಿದೆ ದಿವ್ಯ ಸಂಗತಿ.

— ಸಬ್ಬಂಡ್ರ ಶರತ್‌ಕುಮಾರ್, ಮಕ್ಕಂದೂರು.

ವೆನಿಲ್ಲಾ ಕೃಷಿಯ ಸಾಧಕ



ಕೇರಳದ ಉಪ್ಪಂಗಳದಿಂದ ಬೆಳ್ತಂಗಡಿ ತಾಲೂಕಿಗೆ ಬಂದ ಸುಬ್ರಹ್ಮಣ್ಯ ಭಟ್ಟರ ಸಾವಯುವ ಕೃಷಿಯ ಕೈಚಳಕ ಪ್ರಕಟವಾದದ್ದು ಅಡಿಕೆಗಿಂತ ಹೆಚ್ಚಾಗಿ ವೆನಿಲ್ಲಾ ಬೆಳೆಯಲ್ಲಿ. ಪ್ರಾಯೋಗಿಕವಾಗಿ 10ಸೆಂಟ್ಸ್ ಸ್ಥಳದಲ್ಲಿ 70ವೆನಿಲ್ಲಾ ಬಳ್ಳಿಗಳನ್ನು ನಾಟಿ ಮಾಡಿ, ಐದನೆಯ ವರ್ಷದಲ್ಲೇ ಅವರು ಪ್ರತಿ ಬುಡದಲ್ಲೂ ತಲಾ ಒಂದು ಕೆ.ಜಿ. ಹಸಿ ವೆನಿಲ್ಲಾ ಕೋಡು ಪಡೆದಿರುವುದು ಮಹತ್ಸಾಧನೆಯೆಂದು ಎಲ್ಲ ಕೃಷಿಕರೂ ಒಪ್ಪಿಕೊಂಡಿದ್ದಾರೆ. ಇದರಿಂದ ಅವರಿಗೆ 21 ಸಾವಿರ ರೂಪಾಯಿ ಆದಾಯವೂ ದಕ್ಕಿದೆ.

ವೆನಿಲ್ಲಾ ಕೃಷಿ ಬಗೆಗೆ ವ್ಯಾಪಕ ಪ್ರಚಾರ ನಡೆದಿದ್ದರೂ ಅನೇಕ ರೈತರು ಅದರತ್ತ ಆಸಕ್ತಿ ವಹಿಸಿಲ್ಲ. ಅದಕ್ಕೆ ದೇಶೀ ಮಾರುಕಟ್ಟೆ ಇಲ್ಲ:ವೆಂಬ ಕಾರಣಕ್ಕಿಂತಲೂ, ಬೆಳಗಾಗುವ ಮೊದಲು ವೆನಿಲ್ಲಾ ಹೂಗಳಿಗೆ ತಮ್ಮ ಕೈಯಿಂದಲೇ ಪರಾಗಸ್ಪರ್ಶ ಮಾಡಿಸಬೇಕಂತೆ, ಹೆಚ್ಚು ನೆರಳೂ ಆಗಬಾರದು, ಬಿಸಿಲೂ ಆಗಬಾರದು ಎಂಬ ಹವಾಮಾನದ ಭಯ ಮುಖ್ಯ ಕಾರಣಗಳು. ಇನ್ನು ರಾಸಾಯನಿಕ ಗೊಬ್ಬರ ಬಳಸಿ ಬೆಳೆಸಿದ ವೆನಿಲ್ಲಾಕ್ಕೆ ಬೇಡಿಕೆಯೇ ಇಲ್ಲವೆಂಬ ಸುದ್ದಿಯೂ ಹಬ್ಬಿದೆ.

ಪಣಕಜೆಗೆ ಸಮೀಪದ ಪಾಲು ಎಂಬಲ್ಲಿ ಹತ್ತು ಎಕರೆ ಹೊಲದಿಂದ ಜೀವನ ಸಾಗಿಸುತ್ತಿರುವ ಸುಬ್ರಹ್ಮಣ್ಯ ಭಟ್ಟರು ಹೊಲದ ತುಂಬ ಅಡಿಕೆ ಗಿಡ ಹಾಕಿ ಬೆಳ್ತಂಗಡಿ ತಾಲೂಕಿನಲ್ಲಿ ಅಡಿಕೆ ಫಸಲು ಬರಲಿಕ್ಕಿಲ್ಲ ಎಂಬ ನಂಬಿಕೆಯನ್ನು ಹುಸಿಯಾಗಿಸಿದವರು. ತೋಟಕ್ಕೆ ಕೆಮ್ಮಣ್ಣು ಹಾಕಿಸಲು ಕೂಲಿಗಳ ಸಮಸ್ಯೆಯುಂಟಾದಾಗ ಅವರು ಒಂದು ಗಾಡಿ ಮಾಡಿ ಅದರಲ್ಲಿ ತುಂಬಿಸಿದ ಮಣ್ಣನ್ನು ತೋಟದುದ್ದಕ್ಕೂ ಸಾಗಿಸಿದ್ದೊಂದು ಸಾಹಸಗಾಥೆ. ಯಾವ ಬೆಳೆಯೇ ಇರಲಿ, ಶ್ರಮಿಸುವ ಕೃಷಿಕನ ಕೈಗೆ ಅದು ಎಟುಕದೆ ಉಳಿಯುವುದಿಲ್ಲ ಎನ್ನುವ ಆತ್ಮವಿಶ್ವಾಸವಿರುವ ಸುಬ್ರಹ್ಮಣ್ಯ ಭಟ್ಟರು ಏನೂ ಬೆಳೆಯದೆ ಇದ್ದ ಗುಡ್ಡವನ್ನು ಸಮತಟ್ಟು ಮಾಡಿಸಿ, ವೆನಿಲ್ಲಾದ ಪ್ರಾಯೋಗಿಕ ವ್ಯವಸಾಯಕ್ಕೆ ಬಳಸಿಕೊಂಡರು. 10ಸೆಂಟ್ಸ್ ಸ್ಥಳದಲ್ಲಿ 10×6 ಅಡಿ ಅಂತರದಲ್ಲಿ ಒಂದೊಂದು ಗ್ಲಿರಿಸಿಡಿಯಾ ಕೊಂಬೆಗಳನ್ನು ನೆಟ್ಟು, ಚಿಗುರೊಡೆಯುವಂತೆ ಮಾಡಿದರು. ಗ್ಲಿರಿಸಿಡಿಯಾ ಕೊಂಬೆಗಳನ್ನು ಕಮಾನಿನ ಹಾಗೆ ಒಂದಕ್ಕೊಂದು ಬಾಗಿಸಿ ಕಟ್ಟಬಹುದೆಂಬುದು ಅವರ ಯೋಚನೆ.

ಈ ಅಂತರದಲ್ಲಿ ವೆನಿಲ್ಲಾ ಕಡ್ಡಿಗಳನ್ನು ಗ್ಲಿರಿಸಿಡಿಯಾಕ್ಕೆ ಹಬ್ಬುವಂತೆ ನೆಟ್ಟರು. 4×5 ಅಡಿ ಅಂತರದಲ್ಲಿ ನೆಟ್ಟರೆ ಫಸಲು ಅಧಿಕಗೊಳ್ಳುವುದೆಂದು ಮುಂದೆ ಅವರಿಗೆ ತಿಳಿಯಿತು. ಅಲ್ಲದೆ ಬಳ್ಳಿಗೆ ಅಧಿಕ ನೆರಳು ಅಗತ್ಯವಿರುವಾಗ ಗ್ಲಿರಿಸಿಡಿಯಾದ ಎಲೆಗಳು ಉದುರುತ್ತವೆ. ಆಗ ಸೂರ್ಯನ ಬಿಸಿಲು ಎದುರಿಸಲು ನೆರಳಿಗಾಗಿ ಅಡಿಕೆಮರದ ಸೋಗೆಗಳನ್ನು ಕಟ್ಟಬೇಕಾಯಿತು.

ವೆನಿಲ್ಲಾವನ್ನು ಸಾವಯುವ ಗೊಬ್ಬರದಿಂದಲೇ ಬದುಕಿಸುತ್ತೇನೆಂಬ ಛಲ ತೊಟ್ಟ ಸುಬ್ರಹ್ಮಣ್ಯಭಟ್ಟರು ಮೊದಲ ವರ್ಷ ಗಿಡಗಳ ಬುಡಕ್ಕೆ ಒಣಗಿದ ಹಟ್ಟಿ ಗೊಬ್ಬರದ ಹುಡಿ ಮತ್ತು ತೆಂಗಿನ ನಾರಿನ ಹುಡಿ ಹಾಕಿದರು. ಹಟ್ಟಿ ತೊಳೆದ ನೀರನ್ನು ಒಂದು ಕಣಿವೆ ಮೂಲಕ ಹರಿಸಿ, ಹೊಂಡದಲ್ಲಿ ಶೇಖರಿಸಿ ವೆನಿಲ್ಲಾ ಗಿಡಗಳಿರುವ ಸಾಲುಗಳಿಗೆ ಹರಿಸಿದರು. ವಾರಕ್ಕೊಮ್ಮೆ ಗೋಬರ್ ಅನಿಲಸ್ಥಾವರ ವಿಸರ್ಜಿಸಿದ ತೆಳ್ಳಗಿನ ಸ್ಲರಿಯನ್ನು ಗಿಡಕ್ಕೆ ಉಣಿಸಿದರು.

ವೆನಿಲ್ಲಾ ಗಿಡಗಳಿಗೆ ಸ್ಪಿಂಕ್ಲರ್ ನೀರು ಸಮರ್ಪಕ. ಗಿಡಗಳಿಗೆ ಎಲೆಗಳ ಮೇಲೂ ನೀರಿನ ಅಗತ್ಯವಿರುವುದರಿಂದ ಡ್ರಿಪ್ ಸಮಂಜಸವಲ್ಲ ಎನ್ನುತ್ತಾರೆ ಅವರು. ಅವರು ಆಗಾಗ ಹೊಟ್ಟಿನ ಬೂದಿ, ಸುಟ್ಟಮಣ್ಣುಗಳನ್ನು ಗಿಡಕ್ಕೆ ಪೂರೈಸಿದ್ದಾರೆ. ಈ ವರ್ಷ ಅರ್ಧ ಕೆ.ಜಿ. ಹರಳಿನ ಹಿಂಡಿ ಹಾಕಿದ್ದಾರೆ. ಅವರ ತೋಟದಲ್ಲಿ ಮೂರನೆಯ ವರ್ಷವೇ ಬಳ್ಳಿಗಳು ಹೂ ಬಿಟ್ಟವು. ಇತರ ವೆನಿಲ್ಲಾ ಕೃಷಿಕರಲ್ಲಿ 5ವರ್ಷ ಕಳೆದರೂ ಬಳ್ಳಿಗಳು ಹೂ ಬಿಟ್ಟಿರಲಿಲ್ಲ. ಸಾವಯುವ ಕೃಷಿಯಿಂದ ಭಟ್ಟರು ಬೆಳೆಸಿದ ಬಳ್ಳಿಗಳು ಚೆನ್ನಾಗಿ ಬೆಳೆದಿದ್ದವು. ಪರಾಗಸ್ಪರ್ಶವೂ ಅವರಿಗೆ ತ್ರಾಸ ಎನಿಸಲಿಲ್ಲ. ಒಂದು ಹೂಗೊಂಚಲಿನಲ್ಲಿ 35ರ ತನಕ ಹೂಗಳಿದ್ದು, ಎಲ್ಲದಕ್ಕೂ ಅವರು ಪರಾಗಸ್ಪರ್ಶ ಮಾಡಿಸಿದ್ದಾರೆ. ಗಿಡವೊಂದರಲ್ಲಿ ಗರಿಷ್ಠ 15ಕಾಯಿಗಳಾದರೆ ದೊಡ್ಡ ಸಾಧನೆ ಎನ್ನುತ್ತಾರೆ ಕೃಷಿ ಪರಿಣತರು. ಈವರೆಗೆ 70ಗಿಡಗಳಿಗೆ ಅವರು 50 ಸಾವಿರ ರೂ. ವೆಚ್ಚ ಮಾಡಿರಬಹುದು. ಅವರಿಗೆ ಒಂದೇ ವರ್ಷದಲ್ಲಿ 20ಸಾವಿರ ರೂ. ವೆನಿಲ್ಲಾ ಮಾರಾಟದಿಂದ ಲಭಿಸಿದೆ.

ಪೂರ್ವ ಈಶಾನ್ಯದ ದ್ವಾರ – ಯಜಮಾನನ ಕೀರ್ತಿ, ಸಂತಾನ ಪುರೋಭಿವೃದ್ಧಿಗೆ ಮಂದಾರ (ಮಂದಾರ = ಕಲ್ಪವೃಕ್ಷ)

ವೆನಿಲ್ಲಾ ಕೋಡುಗಳನ್ನು ಹಸಿಯಾಗಿ ಮಾರಾಟ ಮಾಡುವಾಗ 6ರಿಂದ 8ಇಂಚು ಉದ್ದವಿದ್ದರೆ ಮೊದಲ ದರ್ಜೆಗೆ ಸೇರುತ್ತವೆ. ಇದಕ್ಕೆ ಕಿಲೋಗೆ 300ರೂ. ಬೆಲೆ ಇದೆ. ಒಣಗಿಸಿ ಸಂಸ್ಕರಿಸಿದರೆ ಅಧಿಕ ಬೆಲೆ ಸಿಗುತ್ತದೆ.

ಸಾವಯವ ಪದ್ಧತಿ ಬಳಸಿಯೇ ವೆನಿಲ್ಲಾ ಬೆಳೆದರೂ, ಶಿಲೀಂಧ್ರನಾಶಕ ಮತ್ತು ಕೀಟನಾಶಕ ಬಳಸುವುದು ಅನಿವಾರ್ಯವೆಂದು ಒಪ್ಪಿಕೊಳ್ಳುವ ಸುಬ್ರಹ್ಮಣ್ಯ ಭಟ್ಟರು ಸಮೃದ್ಧವಾಗಿ ಹೂ ಬಿಡಲು ಆಯುರ್ವೇದೀಯ ಹಾರ್ಮೋನನ್ನು ಸಿಂಪಡಿಸುವ ಅಗತ್ಯವಿದೆ ಎನ್ನುತ್ತಾರೆ. ಈಗ ಅವರು ಗುಡ್ಡವನ್ನು ಸಮತಟ್ಟು ಮಾಡಿ ಎರಡು ಸಾವಿರ ವೆನಿಲ್ಲಾ ಗಿಡ ಹಾಕುತ್ತಿದ್ದಾರೆ. ಈ ವರ್ಷಾಂತ್ಯದಲ್ಲಿ 10ಸಾವಿರ ವೆನಿಲ್ಲಾ ಗಿಡ ನೆಡುವುದು ಅವರ ಯೋಜನೆ. ಇದನ್ನೆಲ್ಲ ಸಾವಯವ ಗೊಬ್ಬರ ಹಾಕಿಯೇ ಬೆಳೆಯುವ ಛಲ ಹೊತ್ತ ಅವರ ಈವರೆಗಿನ ಸಾಧನೆ ದೊಡ್ಡದು.

ಲೇಖನ : — ಪ. ರಾಮಕೃಷ್ಣ ಶಾಸ್ತ್ರಿ

ವೆನಿಲ್ಲಾ ಕೃಷಿಯ ಮೂಲಕ ಬೆಲೆ ಕುಸಿತ ಸಮಸ್ಯೆ ಎದುರಿಸಲು ಸಾಧ್ಯ ಬಿ.ಎನ್ ಪ್ರಸಾದ್

ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ಇಡೀ ದೇಶದ ರೈತಾಪಿ ವರ್ಗ ತತ್ತರಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಉತ್ತಮ ಮಾರುಕಟ್ಟೆ ಧಾರಣೆ ಇರುವ ಏಕೈಕ ಕೃಷಿ ಉತ್ಪನ್ನ ಎಂದು ವೆನಿಲ್ಲಾ ಗುರುತಿಸಲ್ಪಟ್ಟಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿರುವ ವೆನಿಲ್ಲಾ ಕೃಷಿಯನ್ನು ರೈತರು ಹೆಚ್ಚು ವ್ಯಾಪಕವಾಗಿ ಬೆಳೆಸಿ ಬೆಲೆ ಕುಸಿತದ ಸಮಸ್ಯೆಯನ್ನು ಎದುರಿಸಲು ಪ್ರಯತ್ನಿಸಬೇಕು ಎಂದು ದ. ಕ. ಜಿಲ್ಲಾ ಪ್ರಚಾರ ತೋಟಗಾರಿಕಾ ಉಪನಿರ್ದೇಶಕ ಬಿ. ಎನ್. ಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ಅವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ, ತೋಟಗಾರಿಕೆ ಇಲಾಖೆ ಬೆಳ್ತಂಗಡಿ, ಲಯನ್ಸ್ ಹಾಗೂ ಲಿಯೋ ಕ್ಲಬ್ ವೇಣೂರು ಹಾಗೂ ಕೃಷಿ ವಿಚಾರ ವಿನಿಮಯ ಕೇಂದ್ರ ವೇಣೂರು ಇದರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ ವೆನಿಲ್ಲಾ ಕೃಷಿ ತರಬೇತಿ ಶಿಬಿರದಲ್ಲಿ ರೈತರನ್ನು ಉದ್ದೇಶಿಸಿ ಇತ್ತೀಚೆಗೆ ಮಾತನಾಡುತ್ತಿದ್ದರು.

ವೆನಿಲ್ಲಾ ಕೃಷಿ ಮಾರುಕಟ್ಟೆಯ ಚಿತ್ರಣವನ್ನು ರೈತರ ಮುಂದಿಟ್ಟ ಅವರು ಭಾರತದಲ್ಲಿ ಬೆಳೆಸಲಾಗುವ ವೆನಿಲ್ಲಾ ಅಂತಾರಾಷ್ಟ್ರೀಯ ಗುಣಮಟ್ಟವನ್ನು ಹೊಂದಿರುವುದು ದೃಢಪಟ್ಟಿರುವುದರಿಂದ ಇಲ್ಲಿನ ವೆನಿಲ್ಲಾ ಬೀನ್ಸ್‌ಗಳಿಗೆ ದೇಶ ವಿದೇಶ ಗಳಲ್ಲಿ ಉತ್ತಮ ಬೇಡಿಕೆಯಿದೆ. ಉತ್ತಮ ಗುಣಮಟ್ಟ ಮತ್ತು ಆರೋಗ್ಯದ ಮೇಲಿನ ಕಾಳಜಿಯಿಂದಾಗಿ ವಿಶ್ವದಾದ್ಯಂತ ಕೃತಕ ವೆನಿಲ್ಲಾಗೆ ಬೇಡಿಕೆ ಕಡಿಮೆಯಾಗಿ ಪ್ರಾಕೃತಿಕ ವೆನಿಲ್ಲಾದ ಬೇಡಿಕೆ ಹೆಚ್ಚುತ್ತಿದೆ. ನಮ್ಮ ದೇಶದಲ್ಲಿ ಬಳಸಲಾಗುವ ಕೃತಕ ವೆನಿಲಿನ್ ಶೇ.10 ರಷ್ಟನ್ನು ಪ್ರಾಕೃತಿಕ ವೆನಿಲಿನ್‌ಗೆ ಪರಿವರ್ತಿಸಿದರೂ ವಾರ್ಷಿಕ 1000ಟನ್‌ಗಳಷ್ಟು ಸಂಸ್ಕರಿಸಿದ ವೆನಿಲ್ಲಾ ಬೀನ್ಸ್‌ಗಳ ಅವಶ್ಯಕತೆಯಿದೆ. ಆದರೆ ಈಗ ನಮ್ಮಲ್ಲಿ ಬೆಳೆಯುವ ಒಟ್ಟು ವೆನಿಲ್ಲಾ 8ರಿಂದ 10ಟನ್‌ಗಳಷ್ಟು ಮಾತ್ರವಾಗಿದೆ. ಈಗ ಇರುವ ಧಾರಣೆ ಕೆ.ಜಿಗೆ 500ರೂ. ಬದಲಿಗೆ 400ರೂ. ದೊರೆತರೂ ವೆನಿಲ್ಲಾ ಕೃಷಿ ಲಾಭದಾಯಕವೇ ಆಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇನ್ನೋರ್ವ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ವೆನಿಲ್ಲಾ ಅಭಿವೃದ್ಧಿ ಪ್ರತಿಷ್ಠಾನ, ಹಿರಿಯಡ್ಕ ಇದರ ಆಡಳಿತ ನಿರ್ದೇಶಕ ಪಳ್ಳಿ ಶ್ರೀನಿವಾಸ ಹೆಗ್ಡೆ ಅವರು ಮಾತನಾಡುತ್ತಾ, ವೆನಿಲ್ಲಾ ಬೆಳೆಲು ಲಕ್ಷಾಂತರ ರೂಪಾಯಿ ಖರ್ಚು ಇದೆ. ಸಾಮಾನ್ಯ ರೈತನಿಂದ ಅದನ್ನು ಬೆಳೆಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ನಮ್ಮ ರೈತರಲ್ಲಿದೆ. ಇದು ತಪ್ಪು. ಇತರ ಯಾವುದೇ ಕೃಷಿಗಿಂತ ಕಡಿಮೆ ಬಂಡವಾಳ, ಕಡಿಮೆ ಪರಿಶ್ರಮ ಮತ್ತು ಕಡಿಮೆ ವಿಸ್ತೀರ್ಣದಲ್ಲಿ ವೆನಿಲ್ಲಾ ಬೆಳೆಸಲು ಸಾಧ್ಯವಿದೆ. ರೈತರೇ ಸಂಶೋಧಿಸಿದ ಅತ್ಯಂತ ಸರಳ ಕೃಷಿ ವಿಧಾನಗಳು ಪ್ರಚಲಿತದಲ್ಲಿವೆ. ಆದ್ದರಿಂದ ವೆನಿಲ್ಲಾ ಕೃಷಿ ಬಗ್ಗೆ ರೈತರು ಭಯಪಡುವ ಅಗತ್ಯವಿಲ್ಲವೆನ್ನುತ್ತಾರೆ.

ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ ಗ್ರಾಮದಲ್ಲಿ ಇಸ್ಕಾನ್ (ISKCON) ಸಂಸ್ಥೆಯವರು ಸುಮಾರು 125ಎಕ್ರೆ ಗಳಲ್ಲಿ ವೆನಿಲ್ಲಾ ಮತ್ತು ವಿಶ್ರ ಕೃಷಿಯನ್ನು ಮಾಡಿರುತ್ತಾರೆ. ಆಸಕ್ತರು ಪ್ರಯೋಜನ ಪಡೆಯಬಹುದು.

— ಸಂಗಾತಿ

ಕರ್ನಾಟಕದ ಜಿಲ್ಲೆಗಳು

ಕರ್ನಾಟಕದಲ್ಲಿ ಒಟ್ಟು ಎಷ್ಟು ಜಿಲ್ಲೆಗಳಿವೆಯೆಂದು ಓದಿದ ತಕ್ಷಣ ಐದು ಸೆಕೆಂಡಿನೊಳಗೆ ಅಂದರೆ ನೀವು 80%ನಲ್ಲಿ ಉತ್ತೀರ್ಣರಾಗಿದ್ದಿರೆಂದು ಅರ್ಥ. 30ಸೆಕೆಂಡಿನಲ್ಲಿ ಹೇಳಿದರೆ 50%. 1ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದು ಕೊಂಡರೆ 35%.ಹೇಳದಿದ್ದರೆ ನಾಪಾಸ್.

ಜಿಲ್ಲೆಗಳು

ಬೆಂಗಳೂರು ಉತ್ತರ	ಕೊಡಗು	ಬಾಗಲಕೋಟೆ
ಬೆಂಗಳೂರು ದಕ್ಷಿಣ	ದಾವಣಗೆರೆ	ವಿಜಾಪುರ
ಬೆಂಗಳೂರು ಗ್ರಾಮಾಂತರ	ಚಿತ್ರದುರ್ಗ	ಕಾರವಾರ
ಕೋಲಾರ	ಚಿಕ್ಕಮಗಳೂರು	ಗುಲ್ಬರ್ಗ
ತುಮಕೂರು	ಶಿವಮೊಗ್ಗ	ಕೊಪ್ಪಳ
ಚಾಮರಾಜನಗರ	ಹಾಸನ	ರಾಯಚೂರು
ಮೈಸೂರು	ಹಾವೇರಿ	ಬೀದರ್
ಮಂಡ್ಯ	ಗದಗ	ಬಳ್ಳಾರಿ
ಉಡುಪಿ	ಧಾರವಾಡ	ಒಟ್ಟು 28
ಮಂಗಳೂರು	ಬೆಳಗಾವಿ	

— ಸಂಗಾತಿ

ಪೂರ್ವದಿಂದ ದಕ್ಷಿಣ ನೈರುತ್ಯದ ದ್ವಾರಗಮನ – ಹೆಂಗಸರ ಸಂಕಟದಾಗಮನ

ಅಗತ್ಯ ಶಿಕ್ಷಣ ಮತ್ತು ಶಿಕ್ಷಕ

1986 ರ ರಾಷ್ಟ್ರೀಯ ಶಿಕ್ಷಣ ನೀತಿಯು ಹೇಳುವಂತೆ- "ಪಾಠ ಮಾಡಬೇಕಾಗಿರುವುದು ಮಕ್ಕಳಿಗಲ್ಲ- ಮಾನವ ಸಂಪನ್ಮೂಲಕ್ಕೆ!"

ವ್ಯಕ್ತಿ ಸಮಾಜದಲ್ಲಿ ಹೇಗೆ ಬದುಕಬೇಕು ಎಂಬ ಶಿಕ್ಷಣವಾಗಿರಬೇಕು ಮತ್ತು ಉದ್ಯೋಗ ಕೇಂದ್ರಿತವಾಗಿರಬೇಕು.

ಈಗಿರುವ 10+2+3 ಮಾದರಿಯ ಶಿಕ್ಷಣ ಕ್ರಮದಲ್ಲಿ ಒಂದೊಂದು ಹಂತ ದಾಟಿದಾಗಲೂ ಮುಂದೇನು?! ಎನ್ನುವ ಚಿಂತೆ ಎಲ್ಲರನ್ನೂ ಕಾಡುವುದು ಸಾಮಾನ್ಯ. ವಿದ್ಯಾರ್ಥಿಗಳು ಜೀವನದ ಅವಶ್ಯಕತೆಗಳನ್ನು ಹೇಗೆ ಪೂರೈಸಿಕೊಳ್ಳಬಹುದು ಎಂಬುದಕ್ಕೆ ಅಧ್ಯಾಪಕರಿಂದ ಮಾರ್ಗದರ್ಶನ ಸಿಗಬೇಕಾದರೆ ಅಂತಹ ಪಠ್ಯಕ್ರಮ ರೂಪಿತವಾಗಬೇಕು.

ಪ್ರೌಢಶಾಲಾ ಹಂತದ 8ನೇ ತರಗತಿಯಲ್ಲಿ ಕನ್ನಡದ "ಬದುಕಿಗೊಂದು ದಾರಿ" ಪಾಠವು ಅಂತಹ ಒಂದು ಪಾಠವಾಗಿದೆ. ಓದಿದವನಾದರೂ ಕೃಷಿಕನಾಗಿ, ವೈಜ್ಞಾನಿಕ ರೀತಿಯಲ್ಲಿ ವ್ಯವಸಾಯ ಮಾಡಿ, ಹೆಚ್ಚಿನ ಬೆಳೆ ತೆಗೆದು, ಎಲ್ಲರ ಗಮನ ಸೆಳೆಯುವ ಶಿವಣ್ಣ ಪಾಠದ ಕೇಂದ್ರ ವ್ಯಕ್ತಿ. ಅದೆಷ್ಟು ಮೌಲ್ಯ ಗಳನ್ನು, ಆದರ್ಶಗಳನ್ನು ಈ ಪಾಠದಿಂದ ಮೂಡಿಸಬಹುದು! ಶಿವಣ್ಣ ವ್ಯವಸಾಯದ ಜೊತೆಗೆ ಹೊಂದಿದ್ದ ಉಪಕಸುಬುಗಳಾದ ಕೋಳಿ ಸಾಕಣೆ, ಕುರಿ ಸಾಕಣೆ, ರೇಷ್ಮೆ ಬೇಸಾಯ, ಗೋಬರ್ ಅನಿಲೋತ್ಪಾದನೆ, ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುವುದು ಇತ್ಯಾದಿಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಮಕ್ಕಳಿಗೆ ತಿಳಿಸಿಕೊಡಬಹುದು. ಸಂಬಂಧಪಟ್ಟ ಕೃಷಿ ಅಧಿಕಾರಿಗಳನ್ನು ಶಾಲೆಗೆ ಆಹ್ವಾನಿಸಿ ಹೆಚ್ಚಿನ ಮಾಹಿತಿಯನ್ನು ನೀಡಬಹುದು.

ಬೋಧನಾ ಪದ್ಧತಿಗಳಲ್ಲಿ ಯೋಜನಾ ಪದ್ಧತಿ ಒಂದು ವಿಶಿಷ್ಟ ಪದ್ಧತಿ. (Project Method) ಒದು ವಿಶಿಷ್ಟ ಪದ್ಧತಿ. ವಿದ್ಯಾರ್ಥಿಗಳನ್ನು ನಾಲ್ಕೈದು ಗುಂಪಿಗೆ ಒಂದೊಂದು ಉಪ ಘಟಕಗಳಾಗಿ ವಿಂಗಡಿಸಿ, ಪ್ರತಿಯೊಂದು ಗುಂಪಿಗೆ ಒಂದೊಂದು ಉಪಘಟಕದ ವಿಷಯವನ್ನು ನೀಡಿ, ಅದರ ಬಗ್ಗೆ ಮಾಹಿತಿ ಸಂಗ್ರಹಿಸಲು ತಿಳಿಸಬೇಕು. ಹೆಚ್ಚು ಮಾಹಿತಿ ಸಂಗ್ರಹಿಸಿದ ಗುಂಪಿಗೆ ಬಹುಮಾನ ನೀಡುವುದಾಗಿ ಪ್ರೋತ್ಸಾಹಿಸಬೇಕು. ಪಾಠದಲ್ಲಿ ಬರುವ ಉಪ ಕಸುಬುಗಳಲ್ಲಿ ಸ್ಥಳೀಯವಾಗಿ ಚಾಲ್ತಿಯಲ್ಲಿರುವ ಉಪಕಸುಬುಗಳ ಬಗ್ಗೆ ಮಕ್ಕಳೇ ಆಸಕ್ತಿಭರಿತರಾಗಿ ಮಾಹಿತಿಗಳನ್ನು, ಚಿತ್ರಗಳನ್ನು ಸಂಗ್ರಹಿಸುತ್ತಾರೆ. ಕಡೆಗೆ ಎಲ್ಲಾ ಗುಂಪುಗಳನ್ನೂ, ಅವರು ಸಂಗ್ರಹಿಸಿರುವ ಮಾಹಿತಿಗಳನ್ನೂ ಒಂದೆಡೆ ಕಲೆ ಹಾಕಿ, ಹೆಚ್ಚು ರಚನಾತ್ಮಕವಾದ ಮತ್ತು ಪರಿಣಾಮಕಾರಿ ಮಾಹಿತಿ ಸಂಗ್ರಹಿಸಿರುವ ಗುಂಪನ್ನು ಅಭಿನಂದಿಸಿ ಬಹುಮಾನಿಸಬೇಕು.

ಈ ರೀತಿ ಮಾಡಿದರೆ ಶಿಕ್ಷಕರ ಮುಂದಿನ ಬೋಧನೆಗೆ ಅದು ಹೆಚ್ಚು ಪ್ರಯೋಜನಕಾರಿಯಾಗುವುದಲ್ಲದೆ, ಒಳ್ಳೆಯ ಬೋಧನೋಪಕರಣ (Teaching aid) ಕೂಡ ಆಗುತ್ತದೆ ಪರಿಣಾಮಕಾರಿ ಕಲಿಕಾ ಪರಿಸರ ನಿರ್ಮಾಣವಾಗುತ್ತದೆ.

ಅಂತೆಯೇ ಪರಿಸರ ಜಾಗೃತಿ ಮೂಡಿಸುವಲ್ಲಿ 8ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿನ 'ಅರಣ್ಯನಾಶ ಪರಿಣಾಮ ಏನು ?' 'ಹಾಗೂ 'ನದಿ ನೀರಿಗೆ ವಿಷಪ್ರಾಶನ ' ಈ ಅಧ್ಯಾಯಗಳು ಪ್ರಮುಖ ಪಾತ್ರವಹಿಸುತ್ತವೆ. 9ನೇ ತರಗತಿಯ ಕನ್ನಡದ 'ವನ್ಯ ಜೀವಿಗಳು ಮತ್ತು ಪರಿಸರ' ಹಾಗೂ 10ನೇ ತರಗತಿಯ ಚಿಪ್ಕೋ ಚಳುವಳಿಯಂತಹ ಅಧ್ಯಾಯಗಳು ಯೋಜನಾ ಪದ್ಧತಿಯ ಅಳವಡಿಕೆಗೆ ಹೆಚ್ಚು ಸಮಂಜಸ, ಸೂಕ್ತವಾಗಿವೆಯಲ್ಲದೆ ಮಕ್ಕಳಲ್ಲಿ ಪರಿಸರ ಪ್ರೀತಿ, ಜಾಗೃತಿ ಮೂಡಿಸುವಲ್ಲಿ ಒಳ್ಳೆಯ ವಿಷಯಗಳಾಗಿವೆ.

ಬೋಧಕರು ಪ್ರತಿಯೊಂದು ಅಧ್ಯಾಯದ ಒಳ ಹೊಕ್ಕು ಅರ್ಥದೊಳಗಣ ಅರ್ಥವನ್ನು ಬೆದಕಿ, ಅದರಲ್ಲಿ ಅಡಗಿರುವ ಮೌಲ್ಯವನ್ನು, ಆದರ್ಶವನ್ನು, ನೀತಿಯನ್ನು ಮಕ್ಕಳಿಗೆ ತಿಳಿಯಪಡಿಸಬೇಕು. ಅಂತಹ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಬೇಕು.

ಸ್ವಾಮಿ ವಿವೇಕಾನಂದರು - " ಒಂದು ಟನ್‌ನಷ್ಟು ವೇದಾಂತವನ್ನು ಹೇಳುವುದಕ್ಕಿಂತ ಅದರಲ್ಲಿ ಒಂದನ್ನು ಪಾಲಿಸು " ಎಂದಿದ್ದಾರೆ.

ಅಲ್ಲದೆ ಈ ನಿಟ್ಟಿನಲ್ಲಿ ಮತ್ತೊಬ್ಬ ಶಿಕ್ಷಣ ತಜ್ಞ ಹೀಗೆ ಹೇಳುತ್ತಾನೆ - " ಸಾಧಾರಣ ಶಿಕ್ಷಕ ಪಾಠ ಹೇಳುತ್ತಾನೆ, ಸರಾಸರಿ ಶಿಕ್ಷಕ ಬೋಧಿಸುತ್ತಾನೆ, ಉತ್ತಮ ಶಿಕ್ಷಕ ವಿವರಿಸುತ್ತಾನೆ, ಉತ್ತಮೋತ್ತಮ ಶಿಕ್ಷಕ ಸ್ಫೂರ್ತಿ ನೀಡುತ್ತಾನೆ." ಈ ಮಾತು ಅದೆಷ್ಟು ಸತ್ಯ"!

1986 ರಾಷ್ಟ್ರೀಯ ಶಿಕ್ಷಣ ನೀತಿಯ ವ್ಯಾಖ್ಯಾನದನ್ವಯ ಮಾನವ ಸಂಪನ್ಮೂಲಕ್ಕೆ ಹೇಳಬೇಕಾದ ಪಾಠವೇನು? ಪ್ರಸ್ತುತ ಪ್ರಪಂಚದಲ್ಲಿ ಪ್ರಜ್ಞಾವಂತ ಪ್ರಜೆಯಾಗಿ ಬದುಕಲು, ಜವಾಬ್ದಾರಿ ಯುತ ನಾಗರೀಕನಾಗಲು ಹೇಗೆ ಅವರನ್ನು ಸ್ಫೂರ್ತಿಸಬೇಕು? ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಅಧ್ಯಾಪಕನೂ ಚಿಂತಿಸಬೇಕು.

ಎಲ್ಲಕ್ಕಿಂತ ಮೊದಲು ಮಾನವನಾಗಿ ಬದುಕುವುದು ಹೇಗೆಂಬುದನ್ನು ತಿಳಿಸಬೇಕು. ಮಾನವೀಯ ಮೌಲ್ಯಗಳ ಅದಃ ಪತನವಾಗುವುದನ್ನು ತಡೆಗಟ್ಟಬೇಕು.

ವಿದ್ಯಾರ್ಥಿಗಳಲ್ಲಿ ಅಡಗಿರುವ ಸೃಜನಶೀಲ ದಿವ್ಯಾಂಶಗಳನ್ನು ಅರಿತು ಅವುಗಳ ಉದಾತ್ತೀಕರಣಗೊಳಿಸುವುದು.

ಪ್ರಸ್ತುತ ಜ್ವಲಂತ ಸಮಸ್ಯೆಗಳಾದ ಜನಸಂಖ್ಯಾ ಸ್ಫೋಟ, ನಿರುದ್ಯೋಗ, ಪರಿಸರ ಮಾಲಿನ್ಯ ಇತ್ಯಾದಿಗಳ ಬಗ್ಗೆ ದೃಷ್ಟಾಂತಗಳ ಮೂಲಕ ಪರಿಣಾಮಕಾರಿ ಅರಿವು ಮೂಡಿಸುವುದು.

ಉದ್ಯೋಗ ಕೇಂದ್ರಿತ ಶಿಕ್ಷಣದ 'Earn while Learn' ತತ್ವದ ಆಧಾರದ ಮೇಲೆ ಶಿಕ್ಷಣ ನಡೆದರೆ ಮತ್ತೂ ಉತ್ತಮ.

ಮೂಢನಂಬಿಕೆಗಳು, ಪೂರ್ವಾಗ್ರಹಪೀಡಿತತೆ, ಅಂಧಾನುಕರಣೆ, ಕಂದಾಚಾರಗಳ ಬಗ್ಗೆ ವೈಜ್ಞಾನಿಕವಾಗಿ ಚಿಂತಿಸುವಂತೆ ಪ್ರೇರೇಪಿಸುವುದು.

ಪೂರ್ವದಿಂದ ಪಶ್ಚಿಮ ನೈರುತ್ಯದ ಗಮನ ದ್ವಾರ — ಗಂಡಸರಿಗೆ ಅರಿಷ್ಟ, ಅಪಾರ 20 ನೇ ಪುಟಕ್ಕೆ

ಶಾಸನ, ನಾಣ್ಯಗಳ ಬಗ್ಗೆ ಹೆಚ್ಚಿನ ಅಧ್ಯಯನ ಅಗತ್ಯ

ಶಾಸನ ಮತ್ತು ನಾಣ್ಯಗಳ ಬಗ್ಗೆ ಅಧ್ಯಯನ ಮಾಡುತ್ತಿರುವವರು ಇತ್ತೀಚಿನ ದಿನಗಳಲ್ಲಿ ಬಹಳ ಕಡಿಮೆ ಮಂದಿ ಇದ್ದಾರೆ. ಇದರಿಂದ ಚರಿತ್ರೆಯ ವಿಷಯಗಳನ್ನು ಪಡೆಯಲು ಸಾಧ್ಯವಾಗು ತ್ತಿಲ್ಲ. ಆದ್ದರಿಂದ ಹೆಚ್ಚು ಜನರು ಈ ಶಾಸ್ತ್ರದ ಅಧ್ಯಯನ ಮಾಡಿ ಮುಂದಿನ ಪೀಳಿಗೆಯವರಿಗೆ ಮಾರ್ಗದರ್ಶಿಗಳಾಗಬೇಕು ಎಂದು ಭಾರತೀಯ ಪುರಾತನ ಸರ್ವೇಕ್ಷಣಾ ಇಲಾಖೆಯ ನಿವೃತ್ತ ಪ್ರದಾನ ನಿರ್ದೇಶಕ ಡಾ. ಎಂ. ಎಸ್. ನಾಗರಾಜ್‌ರಾವ್ ಇತ್ತೀಚೆಗೆ ಕರೆ ನೀಡಿದ್ದಾರೆ.

ಮಾನಸಗೊಂಗೋತ್ರಿಯಲ್ಲಿರುವ ಪ್ರಾದೇಶಿಕ ಶಿಕ್ಷಣಾ ಸಂಸ್ಥೆಯ ಶಾಸನ ಶಾಸ್ತ್ರ ಮತ್ತು ನಾಣ್ಯ ವಿದ್ಯೆ ತರಬೇ ಕಾರ್ಯಗಾರವನ್ನು ಅವರು ಉದ್ಘಾಟಿಸಿ ಮಾತನಾಡುತ್ತಿದ್ದರು.

ಪರರಾಜ್ಯವಾದ ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ಈ ಶಾಸ್ತ್ರದ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಕ್ರಮಗಳು ನಡೆದಿವೆ. ನಮ್ಮ ರಾಜ್ಯದಲ್ಲಿ ಇದು ತಡವಾಗಿ ಆರಂಭಗೊಳ್ಳುತ್ತಿದ್ದರೂ ಉತ್ತಮ ಬೆಳವಣಿಗೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇತಿಹಾಸದ ಬಗ್ಗೆ ತಿಳಿಸುವ ಇಂತಹ ಅಧ್ಯಯನಗಳು ಈಗಿನ ಯುವಕರಿಗೆ ಅವಶ್ಯವಿದೆ. ಹಿಂದಿನ ಅರಸರ ಆಳ್ವಿಕೆ ಮತ್ತು ಅವರ ಜನಪರ ಯೋಜನೆಗಳು ಈಗಿನ ಜನರ ಆಲಕ್ಷ್ಯದಿಂದ ನಶಿಸಿ ಹೋಗುತ್ತಿವೆ. ಇವುಗಳನ್ನು ಸಂರಕ್ಷಿಸುವ ಹೊಣೆ ನಮ್ಮ ಮೇಲಿದೆ ಎಂದು ನಾಗರಾಜರಾವ್ ತಿಳಿಸಿದರು.

ಈ ಶಾಸನ ಶಾಸ್ತ್ರದ ಬಗ್ಗೆ ಹಲವಾರು ವಿ.ವಿ.ಗಳು ಶಿಕ್ಷಣ ನೀಡುತ್ತಿದ್ದರೂ, ಗುಣಮಟ್ಟವಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಇನ್ನು ಮುಂದಾದರೂ ವಿವಿಗಳು ಶಿಕ್ಷಣದ ಗುಣಮಟ್ಟ ಕಾಯುವ ಅವಶ್ಯಕತೆ ಇದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾದ ನಿವೃತ್ತ ಜಂಟಿ ಪ್ರಧಾನ ನಿರ್ದೇಶಕ ಡಾ. ಕೆ.ವಿ. ರಮೇಶ್ ಅವರು ಮಾತನಾಡಿ, ಈ ಶಾಸ್ತ್ರದಲ್ಲಿ ಆಳವಾದ ಅಧ್ಯಯನ ನಡೆಸುವ ಅಗತ್ಯವಿದೆ. ಆರಂಭದಲ್ಲಿ ಇದರ ಬಗ್ಗೆ ಅರ್ಥವಾಗದಿದ್ದರೂ ಅಧ್ಯಯನಕ್ಕೆ ತೊಡಗಿದಾಗ ಕುತೂಹಲ ಮತ್ತು ಆಸಕ್ತಿ ಹೆಚ್ಚುತ್ತದೆ ಎಂದು ಅವರು ತಿಳಿಸಿದರು.

ಸರಕಾರ ಮತ್ತು ವಿಶ್ವವಿದ್ಯಾನಿಲಯಗಳು ಈ ವಿಷಯದ ಬಗ್ಗೆ ಮತ್ತಷ್ಟು ಮಹತ್ವ ನೀಡಿದ್ದೇ ಆದರೆ ಸಂಶೋಧಕರು ಮತ್ತು ವಿದ್ಯಾರ್ಥಿಗಳು ಇದರ ಬಗ್ಗೆ ಅಧ್ಯಯನ ಮಾಡಲು ಮುಂದಾಗುತ್ತಾರೆ ಎಂದು ಅವರು ಹೇಳಿದರು.

ಶಾಸನ ಮತ್ತು ನಾಣ್ಯಗಳಿಂದ ಇತಿಹಾಸದ ಬಗ್ಗೆ ಮಾಹಿತಿ ದೊರೆಯುತ್ತದೆ. ಅದರಿಂದ ಶಾಸನಗಳ ಬಗ್ಗೆ ಅಧ್ಯಯನ ಅರಿವು ಮೂಡಿಸುವ ಇಂತಹ ತರಬೇತಿ ಕಾರ್ಯಗಳು ಹೆಚ್ಚು ಹೆಚ್ಚು ನಡೆಯಬೇಕು ಎಂದು ನಿವೃತ್ತ ಎ.ಎಸ್. ಐ. ಹಾಗೂ ನಿರ್ದೇಶಕ ಆರ್. ಎಸ್. ಬಿಸ್ತಾ ವಿವರಿಸಿದರು.

ಮೈಸೂರು ನಗರದ ಮಹಾರಾಜ ಸಂಸ್ಕೃತ ಕಾಲೇಜಿನ ಪ್ರೊ. ಭಾಷ್ಯಂ ಅವರು ಮಾತನಾಡಿ ಶಾಸನ ಮತ್ತು ನಾಣ್ಯಗಳು ಈಗಿನ ಜನಾಂಗಕ್ಕೆ ಧರ್ಮ ಮತ್ತು ಮತಗಳ ಪಾಠವನ್ನು ತಿಳಿಸುವ ಪ್ರತಿಫಲಕವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಎ.ಎಸ್. ಐ.ನ ನಿರ್ದೇಶಕ ಪಾ. ಮಾಧವ ಎಸ್. ಕಟ್ಟಿ, ಅಧೀಕ್ಷಕ ಡಾ. ಎಂ. ಕೆ. ಬಾನ್ರಿ ಅವರು ಭಾಗವಹಿಸಿದ್ದರು.

— ಸಂಗಾತಿ

ಜನನಿ

ನವ ಮಾಸವ ತುಂಬ ಹೊತ್ತು
ತಾಯ್ತನದ ಸಂತಸದಿ
ಮಗುವೊಂದಕೆ ಜನ್ಮವಿತ್ತು
ತಾಯ್ತನದಿ ಮೆರೆವಳು
ಈ ಜನನಿ ಹರುಷದಿ ||
ಪಾವನೆ ಗಂಗೆಯು ಜನನಿಯಂತೆ ಭೀಷ್ಮಗೆ
ಪತಿಯಲ್ಲಿ ಹಗೆಯಿದ್ದರೂ
ತಾಯ ಮಮತೆ ಬಿಟ್ಟಳೇ
ಮಗನನ್ನು ತೊರೆದಳೇ
ಜನ್ಮದಾತೆ ಭೂಮಿಯು
ನಮಗೆ ಜನನಿ ಅಲ್ಲವೇ ||
ಕಷ್ಟ ಸುಖದಿ ಭಾಗಿಯಾಗಿ
ನಮ್ಮೊಡನೆ ಪ್ರೀತಿ ಹಂಚಿ
ನಮ್ಮ ಸಲಹುತ್ತಿಲ್ಲವೇ
ದೇವಕೊಟ್ಟ ಈ ಮೂರಕ್ಷರ
ಹೆಣ್ಣಿಗೊಂದು ಭೂಷಣ ||
ಈ ಹಂತವ ದಾಟಿದರೆ
ಅವಳ ಜನ್ಮ ಪಾವನ
ಜನನಿ ಎಂಬ ಪದವಿಂದು
ಅವಳಿಗೊಂದು ಲಕ್ಷಣ ||

— ರಚನೆ : ಚಂಡೀರ ಲಾವಣ್ಯ ಪೂಣಚ್ಚ, ಮರಂದೋಡ

ನಗೆ ಹನಿ — ತಂಪಾಗ ಬೇಕು

"ಬಿಸಿ ಅನ್ನಾನೆ ಹಾಕಿದೆನಲ್ಲಾ ಇನ್ನೂ ಯಾಕೆ ನಿಂತಿದ್ದೀ" ಮನೆಯಾಕೆ ಭಿಕ್ಷುಕನನ್ನು ಕೇಳಿದಳು

"ಬಿಸಿಲು ಸುಡ್ತಾ ಇದೆ ತಾಯಿ, ಒಂದು ಲೋಟ ಐಸ್ ವಾಟರ್ ಇದ್ರೆ ಕೊಡಿ"

— ಕೊಂಪುಳಿರ ಎಸ್. ಸಂದೀಪ್, ಮದೆನಾಡು

ಹೀಗೊಂದು ಸ್ಮರಣೆ



ನನ್ನ ಪೂಜ್ಯ ಪತಿ ದಿ|| ಕಾಳೇರಮ್ಮನ ಚಿಣಪ್ಪ ಗಣಪತಿಯವರು ಸ್ವರ್ಗಸ್ಥರಾಗಿ ನಾಲ್ಕು ವರ್ಷಗಳೇ ಕಳೆಯುತ್ತಾ ಬಂದಿದೆ. ಈ ಸಂದರ್ಭದಲ್ಲಿ ಅವರ ಪತ್ನಿಯಾಗಿ ಒಂದೆರಡು ಮಾತುಗಳನ್ನು ಬರೆಯ ಬೇಕೆಂದು ಶುರು ಮಾಡಿದ್ದೇನೆ. ಇವರು ಉತ್ತರ ಕೊಡಗಿನ ಅವಂದೂರು ಗ್ರಾಮದವರು. ದಿ|| ಕೆ.ಪಿ. ಚಿಣ್ಣಪ್ಪ ಮತ್ತು ದಿ|| ತಾಯಮ್ಮನವರು ಇವರ ಪೂಜ್ಯ ಮಾತಾಪಿತೃಗಳು. ಇವರು ಹುಟ್ಟಿ ಬೆಳೆದದ್ದೆಲ್ಲ ಮಡಿಕೇರಿಯಲ್ಲೆ. ಶ್ರೀಯುತರು 4ಜನ ಸಹೋದರರು ಮತ್ತು 5 ಜನ ಸಹೋದರಿಯರನ್ನು ಹೊಂದಿ ತುಂಬು ಬಳಗದವರಲ್ಲಿ ಬೆಳೆದವರು. ಇವರ ತಂದೆ ನನ್ನ ಮಾವನವರು ಮಹಾಸಾಧ್ವಿಗಳು. ಹಾಗಾಗಿ ಜೀವನದಲ್ಲಿ ಅನೇಕ ರೀತಿಯ ಕಷ್ಟಗಳಲ್ಲಿ ಸಿಲುಕಿದ್ದರಂತೆ. ಮನೆಯ ಹಿರಿಮಗನಾಗಿ ನಿಷ್ಠೆಯಿಂದ ತನ್ನ ಜವಾಬ್ದಾರಿಗಳನ್ನು ನಿರ್ವಹಿಸದರು. ಇವರ ಕಿರಿಯರಿಗೆ ಅಣ್ಣಯ್ಯನಲ್ಲಿ ಬಹಳ ಗೌರವಾದಾರಗಳು. ಆ ಕಾಲದಲ್ಲಿ ಸ್ನಾತಕೋತ್ತರ ಪದವಿ ಪಡೆದು ನಮ್ಮ ಸಮಾಜದಲ್ಲಿ ಹೆಸರು ಮಾಡಿದರು. ಆದರೆ ಮನೆಯಲ್ಲಿನ ತಾಪತ್ರಯಗಳಿಂದ ಉನ್ನತ ಹುದ್ದೆಗೆ ಹೋಗಲಾಗಲಿಲ್ಲವೆಂದು ಪಶ್ಚಾತ್ತಾಪವು ಇವರಲ್ಲಿ ಇತ್ತು.

ಉದ್ಯೋಗದಲ್ಲಿ K.C.G. ಯೆಂದೇ ಪರಿಚಿತರಾದ ಇವರು ಬಹಳ ಶಿಸ್ತಿನ ಮನುಷ್ಯರು. ಯಾರಿಗೂ ತಲೆ ಬಾಗುತ್ತಿರಲಿಲ್ಲ. ತಾನು ಶಿಸ್ತನ್ನು ಪಾಲಿಸುವುದರೊಂದಿಗೆ ಇತರರಿಂದಲೂ ಶಿಸ್ತನ್ನೇ ಅಪೇಕ್ಷಿಸುತ್ತಿದ್ದರು. ಹಾಗೇನಾದರು ನಾವು ಅಶಿಸ್ತಿನಿಂದ ವರ್ತಿಸಿದರೆ ಕೋಪದಿಂದ ಕೆಂಡಮಂಡಲವಾಗಿಬಿಡುತ್ತಿದ್ದರು. ಇವರ ಶಿಸ್ತು ಮತ್ತು ನಿಯತ್ತಿನಿಂದ ಶಾಲಾ ಕಾಲೇಜುಗಳಲ್ಲಿ ಒಳ್ಳೆಯ ಹೆಸರುಗಳಿಸಿದ್ದರು. ವಿದ್ಯಾರ್ಥಿಗಳು ಕೆ.ಸಿ.ಜಿ. ಯೆಂದರೆ ಭಯ ಬೀಳುತ್ತಿದ್ದರಂತೆ. "Work is worship"ಎನ್ನುವಂತೆ ಯಾವುದೇ ಕೆಲಸವನ್ನಾದರೂ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಇವರೊಬ್ಬ ಉತ್ತಮ ಮಾಸ್ಟರ್ ಮತ್ತು ಮಾರ್ಗದರ್ಶಕರಾಗಿ, ಕೆಲವು ವಿದ್ಯಾರ್ಥಿಯರು ಇಂದಿಗೂ ಸ್ಮರಿಸುತ್ತಾರೆ.

ನನ್ನ ಪತಿಯವರು ನನಗೆ ದೇವರೇ ಆಗಿದ್ದರೆಂದರೆ ಖಂಡಿತ ಅತಿಶಯೋಕ್ತಿಯಾಗಲಾರದು. ನನ್ನನ್ನು ಗೌರವದಿಂದ ಕಾಣುತ್ತಿದ್ದರು. ನಾನು ದುಡಿಯುತ್ತಿದ್ದರು ಸಹ ಒಂದು ಸಲವಾದರು ನನ್ನ ವೇತನದ ಬಗ್ಗೆ ವಿಚಾರಿಸಿದವರಲ್ಲ. ನನ್ನ ಎಲ್ಲಾ ಸಮಸ್ಯೆಗಳನ್ನು ಸುಲಭವಾಗಿ ಬಗೆ ಹರಿಸುತ್ತಿದ್ದರು. ಅನೇಕ ಸಲ ನನ್ನ ಸ್ನೇಹಿತೆಯರು ಇವರೊಬ್ಬ "International Dictionary" ಇದ್ದಂತೆ ಎನ್ನುತ್ತಿದ್ದರು. ನನ್ನ ತಂದೆ, ತಾಯಿ ಸಹೋದರ, ಸಹೋದರಿಯರಿಗೆ ಇವರೆಂದರೆ ಬಲು ಪ್ರೀತಿ.

ನನ್ನ ಮಕ್ಕಳಿಗೂ ಒಳ್ಳೆಯ ಪೋಷಕರಾಗಿದ್ದು ಅವರ ಶ್ರೇಯೋಭಿವೃದ್ಧಿಗೆ ಬಹುವಾಗಿ ಶ್ರಮಿಸಿದರು. ಆದ್ದರಿಂದ ನನ್ನ ಹಿರಿಮೆಯ ಮಗಳು ಅನೇಕ ಸ್ಪರ್ಧೆಗಳಲ್ಲಿ ಬಹುಮಾನಗಳಿಸುವುದರೊಂದಿಗೆ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ತೆಗೆಯುವಂತಾಯಿತು. ಅಲ್ಲದೆ ಅವಳು ಒಂದು ಸಾರಿ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ತೃತೀಯ ಸ್ಥಾನ ಗಳಿಸುವಂತಾಯಿತು. ಇವರು ಒಬ್ಬ ಕ್ರೀಡಾ ಪಟುವಾಗಿದ್ದು ಮಾನಸ ಗಂಗೋತ್ರಿಯಲ್ಲಿ ಓದುತ್ತಿದ್ದಾಗ ಹಾಕಿ ಟೀಂನ ಕ್ಯಾಪ್ಟನ್ ಆಗಿದ್ದರೆಂದು ಕೇಳಿದ್ದೇನೆ. ಅಂತೆಯೇ ನನ್ನ ಕಿರಿಯ ಮಗಳು ವಾಲಿಬಾಲ್ ಟೀಂ ನಲ್ಲಿದ್ದು ಎರಡು ಬಾರಿ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರತಿನಿಧಿಸುವಂತಾಯಿತು ಎಂದು ತಿಳಿಸಲು ಸಂತೋಷವಾಗುತ್ತದೆ. ಇಷ್ಟಲ್ಲದೆ ನಮ್ಮ ಅಕ್ಕಪಕ್ಕದ ಮನೆಯ ಮಕ್ಕಳಿಗೂ ಪ್ರೋತ್ಸಾಹಿಸಿ ಅವರ ಪ್ರತಿಭೆ ಬೆಳಗಿಸಲು ಸಹಕರಿಸದರು. ಇವರು ಮಂಡ್ಯ ನಗರದಲ್ಲಿ ಗೌಡರ ಸಂತೋಷ ಕೂಟ ಸ್ಥಾಪಿಸಿದ ಮೂಲ ರೂವಾರಿಗಳಲ್ಲಿ ಇವರೊಬ್ಬರೆಂದು ತಿಳಿಸಲು ಖುಷಿ ಪಡುತ್ತೇನೆ.

ನಾವು 1980ರಲ್ಲಿ ಮಂಡ್ಯ ನಗರದಲ್ಲಿ ಸಂಸಾರ ನಡೆಸಲು ಪ್ರಾರಂಬಿಸಿದೆವು. ಇವರಿಗೆ ಮನೆ ಕಟ್ಟಿಸುವುದೆಂದರೆ "Fools build the house and the Wise men lives in it" ಎಂಬ ಅಭಿಪ್ರಾಯವಾಗಿತ್ತು. ಆದರೂ ನನಗೆ ಅನುಕೂಲ ವಾಗಲೆಂದು ನನ್ನ ಶಾಲೆಯ ಹತ್ತಿರವೇ ಒಂದು ಸುಂದರವಾದ ಮನೆಯನ್ನು ಕಟ್ಟಿಸಿದರು. ಇನ್ನೇನು ನಿವೃತ್ತಿ ಹೊಂದಿ ಆರಾಮವಾಗಿ ಕಳೆಯಬೇಕೆಂದು ಕೊಂಡಿರುವಾಗಲೆ ಅವರು ಕಾಲನ ಕೈವಶವಾದರು. **"ಶರಣರ ಗುಣವನ್ನು ಮರಣದಲ್ಲಿ ನೋಡು"** ಎಂಬಂತೆ ಇವರು ಯಾರಿಗೂ ತೊಂದರೆ ಕೊಡದೆ ಸುಖವಾಗಿ ಈ ಲೋಖವನ್ನು ತ್ಯಜಿಸಿದರು. ಇವರ ಭೌತಿಕ ಶರೀರ ನಮ್ಮೊಂದಿಗೆ ಇಲ್ಲದಿದ್ದರು ಅವರ ನೆನಪು ಸದಾ ನಮ್ಮೊಂದಿಗೆ ಮತ್ತು ಅವರ ಜೀವನ ನಮಗೆ ದಾರಿ ದೀಪವಾಗಿದೆ. ಭಗವಂತ ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ.

ಇಂತಿ ದುಃಖ ತಪ್ತ

ಪತ್ನಿ : ಭಾಗಿರಥಿ ಮತ್ತು ಮಕ್ಕಳು, ಮಂಡ್ಯ

ಕವನ :

ಪ್ರೇಮ,

ಪ್ರೇಮ ಎಂಬುದು ಒಂದು ಬಾವಿ
ಅರಿತು ನೋಡಿದರೆ ನೀರು
ಮರೆತು ನೋಡಿದರೆ ಮರಣ
ಅದನ್ನರಿತು ಬಾಳಿದರೆ ಜೀವನ

— ಕೂರನ ಸೌಧೀಸ್, ಚೇರಂಬಾಣೆ

ಪೂರ್ವದಿಂದ ಪಶ್ಚಿಮ ವಾಯುವ್ಯದ ಗಮನ – ಅನಾರೋಗ್ಯಕ್ಕೆ ಆಹ್ವಾನ

ಶುಭ ವಿವಾಹ

ಸೋಮವಾರ ಪೇಟೆ ತಾಲೂಕು ಬಾಣಾವರ ಗ್ರಾಮದ ಲೇ|| ಪಿ. ದೇವಯ್ಯನವರ ದ್ವಿತೀಯ ಪುತ್ರ ಲೀಲಾಕುಮಾರ್ (ಪೊನ್ನುಮಾಣಿ)ಗೂ ಹಾಗೂ ಹಾನಗಲ್ಲು ಗ್ರಾಮದ ಬದಿಯಡ್ಕ ರಾಮಣ್ಣನವರ ಪ್ರಥಮ ಪುತ್ರಿ ಸೇವಂತಿಗೂ 29-4-2001 ರಲ್ಲಿ ಸೋಮವಾರ ಪೇಟೆ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನಡೆಯಿತು ಎಂದು ತಿಳಿದುಬಂದಿದೆ.

ಕುಂಬಳದಾಳು ಗ್ರಾಮದ ಬೊಬೀರ ಬೊಜಪ್ಪನವ್ರ ಮಂಜ ಚಂದ್ರ ಶೇಖರಂಗೂ ಮತ್ತೆ ಕಿರುಂದಾಡು ಗ್ರಾಮದ ಮುಕ್ಕಾಟಿ ಬಿದ್ದಪ್ಪನವ್ರ ಮಗ್ಳು ಜಾಜಿಗೂ ದಿನಾಂಕ 17-5-2001 ರಂದ್ ಮುರ್ನಾಡ್ ಗೌಡ ಸಮಾಜಲಿ ಲಗ್ನ ಲಾಯ್ಕಾಗಿ ಕಳ್ಂಗಡ.

ಮದೆ ಗ್ರಾಮದ ಪಟ್ಟಡ ಸುಬ್ಬಯ್ಯನವ್ರ ಮಗ್ಳು ಹಂಸಿಗೂ ಮತ್ತೆ ಕಾಟಕೇರಿ ಗ್ರಾಮದ ಹೊಸೋಕ್ಲು ಸೋಮಯ್ಯನವ್ರ ಮಂಜ ಸುಕುಮಾರಂಗೂ ತಾರೀಖ್ 18-5-2001ರ್ಲಿ ಮಡಿಕೇರಿಲಿರ್‍ವ ವಿದ್ಯಾಸಂಘದ ಕಲ್ಯಾಣಮಂಟಪಲಿ ಬಾರಿ ಲಾಯ್ಕಾಗಿ ಕಳ್ಂತ ತಿಳ್ದ್ ಬಂದುಟ್ಟು.

ಕುಶಾಲನಗರ ನಿವಾಸಿ ಕಾನೆಹಿತ್ಲು ನಂಜಪ್ಪನವರ ಮಗುಳು ನಳಿನಿ ಕುಮಾರಿಗೂ ಹಾಗೂ ಮಡಿಕೇರಿ ಕನ್ನಂಡ ಬಾಣೆ ನಿವಾಸಿ ಕನ್ನಂಡ ಮಾದಪ್ಪನವರ ಮಗ ರಾಯ್ ಪೊನ್ನಪ್ಪನಿಗೂ ದಿನಾಂಕ 18-5-2001ರಲ್ಲಿ ಕುಶಾಲನಗರದ ಕಾಳೇಘಾಟ್ ಕಲ್ಯಾಣ ಮಂಟಪಲಿ ಬಾರಿ ಗೌಜಾಗಿ ನಡೆಯಿತು.

ಅವಂದೂರು ಗ್ರಾಮದ ಪಟ್ಟಡ ಉಲ್ಲಾಸನವ್ರ ಮಗ್ಳು ಕುಮುದಾಳ (ರಶ್ಮಿ) ಮತ್ತೆ ಅರ್‍ವತ್ತೊಕ್ಲು ಗ್ರಾಮದ ತುಂತಜೆರ ಸೋಮಯ್ಯನವ್ರ ಮಂಜ ರಂಜಿತ್ ಕುಮಾರನ ಮದ್ವೆ ತಾರೀಖ್ 18-5-2001ರ್ಲಿ ಗೂಡೆನ ಮನೇಲಿ ನಡ್ತ್. ಹೈದ ದಿಬ್ಬಣಾಡಿ ಬಂದ್ ಗೂಡೆನ ಕರ್‍ಕೊಂಡೋಗಿ ವರನ ಮನೆಲಿ ತಾರೀಖ್ 19 ರಂದ್ ದಂಪತಿ ಮುಹೂರ್ತಲಿ ಲಗ್ನವಾದೊ ಮತ್ತೆ ಬಾರಿ ಲಾಯ್ಕಲಿ ಹಳೇಕಾಲದ ಪದ್ದತಿ ಪ್ರಕಾರ ನಡ್ತ್.

ಬೆಂಗಳೂರು ನಿವಾಸಿ ದಂಬೆಕೋಡಿ ಎಸ್ ಆನಂದನವರ ಮಗುಳು ಡಾ|| ಮೇಘಳಿಗೂ ಹಾಗೂ ಬೆಂಗಳೂರು ನಿವಾಸಿ ಚೆಟ್ಟಿಮಾಡ ಆನಂದನವರ ಮಗ ಡಾ|| ಚೇತನ್‌ನಿಗೂ ದಿನಾಂಕ 20-5-2001 ರಂದ್ ಮಡಿಕೇರಿ ಸಮೀಪದ ಕ್ಯಾಪಿಟಲ್ ವಿಲೇಜ್‌ನಲ್ಲಿ ತುಂಬಾ ವಿಜೃಂಭಣೆಯಿಂದ ಮದುವೆ ನಡೆಯಿತು.

ಬೆಂಗಳೂರು ನಿವಾಸಿ ಎಡಿಕೇರಿ ದಿ|| ಸುಬ್ರಾಯ ಹಾಗೂ ಶ್ರೀಮತಿ ಕೆ. ಎನ್. ರಾಧ ಇವರ ಪುತ್ರಿ ಭಾರತಿಗೂ ಮತ್ತೆ ಮಡಿಕೇರಿ ನಿವಾಸಿ ಕಾನೆಹಿತ್ಲು ದಿ|| ಮಾದಪ್ಪ ಹಾಗೂ ಕೆ. ಎಂ. ಉಮಾವತಿ ಇವರ ಪುತ್ರ ಉಮೇಶ್‌ನ ಮದುವೆ ನಿಮಿತ್ತ ಸತ್ಕಾರಕೂಟನ (Reception) ತಾರೀಖ್ 21-5-2001 ಕ್ಕೆ ಮಡಿಕೇರಿಯಲ್ಲಿರ್‍ವ ಕೆಳಗಿನ ಕೊಡವ ಸಮಾಜಲಿ ಇಟ್ಟ್‌ಕಂಡ್ ಇದ್ದೊ. ಹಂಗೇನೇ ಲಾಯ್ಕಾಗಿ ಕಳ್ಂತ ತಿಳ್ದ್ ಬಂದುಟ್ಟು

ಚೆನ್ನಂಗಿ ಗುಡ್ಲೂರು ಗ್ರಾಮದ ಪಾರೆಮಜಲು ಕೃಷ್ಣಪ್ಪನವರ ಮಗ ಮೋಹನ (ರವಿ) ಗೂ ಮತ್ತೆ ಅದೇ ಗ್ರಾಮದ ಹೊಸೋಕ್ಲು ಮುತ್ತಣ್ಣನವರ ಪುತ್ರಿ ಲಲಿತಂಗೂ (ರಾಧ) ತಾರೀಖ್ 24-5-2001ರಂದು ಸಿದ್ದಾಪುರ ಹೈಸ್ಕೂಲ್‌ಲಿ ಮದ್ವೆ ಬಹಳ ಚೆನ್ನಾಗಿ ಕಳೆಯಿತು.

ಮದೆ ಗ್ರಾದ ಪಟ್ಟಡ ಸುಬ್ಬಯ್ಯನವರ ಮಗ ಜಗದೀಶ್‌ಂಗೂ ಮತ್ತೆ ಅದೇ ಗ್ರಾಮದ ಮುಕ್ಕಾಟಿ ಲೋಭಯ್ಯನವರ ಮಗಳು ಜಮುನಳಿಗೂ ತಾರೀಖ್ 25-5-2001ರಲ್ಲಿ ಮದುವೆ ವರನ ಸ್ವಗೃಹದಲ್ಲಿ ಚೆನ್ನಾಗಿ ಕಳಿಯಿತೆಂದು ತಿಳಿದು ಬಂದಿದೆ.

ಕಟ್ಟೆಮಾಡು ಗ್ರಾಮದ ಜೈನೀರ ವೆಂಕಟೇಶ್‌ನವರ ಪುತ್ರ ನವೀನ್‌ನಿಗೂ ಹಾಗೂ ಕಾನ್‌ಬೈಲು ಗ್ರಾಮದ ದಿ|| ಕೊಳಂಬೇರ ಮಾದಪ್ಪನವರ ಮಗಳು ಸವಿತಳಿಗೂ ತಾರೀಖ್ 25-5-2001ರಂದು ಮಡಿಕೇರಿಯಲ್ಲಿರುವ ಕೆಳಗಿನ ಗೌಡ ಸಮಾಜದಲ್ಲಿ ಲಗ್ನ ಕಾರ್ಯವು ಬಹಳ ಜೋರಾಗಿ ನಡೆಯಿತ್ತೆಂದು ತಿಳಿದು ಬಂದಿದೆ.

ಸೋಮವಾರ ಪೇಟೆ ತಾಲೂಕು ಯಡವಾರೆ ಗ್ರಾಮದ ನಂಗಾರು ಚಿಣಪ್ಪನವರ ಪುತ್ರ ಚಂದ್ರಕುಮಾರ್‌ನಿಗೂ ಮತ್ತು ಗುಡ್ಡೆ ಹೊಸೂರು, ಸನಿಹದ ಬೊಳ್ಳೂರು ಗ್ರಾಮದ ಕೋಡಿ ಮಾಚಯ್ಯನವರ ಮಗಳು ಅನಿತಳ ವಿವಾಹವು ದಿನಾಂಕ 27-5-2001ರಲ್ಲಿ ಕುಶಾಲನಗರ ಗೌಡ ಕಲ್ಯಾಣ ಮಂಟಪದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ಮದೆ ಗ್ರಾಮದ ಬೈಸೆರವನ ಮೊಣ್ಣಪ್ಪನವರ ಪುತ್ರ ಇಂದ್ರ ಕುಮಾರನಿಗೂ ಮತ್ತು ಸುಳ್ಯ ಸನಿಹ ಮುರುಳ್ಯ ಗ್ರಾಮದ ದಿ|| ನಿಡ್ಯಾಜೆ ಸುಬ್ಬಯ್ಯನವರ ಪುತ್ರಿ ಶೋಭಾವತಿಗೂ ದಿನಾಂಕ 31-5-2001ರಲ್ಲಿ "ಮದೆ ಬೆಳಕುಮಾನಿ" ಶಾಲೆಯಲ್ಲಿ ಶಾಸ್ತ್ರ ರೀತ್ಯ ಸರಳವಾಗಿ ಸುಂದರವಾಗಿ ನಡಿಯಿತ್ತೆಂದು ತಿಳಿದು ಬಂದಿದೆ.

ಪೂರ್ವಾಗ್ನೇಯದಿಂದ ಪಶ್ಚಿಮ ದ್ವಾರಗಮನ – ಯಜಮಾನನ ಪತನ

"ಅಭಿವೃದ್ಧಿ ಪಥದಲ್ಲಿ ಗೌಡ ಯುವ ಜನಾಂಗ"

ಹೆಸರಾಂತ ಆಂಗ್ಲ ನಾಟಕಕಾರ ಷೇಕ್ಸ್‌ಪಿಯರ್‌ನ ಪ್ರಕಾರ ಪ್ರಪಂಚವೆಂಬ ವೇದಿಕೆಯಲ್ಲಿ ನಾವು ಬರೇ ಪಾತ್ರಧಾರಿಗಳು. ವೇದಿಕೆಯ ಮೇಲೆ ಬಂದು ನಮ್ಮ ಅಭಿನಯ ಮುಗಿದಾಗ ನಿರ್ಗಮಿಸಬೇಕು. ನಮಗೆ ದೊರೆತ ಪಾತ್ರವನ್ನು ಸಮರ್ಪಕವಾಗಿ ಅಭಿನಯಿಸಬೇಕು. ಆಗ ಎಲ್ಲರ ಮೆಚ್ಚುಗೆಗೂ ಪಾತ್ರರಾಗುತ್ತೇವೆ. ಪಾತ್ರ ನಿರ್ವಹಣೆಯನ್ನು ಪ್ರೇಕ್ಷಕರು ವಿಶ್ಲೇಷಿಸುವಂತೆ ನಮ್ಮ ನಿಜ ಜೀವನದಲ್ಲೂ ನಾವು ವಿಶ್ಲೇಷಣೆಗೆ ಒಳಗಾಗುತ್ತೇವೆ. ಆದುದರಿಂದ ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸುವುದು ನಮ್ಮ ಆದ್ಯಕರ್ತವ್ಯವಾಗಿರುತ್ತದೆ.

ಚೀನಾದಲ್ಲಿ ಹರಿಯುವ ಒಂದು ನದಿ ಹಿಂದೆ ಪ್ರತಿ ವರ್ಷವೂ ತನ್ನ ಪಾತ್ರವನ್ನು, ಬದಲಾಯಿಸುತ್ತಾ ಅಲ್ಲಿಯ ಜನರಿಗೆ ಸಾಕಷ್ಟು ಕಷ್ಟ ನಷ್ಟಗಳನ್ನು ಉಂಟುಮಾಡಿ "ಕಣ್ಣೀರಿನ ನದಿ" ಯೆಂದೇ ಕರೆಸಿಕೊಂಡಿತು. ಚೀನಾದ ಜನರು ಆ ನದಿಯ ನೀರನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಆಗುತಿದ್ದರೆ ಅದು ಅವರಿಗೆ ವರವಾಗುತ್ತಿತ್ತು. ದುರಾದೃಷ್ಟವಶಾತ್ ಅದು ಶಾಪವಾಗಿ ಕಾಡಿತು. ಅಂತೆಯೇ ನಮ್ಮ ಗೌಡ ಯುವಜನಾಂಗದ ಹೆಚ್ಚಿನವರು ತಮ್ಮಲ್ಲಿರುವ ಪ್ರತಿಭೆ, ಜಾಣ್ಮೆ, ಬುದ್ಧಿವಂತಿಕೆಗಳನ್ನು ಸರಿಯಾದ ಪಾತ್ರದಲ್ಲಿ ಹರಿಯುವಂತೆ ಮಾಡದೆ, ಚೀನಾದ ಕಣ್ಣೀರಿನ ನದಿಯಂತೆ ಸಿಕ್ಕಿದಲ್ಲೆಲ್ಲ ಹರಿಯುವಂತೆ ಮಾಡಿ ನಮ್ಮ ಜನಾಂಗದ ಕಣ್ಣೀರಿಗೆ ಕಾರಣರಾಗಿದ್ದಾರೆ. ಗೌಡ ಜನಾಂಗದ ಯುವಕರು ಇತರ ಸಮಾಜಗಳ ಯುವಕರಷ್ಟೇ ಬುದ್ಧಿವಂತರೂ ಪ್ರತಿಭಾಶಾಲಿಗಳೂ ಆಗಿದ್ದಾರೆ. ಆದರೆ ತಮ್ಮ ಪ್ರತಿಭೆ ಮತ್ತು ಬುದ್ಧಿವಂತಿಕೆಯನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಅವರಿಂದ ಸಾಧ್ಯವಾಗುತ್ತಿಲ್ಲ. ಇದಕ್ಕೆ ಹಲವಾರು ಕಾರಣಗಳಿರಬಹುದು. ಅವರಿಗೆ ಆರ್ಥಿಕ ಸಮಸ್ಯೆ ಇರಬಹುದು, ಇಲ್ಲವೇ ಸರಿಯಾದ ಮಾರ್ಗದರ್ಶನ ಇಲ್ಲದಿರಬಹುದು ಅಥವಾ ತಮ್ಮ ಭವಿಷ್ಯದ ಬಗ್ಗೆ ಕಾಳಜಿ ಇಲ್ಲದಿರಬಹುದು. ಇಂತಹ ಯುವಕರಿಗೆ ಸರಿಯಾದ ಮಾರ್ಗದರ್ಶನದ ಅಗತ್ಯವಿದೆ.

ಈಗಿನ ಹೆಚ್ಚಿನ ಯುವಕರಿಗೆ ಹಿರಿಯರ ಹಿತವಚನಗಳು ಕಿವಿಗೆ ಕಾಯಿಸಿದ ಸೀಸ ಸುರಿದಂತೆ ಆಗುವುದು ಸಾಮಾನ್ಯ. ಆದುದರಿಂದ, ಕಬ್ಬಿಣವು ಬೆಂಕಿಯಲ್ಲಿ ಕಾದು ಕೆಂಪಾದಾಗ ಬಡಿದು ಬೇಕಾದ ರೂಪಕ್ಕೆ ತರುವ ಕಮ್ಮಾರನಂತೆ, ಪ್ರತಿಯೊಬ್ಬ ಹೆತ್ತವರೂ, ಶಿಕ್ಷಕರೂ ಸರಿಯಾದ ಸಮಯದಲ್ಲಿ, ಮಕ್ಕಳನ್ನು ಬೇಕಾದ ರೀತಿಯಲ್ಲಿ ರೂಪಿಸುವುದು ತಮ್ಮ ಹಾಗೂ ಸಮಾಜದ ಹಿತದೃಷ್ಟಿಯಿಂದ ಅತೀ ಅಗತ್ಯವಾಗಿದೆ. ಆಧುನಿಕ ಸಮಾಜದಲ್ಲಿ ಯುವಕರು ವಿಷಯ ಲೋಲುಪತೆಗೆ ಬಲಿ ಬೀಳದಂತೆ ಎಚ್ಚರ ವಹಿಸಬೇಕು.

ನಮ ಜನಾಂಗ ಇನ್ನೂ ಹಿಂದುಳಿದವರ ಪಟ್ಟಿಯಲ್ಲಿಯೇ ಸೇರಿರುತ್ತದೆ. ನಮ್ಮ ಯುವಕರು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮುಂದುವರಿಯುವುದು ಅತೀ ಅಗತ್ಯವಾಗಿದೆ. ನಮ್ಮ ಯುವ ಜನಾಂಗ ಶೈಕ್ಷಣಿಕವಾಗಿ ಮುಂದುವರಿದರೆ, ಎಲ್ಲಾ ರೀತಿಯಲ್ಲೂ ಮುಂದುವರಿಯಲು ಸಾಧ್ಯವಿದೆ. ಆದುದರಿಂದ ಶಿಕ್ಷಣಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಬೇಕಾಗಿದೆ.

"ಆಧುನಿಕ ಸುಳ್ಯದ ಶಿಲ್ಪಿ" ಹಾಗೂ "ಸುಳ್ಯದ ಬಿರ್ಲಾ" ಎಂದು ಕರೆಯಲ್ಪಟ್ಟ ಶ್ರೀ ಕುರುಂಜಿ ವೆಂಕಟ್ರಮಣ ಗೌಡರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಆದರೆ ತಾಂತ್ರಿಕ ವಿದ್ಯಾಲಯ ಮತ್ತು ದಂತ ವೈದ್ಯಕೀಯ ವಿದ್ಯಾಲಯಗಳಲ್ಲಿ ನಮ್ಮ ಜನಾಂಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಬರೇ ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ. ಬಹುತೇಕವಾಗಿ ಬಿ.ಎ. ಮತ್ತು ಬಿ.ಕಾಂ.ಗಳಲ್ಲೇ ತೃಪ್ತಿ ಕಾಣುತ್ತಿದ್ದಾರೆ. ಈ ಕೋರ್ಸ್‌ಗಳಲ್ಲಿಯೂ ಮುಂದುವರಿದು ಸ್ನಾತಕೋತ್ತರ ಪದವಿಗಳನ್ನು ಪಡೆದು, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಯಶಸ್ವಿಯಾಗಬಹುದು, ಉತ್ತಮ ಉದ್ಯೋಗಗಳನ್ನು ಪಡೆಯಬಹುದು.

ಸಮಾಜದಲ್ಲಿ ಗೌರವಾನ್ವಿತವಾಗಿ, ಸುಖವಾಗಿ ಬಾಳಲು ಸರಕಾರೀ ಉದ್ಯೋಗವೊಂದೇ ದಾರಿಯಲ್ಲ. ವಿದ್ಯಾಕ್ಷೇತ್ರದಲ್ಲಿ ಯಶಸ್ಸು ಕಾಣದವರು, ತಮ್ಮ ಪ್ರತಿಭೆಗಳನ್ನು ವಿಕಸನ ಮಾಡಿಕೊಂಡು, ಬೇರೆ ಯಾವುದೇ ಉದ್ಯೋಗವನ್ನು ಅವಲಂಬಿಸಬಹುದು. **"ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ"** ಎಂದು ದೇವರನ್ನೇ ನಂಬಿಕೊಂಡು ಉಂಡಾಡಿಗಳಾಗಬಾರದು. ಎಲ್ಲಾ ಯುವ ಜನಾಂಗ ಜೀವನದಲ್ಲಿ ಒಂದು ಗುರಿಯನ್ನು ಹೊಂದಿದ್ದು, ಅದನ್ನು ಸಾಧಿಸಿ, ಯಶಸ್ವೀ ಜೀವನ ಸಾಗಿಸುವುದು ಅತೀ ಅಗತ್ಯವಾಗಿದೆ. ಯುವ ಜನಾಂಗ, ಹೆತ್ತವರ ಗಳಿಕೆಯನ್ನೇ ತಮ್ಮ ಬಂಡವಾಳವನ್ನಾಗಿಸಿಕೊಳ್ಳದೆ ತಮ್ಮದೇ ಕಾಲಲ್ಲಿ ನಿಲ್ಲುವ ಮನಸ್ಸು ಮಾಡಬೇಕು, ಸ್ವಂತಿಕೆಯನ್ನು ಬೆಳೆಸಿಕೊಂಡು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಹೀಗಾದಾಗ ಗೌಡ ಜನಾಂಗ ಮಾತ್ರವಲ್ಲದೆ ಸಮಾಜದ ಇತರ ಎಲ್ಲಾ ಜನಾಂಗಗಳ ಜನರ ಪ್ರೀತಿಗೂ ಪಾತ್ರರಾಗುವುದರಲ್ಲಿ ಸಂಶಯವಿಲ್ಲ.

ಸ್ಥಳೀಯ ಯುವಕರು ವ್ಯಾಪಾರವನ್ನು ತಮ್ಮ ಉದ್ಯೋಗವನ್ನಾಗಿ ಮಾಡಿಕೊಂಡು ಯಶಸ್ಸನ್ನು ಸಾಧಿಸುತ್ತಿರುವುದು ನಮಗೆ ತಕ್ಕ ಮಟ್ಟಿಗೆ ನೆಮ್ಮದಿಯನ್ನು ತರುವ ವಿಚಾರ. ಆದರೆ ಇನ್ನೂ ಎಷ್ಟೋ ಯುವಕರು ತಮ್ಮ ಜೀವನದಲ್ಲಿ ನೆಲೆಯನ್ನು ಕಾಣದಿರುವುದು ತುಂಬಾ ಅಷ್ಟೇ ಬೇಸರದ ಸಂಗತಿ. ಇಂತಹ ಯುವಕರಿಗೆ ನಮ್ಮ ಜನಾಂಗದ ಹಿರಿಯರು ಉತ್ತಮ ಮಾರ್ಗದರ್ಶನ ನೀಡಬೇಕಾಗಿದೆ. ಈ ದಿಸೆಯಲ್ಲಿ ಗೌಡಸಂಘವು ಉತ್ತಮ ಕಾರ್ಯನಿರ್ವಹಿಸಲು ಸಾಧ್ಯ. ಈಗಾಗಲೇ ಸ್ಥಾಪಿತವಾಗಿರುವ ಯುವ ಗೌಡ ಸಂಘವು ಸಾಕಷ್ಟು ಉತ್ತಮ ಕೆಲಸಗಳನ್ನು ಮಾಡುತ್ತಿದೆ. ನಮ್ಮ ಜನಾಂಗದ ಯುವಕ ಯುವತಿಯರು ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಳಿಸುವ ಪ್ರಯತ್ನದಲ್ಲಿ ಸಫಲರಾಗಿ ಇಡೀ ಜನಾಂಗವೇ ಸರ್ವತೋಮುಖ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇನೆ.

— ಶ್ರೀಮತಿ ಕಮಲಾ ಬಾಲಚಂದ್ರ, ಪ. ಪೂ. ಕಾಲೇಜು, ಸುಳ್ಯ.

ಆರೋಗ್ಯ: ಮಧ್ಯ ವಯಸ್ಸಿನ ಮಹಿಳೆಗೆ ಬೊಜ್ಜು ಬೆಳೆಯುವುದೇಕೆ?

ಮಹಿಳೆ ಮಧ್ಯಮ ವಯಸ್ಸಿಗೆ ಹೆಜ್ಜೆ ಇಟ್ಟಾಗ ಬೊಜ್ಜು ಬರಲು ಪ್ರಾರಂಭವಾಗುತ್ತದೆ. ಮಹಿಳೆಯ 40-50ನೇ ವಯೋಮಾನವನ್ನು'ಬೊಜ್ಜು ಬೆಳೆಯುವ ಕಾಲ' ಎಂದು ಕರೆಯುತ್ತಾರೆ. ವಯಸ್ಸು ಆದಂತೆಲ್ಲಾ ಶರೀರದಲ್ಲಿಯ ರಸಧೂತಗಳ (ಹಾರ್ಮೋನ್‌ಗಳ) ಅಸಮತೋಲತೆ ತಲೆದೋರುತ್ತದೆ. ಬೊಜ್ಜಿನ ಬೆಳವಣಿಗೆಗೆ ನಾಂದಿ ಹಾಡುತ್ತದೆ.

ನಲವತ್ತು ವಸಂತಗಳು ದಾಟಿದ ನಂತರ ಮಿದುಳಿನ ಅಡಿಯಲ್ಲಿನ ಪಿಟ್ಯುಟರಿ ಗ್ರಂಥಿಯ ಪ್ರಚೋದನೆಗೆ ಮಹಿಳೆಯರ ಕಿಬ್ಬೊಟ್ಟೆಯ ಬುಡದಲ್ಲಿಯ ಅಂಡಾಶಯಗಳು ಪ್ರತಿಕ್ರಿಯಿಸುವುದಿಲ್ಲ ಅಥವಾ ಅಲ್ಪ ಸ್ವಲ್ಪ ಸ್ಪಂದಿಸಬಹುದು. ಹೀಗಾಗಿ ಲೈಂಗಿಕ ರಸದೂತವಾದ ಇಸ್ಟ್ರೋಜನ್ ಪ್ರಮಾಣ ಗಣನೀಯವಾಗಿ ಕಡಿಮೆಯಾಗುವುದು.

ಥೈರಾಯ್ಡ್ ರಸಧೂತಗಳು ಶರೀರದ ಚಯಾಪಚಯ (ಮೆಟಬಾಲಿಸಂ) ಕ್ರಿಯೆಗೆ ಹೇಗೆ ಅವಶ್ಯವೋ ಹಾಗೆ ಇಸ್ಟ್ರೋಜನ್ ಕೂಡಾ ಅಗತ್ಯ. ಶರೀರದಲ್ಲಿ ಇಸ್ಟ್ರೋಜನ್ ಹೆಚ್ಚಿದಂತೆ ಚಯಾಪಚಯ ಕ್ರಿಯೆ ಹೆಚ್ಚಾಗುತ್ತದೆ. ಆಮ್ಲಜನಕದ ಉಪಯೋಗದಲ್ಲಿ ಹೆಚ್ಚಳವಾಗುತ್ತದೆ. ಕ್ಯಾಲರಿಗಳು ಖರ್ಚಾಗುತ್ತವೆ. ಇಸ್ಟ್ರೋಜನ್ ಕೊರತೆ ಮಧ್ಯಮ ವಯಸ್ಸಿನ ಮಹಿಳೆಯರಲ್ಲಿ ತಲೆದೋರುವುದರಿಂದ ಇವುಗಳ ತದ್ವಿರುದ್ಧದ ಪರಿಣಾಮಗಳಿಗೆ ಹಾದಿ ಮಾಡಿ ಕೊಡುತ್ತದೆ. ಜೊತೆಗೆ ತಮ್ಮ ಚಟುವಟಿಕೆಗಳಿಗೆ ತಕ್ಕಂತೆ ಆಹಾರ ಸೇವನೆಯಲ್ಲಿ ಮಾರ್ಪಾಡನ್ನು ಮಹಿಳೆಯರು ಸಾಮಾನ್ಯವಾಗಿ ಮಾಡುವುದಿಲ್ಲವಾದ್ದರಿಂದ ತಮಗೆ ಅರಿವಿಲ್ಲದಂತೆ ಬೊಜ್ಜಿನ ಬೆಳವಣಿಗೆಯತ್ತ ಹೆಜ್ಜೆ ಹಾಕುತ್ತಾರೆ.

ಮಧ್ಯಮ ವಯಸ್ಸಿನಲ್ಲಿ ಮಹಿಳೆಯರು ಮಕ್ಕಳನ್ನು ಬೆಳೆಸುವ ದೈಹಿಕ ಹಾಗೂ ಮಾನಸಿಕ ಒತ್ತಡ ಹಾಗೂ ಪರಿಶ್ರಮಗಳ ಬಂಧನದಿಂದ ಬಿಡುಗಡೆ ಪಡೆದಿರುತ್ತಾರೆ. ಈ ಹಂತದಲ್ಲಿ ಬದುಕು ಸರ್ವೇಸಾಮಾನ್ಯವಾಗಿ ಶಾಂತಿ ಹಾಗೂ ಆಲಸ್ಯಗಳ ಸಂಗಮವಾಗಿರುತ್ತದೆ. ಶಕ್ತಿಯ ವಿನಿಯೋಗ ಕಡಿಮೆಯಾಗಿರುತ್ತದೆ. ಆದರೆ ಹೆಚ್ಚಿಗೆ ತಿನ್ನುವ ಹವ್ಯಾಸ, ಐಷಾರಾಮಿನ ಮನೋಭಾವ ಬಲಿಯುತ್ತಿರುತ್ತದೆ. ಇವೆಲ್ಲವುಗಳ ಪರಿಣಾಮಗಳು ಒಂದಕ್ಕೊಂದು ಪೂರಕ, ಪೋಷಕ, ಪರಿಪೂರಕಗಳಾಗಿ ಸಹಕರಿಸುತ್ತವೆ. ಬೊಜ್ಜು ಶೇಖರಣೆಗೆ ಸಹಾಯಕವಾಗುತ್ತವೆ. ಬೊಜ್ಜು ಶೇಖರಣೆ ಆಲಸ್ಯತನಕ್ಕೂ, ಆಲಸ್ಯತನ ಬೊಜ್ಜು ಶೇಖರಣೆಗೂ ಎಡೆಮಾಡಿಕೊಡುತ್ತವೆ. ಹೀಗಾಗಿ ಆದಿ ಅಂತ್ಯಗಳಿಲ್ಲದ ಈ ವಿಷವೃತ್ತದ ತಿರುಗಣಿ ಮಡುವಿಗೆ ಸಿಕ್ಕ ಮಧ್ಯಮ ವಯಸ್ಸಿನ ಮಹಿಳೆ ಹೊರಬರಲು ಹೋರಾಡಬೇಕಾಗುತ್ತದೆ. ಇದಕ್ಕೆ ಧೃಢವಾದ, ಅಚಲವಾದ ಮನೋನಿರ್ಧಾರ ಅತ್ಯಗತ್ಯ.

ಹೆಚ್ಚುವರಿ ತೂಕ (Over-Weight) ಹಾಗೂ 'ಬೊಜ್ಜು' ಒಂದೇ ಅರ್ಥ ಬರುವ ಪದಗಳಲ್ಲ. ಹೆಚ್ಚುವರಿ ತೂಕದವರು ಬೊಜ್ಜಿನವರಾಗಿರಲಿಕ್ಕಿಲ್ಲ. ಕ್ರೀಡಾ ಪಟುಗಳಲ್ಲಿ, ಪರಿಶ್ರಮ ಜೀವಿಗಳಲ್ಲಿ ಮಾಂಸಖಂಡಗಳು ಬಲಿಷ್ಠವಾಗಿ ಬೆಳವಣಿಗೆಯಾಗುವುದರಿಂದಾಗಿ ತೂಕದಲ್ಲಿ ಹೆಚ್ಚುವರಿ ಹಣಕಿ ಹಾಕಬಹುದೇ ವಿನಃ ಬೊಜ್ಜಿನಿಂದೇನೂ ಅಲ್ಲ. ಬೊಜ್ಜಿನ ಮಹಿಳೆಯಲ್ಲಿ ಹೃದ್ರೋಗ, ರಕ್ತನಾಳಗಳಿಗೆ ಸಂಬಂಧಪಟ್ಟ ಕಾಯಿಲೆಗಳು, ಪಿತ್ತಕೋಶದ ರೋಗಗಳು, ಸಕ್ಕರೆ ಕಾಯಿಲೆಯ ಹಾವಳಿ, ಹಾಹಾಕಾರ ಹೆಚ್ಚು ಎಂದು ಸೋವಿಯತ್ ವಿಜ್ಞಾನಿ ವೈಗ್ರಿಗೊರೊವ್ ಹೇಳುತ್ತಾರೆ.

ಮಹಿಳೆಯರು ಸಾಮಾನ್ಯವಾಗಿ ಬೊಜ್ಜಿನ ಪ್ರಜ್ಞೆ ಚಿತ್ತದಲ್ಲಿ ಚುಚ್ಚುವಾಗ, ಅದರ ನಿಯಂತ್ರಣಕ್ಕೆ 'ಪಥ್ಯದ ಗೀಳಿ'ನಲ್ಲಿ ಗೋಳಾಡುವರು. ಇಂಥ ಅತಿರಥ ಮಹಾರಥ ಪ್ರಯತ್ನಗಳು ಛಲವಾಗಿ ಪ್ರಾರಂಭದ ಮೂರು ನಾಲ್ಕು ವಾರಗಳ್ಲಿ ಸ್ವಲ್ಪ ಬೊಜ್ಜು ಇಳಿಸುವಲ್ಲಿ ಯಶಸ್ವಿಯಾದರೂ, ಬೇಸರದ ಬೀಜ ಮೊಳಕೆ ಒಡೆದು ಮತ್ತೆ ಸ್ವಾಹಾಕಾರ್ಯ ಆರಂಭವಾಗಿ ಬೊಜ್ಜು ಬೆಳೆದು ಮೊದಲಿನ ಸ್ಥಿತಿಗೆ ಮುಟ್ಟುತ್ತದೆ. ಹೀಗಾಗಿ ಹಲವಾರು ಬಾರಿ ಪ್ರಾರಂಭವಾಗುವ 'ಪಥ್ಯದ ಗೀಳು' ಅಷ್ಟೇ ಸಲ ವಿಫಲವಾಗುವುದು ಸರ್ವೇಸಾಮಾನ್ಯ.

ಮಿತ ಆಹಾರ ಸೇವನೆ ಮತ್ತು ಶಾರೀರಿಕ ವ್ಯಾಯಾಮ ಬೊಜ್ಜು ಕರಗಿಸುವ ಮುಖ್ಯ ಉಪಾಯಗಳು. ಎಷ್ಟು ತಿನ್ನುತ್ತೇವೆ ಎನ್ನುವುದು ಮುಖ್ಯವಲ್ಲ. ಏನು ತಿನ್ನುತ್ತೇವೆ ಎಂಬುದು ಮುಖ್ಯ. ಬೊಜ್ಜು ಇಳಿಸುವ ಭರದಲ್ಲಿ ಅಲ್ಲಸಲ್ಲದ ಅಪಾಯಕರ ಉಪಾಯಗಳಿಗೆ, ವಿಫಲತೆಯಲ್ಲಿ ಕೊನೆಗೊಳ್ಳುವ ಪ್ರಯತ್ನಗಳಿಗೆ ವಿದಾಯ ಹೇಳಬೇಕು. ಶರೀರಕ್ಕೆ ಎಲ್ಲ ಜೀವಸತ್ವ, ಲವಣಾಂಶಗಳನ್ನು ಪೂರೈಸುವ ಸಮತೋಲ ಆಹಾರ ಸೇವನೆ ಬಹಳ ಮುಖ್ಯ. ಬೊಜ್ಜು ಶೇಖರಣೆಗೆ ಸಹಾಯಕವಾಗುವ ಕೊಬ್ಬಿನ ಪದಾರ್ಥಗಳನ್ನು ವರ್ಜಿಸಬೇಕು. ಕಡಿಮೆ ಕ್ಯಾಲರಿ ಕೊಡುವ ಪದಾರ್ಥಗಳ ಸೇವನೆ ಬೊಜ್ಜು ಇಳಿಸಲು ಸಹಾಯಕಾರಿ. "Balanced diet to boost and not to burst the body" ವಿಶ್ವ ಆರೋಗ್ಯ ಸಮತೋಲ ಆಹಾರ ಸಂಸ್ಥೆಯ ತಂಡದವರು ಹೇಳಿದಂತೆ ಇರುವಂತೆ ಎಚ್ಚರಿಕೆ ವಹಿಸಬೇಕು.

ಮಹಿಳೆಯರು ಮನೆಗೆಲಸ ಮಾಡುವಾಗ ಆಮ್ಲಜನಕದ ವಿನಿಯೋಗ, ಕ್ಯಾಲರಿಗಳ ಖರ್ಚು ಹೆಚ್ಚುತ್ತದೆ ಎಂಬುದು ಆಹಾರ ಸಂಶೋಧನಾ ಕೇಂದ್ರ ಅಧ್ಯಯನಗಳಿಂದ ಖಚಿತವಾಗಿದೆ. ಬೊಜ್ಜು ಕರಗಿಸಲು ಆಟದ ಬಯಲಿನ ವ್ಯಾಯಮ ಬೇಕೆಂದೇನೂ ಇಲ್ಲ. ಮನೆಯಲ್ಲಿ ಕಸ, ಮುಸುರೆ ಕೆಲಸ, ನೆಲ ಸಾರಿಸುವುದು, ಪರಸಿ ಒರೆಸುವುದು, ತೊಳೆಯುವುದು, ಕಪಾಟು ಸ್ವಚ್ಛ ಮಾಡಿ

ದಕ್ಷಿಣದಿಂದ ಉತ್ತರ ವಾಯುವ್ಯದ ದ್ವಾರಗಮನ – ಹೆಂಗಸಿಗಾಗುವುದು ದುರ್ವರ್ತನೆ 20 ನೇ ಪುಟಕ್ಕೆ

ವಾಂಟೆಡ್ ಮಿಸ್ಟರ್ ರಾಜು : [ನಮ್ಮ ರಾಜು ಮಂಜ ಕಥೆ]

ಲೇಖನ : ಶಂಕರನ ಬಸಪ್ಪ

ಧಾರಾವಾಯಿ - 33

Mr. ಮಹೇಂದ್ರಪಾಲ್ ನಮ್ಮರಾಜು ಮಂಜನ ಬೆಸ್ಟ್ ಪ್ರೆಂಡ್. ಇಲ್ಲಿ ಮಡಿಕೇರಿ ಕಾವೇರಿ ಕಾಲೇಜ್‌ಲಿ Ist P.U. ಓದಿಕೆ ಸುರು ಆಕನ ಜೊತೆಲಿ ಇವು ಪ್ರೆಂಡಾದವು. ನಮ್ಮ ರಾಜು ಮಂಜನ ಮಹೇಂದ್ರಪಾಲ್‌ಗೆ ತುಂಬಾ ಇಷ್ಟ. ಯಾಕೆತ್ತೇಳಿರೆ ಇವು ಇಬ್ರೇ ಆ ಕಾಲೇಜ್‌ಲಿ ಪ್ರತೀ ಒಂದ್ ಆಟಕೂಟಲಿ, ಮುಂದು. ತುಂಬಾ ಉತ್ಸಾಹಿಗ, ತುಂಬಾ ಧೈರ್ಯವಂತರ್‌ಗ. ಅಲ್ದೆ ಅಲ್ಲಿ ಕರಾಟೆ ಕ್ಲಾಸ್‌ಲಿ, ಸ್ಪೋರ್ಟ್ಸ್ ಪ್ರಾಕ್ಟೀಸ್‌ಗೆ ಇವು ಯಾಗೋಳು ಒಟ್ಟಿಗೇ ಇರೋವು. ಈ ಇಬ್ಬರದೂ ಒಂದೇ ತರದ ಸ್ವಭಾವ ಅದ್ ಏನ್ತ್ತೇಳಿರೆ ಭ್ರಷ್ಟಾಚಾರ, ವಂಚನೆ ಇಂತದರ ಕಂಡರೆ ಇವು ಕೆರಳಿ ನಿಂತ್ ಬುಟ್ಟವೆ. ಅಸಾಯಕ್‌ರಿಗೆ ಕೈಮೀರಿ ಸಹಾಯ ಮಾಡುದರಲಿ ಈ ಇಬ್ರೂ ಮುಂದೆ. ಹಂಗಾಗಿ ಈ ಇಬ್ರೂ ಯಾಗೋಳು ಒಟ್ಟಿಗೇ ಇರ್ತಿದ್ರೊ ಪ್ರಾಣ ಸ್ನೇಹಿತರ್‌ಗ ಆಗಿ. ಏನೋ ಮನೆ ಪರಿಸ್ಥಿತಿಯಿಂದಾಗಿ ಮಹೇಂದ್ರಪಾಲ್ ಕಾಲೇಜ್ ಓದುದರ ಬುಟ್ಟು ಬುಟ್ಟಿತ್.

Mr. ಮಹೇಂದ್ರಪಾಲ್ ಮಾರನೆ ದಿನ ಬೆಳ್ಳಿಗ್ಗೆ ಎದ್ದ್ ಒಂದ್ ಬಾಡಿಗೆ ಕಾರ್‌ನ ತಕಂಡ್ Mr. ರಾಜು ಮಂಜ ಕೊಟ್ಟ ಸಾಮಾನುಗಳನೆಲ್ಲಾ ಕಾರ್‌ಲಿ ತುಂಬಿಸಿ ಕಂಡ್ ಬಂದ್ ತಾಳೋತ್ತುಮಾನಿ ಕೆಳಮನೆ ಬೋಪಜ್ಜನ ಮನೆ ಗೇಟ್‌ಗೆ ತಲಪಿಕಾಕನ ಗಂಟೆ 11ಆಗಿತ್. ಮನೆಂದ ನಿಂತ್‌ಕಂಡ ಬೋಪಜ್ಜ ಕೈನ ಕಣ್ಣಿಗೆ ಅಡ್ಡಹಿಡ್ದ್ ಇಷ್ಟೊತ್ತಿಗೆ ಯಾರ್ದ್‌ಕಾರ್ ಬಂದ್ ಗೇಟ್ ಹತ್ರ ನಿಂತ್‌ಕಂಡುಟಲ್ಲಾ? ನನ್ನ ರಾಜು ಮಂಜ ಏನಾದ್ರೂ ಕಾರ್‌ನೆ ತಕಂಡ್ ಬಂದು ಬುಡ್ತಾ ತಾ ಗ್ಯಾನ ಮಾಡಿಕಂಡ್ ಆಸೆ ಕಣ್ಣ್‌ಂದ ನೋಡ್ತಿದ್ರೊ. ಆಗ ಅದ್ರಂದ ಇಳ್ದ ಒಂದ್ ಹೈದ ಕಾರ್ ಒಳಗಿಂದ 4-5 ಮೂಟೆ ಸಾಮಾನ್‌ಗಳ ಕಾರ್‌ಂದ ಕೆಳಗೆ ಇಳ್ಸಿಕಂಬತಿತ್. "ಏಯ್ ಮಗಳೇ ಬಾ ಮೊನೆ ಸೋಭಾ" ಅದ್ ಯಾರ್‍ದ್ ನೋಡ್ ಆ ಕಾರ್. ಯಾರೋ ಒಬ್ಬ ನಮ್ಮ ಮನೆಗೇ ಬರ್ತ್ವಜನ ಕಂಡದೆ. ನೀನ್ ಹೋಗ್ ಅಲ್ಲಿಗೆ. ನಾಲ್ಕೈದ್ ಗಂಟು ಮೂಟೆಗ ಬೇರೆ ಕೆಳಗೆ ಇಳ್ಸುತಾ ಉಟ್ಟುತಾ ಮಗಳಿಗೆ ಗೇಟ್ ಹತ್ರ ಹೋಕೆ ಹೇಳ್ತ್.

ಸೋಭ ಗೂಡೆ ಅತ್ತ ಓಡಿ ಹೋತ್, ಆ ಬಂದಿದ್ದ ಅಥಿತಿನ ಆಶ್ಚರ್ಯಲಿ ನೋಡ್ತ್. ಬಂದಿದ ಕಾರ್ ವಾಪಾಸ್ ತಿರುಗುತಿತ್ತ್ ಓ ಹಲ್ಲೋ ಸೋಭ ಸಿಸ್ಟರ್ ನಾನ್ ನಿನ್ನ ಅಣ್ಣ ರಾಜುನ ಬೆಸ್ಟ್ ಪ್ರೆಂಡ್, ಮೈಸೂರ್‌ಂದ ಬರ್ತ್ತಾಒಳೆ ತಾ ಹೇಳಿಕಂಡ್ ವಿಶ್‌ಮಾಡಿ ಆಮೇಲೆ ಆ ಬಟ್ಟೆಗಂಟ್‌ಗಳನೆಲ್ಲಾ ಒಂದೊಂದಾಗಿ ತನ್ನ ಹೆಗಲ್ ಮೇಲೆ ತಲೆಮೇಲೆ ಏರ್ಸಿಕಂಡತ್.

ತಂಗೆ ಸೋಭ ಖುಷೀಲಿ ಆ ಫ್ರೆಂಡ್‌ಗೆ ನಮಸ್ತೆ ಮಾಡಿ ತಾನೂ ಅಲ್ಲಿ ಮಿಕ್ಕಿದ ಎರಡ್ ತೂಕವಾದ ಬಾಕ್ಸ್‌ಗಳ ಒಂದೊಂದ್ ಕೈಲಿ ಹಿಡ್ಕಂಡ್ ಬನ್ನಿ ಪೋಯಿತ್ತೇಳಿ ಮನೆಗೆ ಕರ್ಕ್‌ಂಡ್ ಬಾತ್.

ಈ ತೂಕದ ಗಂಟ್ ಮೂಟೆಗಳ ಪೆಟ್ಟಿಗೆಗಳ ಹೊತ್ತ್‌ಕಂಡ್ ಬಂದ್ ಈ ನೇಪಾಳಿ ಹೈದನ ಬೋಜಪಜ್ಜ ಆಶ್ಚರ್ಯಲಿ ನೋಡ್ತಾ ಯಾರ್ ಮಂಜ ನೀನ್? ತಾ ಹೆಗ್‌ಲಾ ಮೇಲಿಂದ ಭಾರನ ಇಳ್ಸಿಕೆ ಮೊದ್ಲೇ ಕೇಳ್ತ್.

ಪಿತಾಜೀ ನಮಸ್ತೆ. ನಾನ್ ಮಹೇಂದ್ರಪಾಲ್. ನಿಮ್ಮ ಮಂಜ ರಾಜುನ ತುಂಬಾ ಬೇಕಾದ ಸ್ನೇಹಿತ. ಇಲ್ಲಿ ಮಡಿಕೇರಿ ಕಾಲೇಜಲ್ ನಾನು ಅವನೂ ಒಂದೇ ಕ್ಲಾಸ್‌ಲಿ ಓದಿದವು. ನಿನ್ನೆ ಸಾಯಂಕಾಲ ನಮ್ಮ ಮೈಸೂರುಲಿರುವ ಅಂಗಡಿ ಹತ್ರ ನಿಮ್ಮ ಮಂಜ ನನ್ನ ಭೇಟಿ ಆತ್. ಅಂವ ಹುಷಾರಾಗುಟ್ಟು. ಈ ಸಾಮಾನ್‌ಗಳನೆಲ್ಲಾ ಅವನೇ ಕಳ್ಸಿಕೊಟ್ಟದ್ ತಾ ಹೇಳ್ತ್. ಅಷ್ಟೊತ್ತಿಗೆ ಒಳಗಡೆಂದ ಅವ್ವನೂ ಬಂದೊ. ಈ ಮಾತ್‌ನ ಕೇಳ್ದ ಇವುಕೆ ಬಹಳ ಖುಷಿ ಆಗಿ ಒಂದ್ ಸಮಾಧಾನದ ನಿಟ್ಟುಸುರುನ ಬುಟ್ರೊ. ಎಲ್ಲಿ ನನ್ನ ಅಣ್ಣಯ್ಯ ಯಾಕೆ ಬಾತ್ಲೆ. ಅಂವ ನನ್ನ ಮದ್ವೆ ಒಳಗೆ ಖಂಡಿತ ಬನ್ನೆತ್ತೇಳಿ ನಂಗೆ ಪ್ರಾಮಿಷ್ ಮಾಡ್ತಲ್ಲಾ? ಹೇಳಿ ಅಂವಂಗೆ ಏನೂ ತೊಂದರೆ ಇಲ್ಲೆತಾನೇ? ತ್ತೇಳಿ ಗಾಭರಿ ಪಟ್ಟ್‌ಕಂಡ್ ಕೇಳ್ತ್.

ಆಗ ಅವ್ವ ತಂದ್ ಮೊಡ್ಗಿದ ಒಂದ್ ಗ್ಲಾಸ್ ಶರಭತ್ ನೀರ್‌ನ ಕುಡ್ದ್ ಆರಾಂ ಆಗಿ ಕುದ್ದ್ ಒಂದ್ ಸರ್ತಿ ಈ ಮದ್ವೆ ಜಂಬಾರ ನಡಿಯಕ್ಕಿದ್ದ ಮನೆನ ಸೂಕ್ಷ್ಮ ಆಗಿ ದೃಷ್ಟಿಸಿ ನೋಡ್ತ್. ಆಮೇಲೆ ಹೇಳ್ತ್ ಸೋಭ ನಿನ್ನ ಅಣ್ಣ ನಿನ್ನ ಧಾರೆ ಎರ್ದ್‌ಕೊಡ್ವ ಮುಹೂರ್ತದ ಹೊತ್ತಿಗೆ ಖಂಡಿತ ಬಂದ್ ತಲಪಿದೆ. ಆದ್ರೆ ಅಂವ ಬಾರದೆ ಇದ್ರೂ ನೀನ್ ಬೇಜಾರ್ ಮಾಡ್ತೊ ಬೇಡ. ಅದ್‌ಕೆ ಮೊದ್ಲ್ ನಿನ್ನ ಅಣ್ಣನಂಗೆ ನಾನ್‌ನಿಂತ್‌ಕಂಡ್ ಎಲ್ಲಾ ಕೆಲ್ಸಗಳ ಮಾಡಿಕೊಟ್ಟನೆ. ಇನ್ನ್ ನೀವು ಯಾರ್ ಗಾಬರಿ ಆದು ಬೇಡ. ಅಂವ ಈಗ ಸ್ವಲ್ಪ ತಾಪತ್ರೆಗೆ ಸಿಕ್ಕಿ ಹಾಕೊಂಡುಟ್ಟು. ಅದರ ವಿಶ್ಯನ ನಾನ್ ಆಮೇಲೆ ಹೇಳಿನೆ. ಈಗ ಆ ಸಾಮಾನ್‌ಗಳನೆಲ್ಲಾ ಎತ್ತಿ

ಹಿಂದಿನ ಸಂಚಿಕೆಲಿ......

Mr. ರಾಜುಗೆ ಇನ್ ಮುಂದೆ ಈ ತರದ ಸಾಹಸದ ಕೆಲ್ಸಗಳ ಮಾಡ್ದು ಸಾಕ್ ತಾ ಅನ್ನಿಸಿತ್. ಇನ್ನ್ ಊರಿಗೆ ವಾಪಾಸ್ ಹೊರಡುವ ಯೋಚನೆಲಿ ಇತ್. ಆದ್ರೆ ಅದೇ ದಿನ ಬೆಳಿಗ್ಗಿನ ದಿನ ಪತ್ರಿಕೆಲಿ ಇವಂನ ಪೋಟೋ ಅಡ್ರಾಸ್ ಸಮೇತ ಪ್ರಿಂಟಾಗಿ ಎಲ್ಲಾ ಜನರ ಕೈಗೆ ತಲಪಿತ್. ಹಂಗಾಗಿ ಈ ಎಡವಟ್ಟ್ ಸಂದರ್ಭಲಿ ತನ್ನ ತಂಗೆನ ಮದ್ವೆ ಜಂಬಾರನೂ ನಡಿಯೋಕು. ತನ್ನ ಗುರ್ತುನೂ ಜನಿಕೆ ಗೊತ್ತಾಕೆ ಆಗದ್. ಅದಕ್ಕೋಸ್ಕರ ತನ್ನ ಆಪ್ತ ಸ್ನೇಹಿತ ಮಹೇಂದ್ರ ಪಾಲ್‌ನ ಸಹಾಯನ ಕೇಳಿಕಂಡತ್.......

ಮುಂದಕೆ ....

ಒಳಗಡೆಗೆ ಮಡಿಗಕಣಿ. ಮದ್ವೆಗೋಸ್ಕರ ಬೇಕಾದ ಎಲ್ಲಾ ವಸ್ತುಗ ಇದರಲ್ಲುಟ್ಟು. ಇನ್ನ್ ಬಾವಂಗೆ ಕೊಡಿಕೆ ಒಂದ್ ಲಕ್ಷ ರೂಪಾಯಿ ವರದಕ್ಷಿಣೆ ಹಣನೂ ಬೇರೆ ಆಗಿ ಒಂದ್ ಉದ್ದದ ಮಾಲೆಕಟ್ಟಿ ಸರಮಾಡಿ ಈ ಪೆಟಿಗೆ ಒಳಗೆ ಮೊಡಗಿಟ್ಟು. ತಂಗೆಗೆ ಬೇಕಾಗಿರ್ವ ಚಿನ್ನಾಭರಣ ಒಡವೆಗಳ ಕೂಡಾ ರೆಡಿಮಾಡಿಟ್ಟು. ಮತ್ತೆ ಬಂದ ನೆಂಟರಿಗೆ ಕೊಡಿಕ್ಕೋಸ್ಕರ ಈ ಬಾಕ್ಸ್‌ಲಿ, ಬೀಡಿ, ಸಿಗರೇಟ್, ಕಳ್ಳ್, ಬ್ರಾಂಡಿ, ರಮ್ ಎಲ್ಲಾ ರೆಡಿ ಉಟ್ಟ್‌ತ್ತೇಳ್ತ್. ಆಗ ಬೋಪಜ್ಜ ಅಲ್ಲಾ ಮಂಜ, ಇಷ್ಟೆಲ್ಲಾನೂ ನಿನ್ನ ಕೈಲಿ ಕಳ್ಸಿ ಕೊಟ್ಟುಟಲ್ಲಾ ಅಂವ ಮಾತ್ರ ಯಾಕೆ ನಿನ್ನ ಜೊತೆಲಿ ಬಾತ್‌ಲೆ. ಅಂವನ ಮುಖನ ನೋಡಿಕೆ ನಮಿಗೆಲ್ಲಾ ಆಸೆ ಆಗಿ ಹೋಗುಟ್ಟು. ಅಂವಂಗೆ ಖಂಡಿತಾ ಏನೂ ತೊಂದರೆ ಇಲ್ಲೆ ತಾನೆ? ತಾ ಗಾಭರಿ ತುಂಬಿಕಂಡ್ ಕೇಳ್ದೊ.

ಪಿತಾಜಿ ನಿಮ್ಮ ಮಂಜ ಇಲ್ಲಿಂದ ಅಂಥ್ ಮಧ್ಯರಾತ್ರಿಲಿ ಹೊರಟಂವ ನೆಟ್ಟಂಗೆ ಮೈಸೂರಿಗೆ ಹೋದಂವ ಬೆಳಕ್ ಹರಿಯಕೆ ಮುಂದೆ ರಸ್ತೆದರೋಡೆ ಕೋರರ ದಾಳಿಗೆ ಸಿಕ್ಕಿ ಹಾಕಿಕಂಡವರ ಬಚಾವ್‌ಮಾಡಿಕೆ ಹೋಗಿ ಇವನೇ ಪೋಲಿಸ್‌ನವರ ಕೈಗೆ ಸಿಕ್ಕಿ ಹಾಕಂಡ್ ಜೈಲ್ ಒಳಗೆ ಕುದ್ರಿಕ್ಕಾತ್. ಅಲ್ಲಿಂದ ತಪ್ಪಿಸಿಕಂಡ್ ಹೊರಗೆ ಬಂದಂವ ಮಾರನೆ ದಿನ ಮೈಸೂರ್‌ಲಿ ಪೈಲ್‌ವಾನ್‌ಗಳ ಪಂಥ್ಯಲಿ ಒಬ್ಬ ಬಾರೀ ಪೈಲ್‌ವಾನ್‌ನ ಸೋಲಿಸಿ ಬಹುಮಾನ ಪಡಕಂಡತ್. ಆದ್ರೇ ಅಲ್ಲಿಕೂಡಾ ಆಮೇಲೆ ಆಸ್ಪತ್ರೆಗೆ ಎಡ್ಮಿಟ್ ಆದಂವ ಮಾರನೆ ದಿನ ಅಲ್ಲಿಂದಲೂ ಪರಾರಿ ಆಗಿ ಓಡಿಬುಡ್ತ್. ಅಲ್ಲಿಂದ ಪರಾರಿ ಆಗಿ ನಂಜನ ಗೂಡು ರಸ್ತೆಲಿ ಹೋಕಾಕನ ಅಲ್ಲಿ ಕಬಿನಿ ಹೊಳೆಗೆ ಹಾರಿ ಪ್ರಾಣಕಳ್ಕೊಂಬ ಒಂದ್ ಗೂಡೆನ ಉಳ್ಸಿತ್. ಅಲ್ಲದೆ ನಾಳೆ ಆ ಗೂಡೆ ಕೂಡಾ ಇಲ್ಲಿಗೇ ಬಂದದೆ. (ತಂಗೆ ಸೋಭನ ದಾರೆ ಎರ್ದ್ ಕೊಟ್ಟ್ ಆದಂಗೆ ನಿಮ್ಮ ಮಂಜ ಆ ಗೂಡೆನ ಇಲ್ಲೇ ಮದ್ವೆ ಆದೆ) ಅಲ್ಲದೆ ಒಬ್ಬಕಳ್ಳ ಸನ್ಯಾಸಿಗೆ ಏಮಾರ್ಸಿ ಅವನ ಡ್ರೆಸ್ಸ್‌ಗಳನೆಲ್ಲಾ ಹೊತ್‌ಕಂಡ್ ಹೋಗಿ ಇವನೂ ಸನ್ಯಾಸಿತರ ವೇಷಹಾಕಂಡ್ ತಿರ್‌ಗಾಡಿತ್. ಆಮೇಲೆ ಬಸ್ಸ್‌ನ ದರೋಡೆ ಮಾಡ್ವರನೆಲ್ಲಾ ಹಿಡ್ದ್ ಪೋಲಿಸ್‌ನವುಕೆ ಕೊಟ್ಟುಟು, ಬಡ ಹೆಣ್ಣ್‌ಮಕ್ಕಳ ಕೈಲಿ ದುಡ್ಸಿಕಂಡ್ ಶೋಷಣೆ ಮಾಡ್‌ತಿದ್ದ ಪ್ಯಾಕ್ಟರಿ ಸಾಹುಕಾರಂಗೆ ಬುದ್ದಿ ಕಲ್ಸಿಟ್ಟು. ಹಿಂಗೆ ಅಂವ ದಿನಕ್ಕೊಂದ್ ತರದ ವೇಷನ ಹಾಕಂಡ್ ದಿನಕೊಬ್ಬ ಭ್ರಷ್ಟಾಚಾರಿ ಜನಿಕೆ ಪಾಠಕಲ್ಸಿಟ್ಟು. ಹಿಂಗೇ ಅಂತವರನೆಲ್ಲಾ ಹೆದ್ರ್‌ಸಿ ಬೆದ್ರ್‌ಸಿ ಹಣನ ವಸೂಲಿ ಮಾಡಿಟ್ಟು. ಇಂವ ಬರೇ 20ದಿನಕ್ಕೆ ಎರಡುಲಕ್ಷ ರೂಪಾಯಿ ಹಣನ ಸಂಪಾದ್ನೆಮಾಡಿಕಂಡ್ ಬಂದುಟ್ಟು. ಆದ್ರೆ ಕೊನೇ ಘಳಿಗೆಲಿ ಒಂದ್ ಎಡವಟ್ಟು ಆಗಿಹೋತ್. ನೀವು ಅವನ ಪೋಟೋನ ಪೇಪರ್‌ಲಿ ಅಚ್ಚ್‌ಹಾಕಿಸಿ ಎಲ್ಲಿದ್ರೂ ತಂಗೆ ಸೋಭನ ಮದ್ವೆಗೆ ಬರೋಕುತ್ತೇಳಿ ಅಡ್ರಾಸ್‌ನ ಕೂಡಾ ಕೊಟ್ಟ್‌ರಂದ ಈಗ ನನ್ನ ಸ್ನೇಹಿತ ರಾಜುಗೆ ಈ ಕೇಡಿಗಳ ಕಡೇಂದ ಪ್ರಾಣಭಯ ಬಂದು ಬುಟ್ಟುಟು. ಹಂಗಾಗಿ ಈಗ ರಾಜು ಇಲ್ಲಿಗೆ ವೇಷಮರ್ಸಿಕಂಡ್ ಕೊನೇಘಳಿಗೆಲಿ ಬರ್ವಂತಹ ಪರಿಸ್ತಿತಿ ಬಂದ್ಹೋತ್. ನೀವು ಪೇಪರ್‌ಲಿ ಅವನ ಪೋಟೋನ ಹಾಕ್ದೇ ಇದ್ದಿದ್ರೆ ಅಂವ ಯಾವ ತಾಪತ್ರೆನೂ ಇಲ್ದೇ ಇಲ್ಲಿಗೆ ಬಂದ್ ತಂಗೆನ ಮೊದ್ವೆನ ನಡ್ಸಿಕೊಡಿಕಿತ್ತ್.

ಆಗ ಅಪ್ಪ ಬೋಪಜ್ಜ ಅಯ್ಯೋ ರಾಮನೆ!! ನಾನ್ ಮಾಡ್ವ ಒಂದೊಂದು ಕೆಲ್ಸಗಳೂ ನನ್ನ ಮಂಜ ರಾಜುಗೆ ಕಷ್ಟನ ಕೊಡ್ವಂಗೆ ಆಗಿ ಹೋತಲ್ಲಾ? ತಾ ಬೇಜಾರ್ ಮಾಡಿಕಂಡ್ ದುಃಖಿಸಿದೊ. ಆಗ ಈ ನೇಪಾಳಿ ಫ್ರೆಂಡ್ ಅವುಕೆ ಸಮಾದಾನ ಹೇಳ್ತ್. ಪಿತಾಜಿ ಈಗ ನೀವು ಭಯ ಪಡ್ವ ಅಗತ್ಯ ಇಲ್ಲೆ. ನಾಡ್‌ದ್ ನಿಮ್ಮ ಮಂಜ ರಾಜು ಬಂದದೆ. ನಾನೂ ಅವನೂ ಒಟ್ಟಿಗೆ ಸೇರಿ ಬುಟ್ಟರೆ ಇಲ್ಲಿಯಾವ ಗಲಾಟೆನೂ ಆಗದಂಗೆ ನೋಡಿಕಂಡವೆ. ಆ ಬರ್ವ ಕೇಡಿಗಳ ಹೆಂಗೆ ಮಾತಾಡ್ಸಿ ಸರಿಮಾಡಿಕಂಬೋಕುತ ನಂಗೆ ಗೊತ್ತುಟು. ಆ ಮೈಸೂರು ಕಡೇಂದ ಬರ್ವ ರಾಜುನ ಗೆಸ್ಟ್‌ಗಳಿಗೆಲ್ಲಾ ಇಲ್ಲಿನ ಜನ ಪ್ರೀತಿ ವಿಶ್ವಾಸಲಿ ನೋಡಿಕಂಡ್ ಮಾತಾಡ್ಸಿಕಂಡ್ ಅವರ ಕೆಟ್ಟಗುಣನ ಹೋಗ್ಸಿ ಅವುಕೆಲ್ಲಾ ಒಳ್ಳೆ ಬುದ್ದಿ ಬರ್ವಂಗೆ ಮಾಡಿಕೆ ಪ್ರಯತ್ನ ಮಾಡೋಣ. ಅಥವಾ ಒಂದ್ ವೇಳೆ ಅವನು ನಮ್ಮ ಆಥಿತ್ಯನ ಸ್ವೀಕರಿಸಕಣದೆ ಕೆಟ್ಟತನಕ್ಕೇ ಬೆಲೆ ಕೊಡ್ತಾದರೆ ಅವರೆಲ್ಲವರ ಮೂಳೆಗಳ ಹೊಡಿಹೊಡಿ ಮಾಡಿಕೆ ನಾನ್ ಬಂದದ್. ಅದ್ರಂದ ಈಗ ನೀವು ಮಂಜ ರಾಜು ಬಾತ್‌ಲೆತ್ತೇಳಿ ಬೇಜಾರ್ ಮಾಡಿ ಕಂಬೋದು ಬೇಡ. ಈಗ ನೀವು ಮದ್ವೆ ಜಂಬಾರಕ್ಕಿರುವ ಕೆಲಸ ಕಾರ್ಯಗ ಏನೇನು ಉಟ್ಟು ಹೆಂಗೆ ಹೆಂಗೆ ಮಾಡೋಕು ತಾ ನೀವು ಒಂದ್ ಕಡೆ ಕುದ್ದ್‌ಕಂಡ್ ನಂಗೆ ಹೇಳಿಕೊಡಿ. ಅಷ್ಟೇ ಸಾಕ್ ನಾನ್ ಇಲ್ಲಿರುವ ನಿಮ್ಮ ಊರ್‌ನ, ಮನೆಯವರ ಹುಡುಗರ ಜೊತೆಗೆ ಬಾಕಿ ಇರ್ವ ಎಲ್ಲಾ ಕೆಲ್ಸಗಳ ಚಕಚಕತ ಮಾಡಿ ಕೊಟ್ಟನೆ ತಾ ಹೇಳಿ Mr. ಮಹೇಂದ್ರಪಾಲ್ ಜೋಬೊಳಗಿಂದ ಒಂದ್ ಪುಲ್ ಬಾಟಲ್ ಗೋಲ್‌ಕೊಂಡ ವಿಸ್ಕಿನ ತೆಗ್ದ್ ತಕಣಿ ಇದ್ ನಿಮಿಗೂ ಅವ್ವಂಗೂ ನಿಮ್ಮ ಮಂಜ ಕೊಟ್ಟ್ ಕಳ್ಸಿದ್. ಇದರ ತಕಂಡ್ ನೀವು ಆರಾಂ ಆಗಿ ಯಾವ ತೊಂದ್ರೆನೂ ತಕಣದೆ ಕುದ್ದಿರೋಕು ತಾ ಹೇಳಿ ಅವರ ಕೈಗೆ ಕೊಟ್ಟತ್. ಬೋಪಜ್ಜಂಗೆ ಈ ವಿಷಯ ಕೇಳಿ ತುಂಬಾ ಖುಷಿ ಆಗಿ ಹೋತ್. ಈ ಹೈದನ ಮಾತುಕತೆನ, ಇವನ ಪ್ರೀತಿನ ನೋಡಿ ತನ್ನ ಮಂಜ ರಾಜುನೇ ಬಂದಷ್ಟ್ ಖುಷಿ ಆಗಿಹೋತ್. ಎದ್ದ್ ಬಂದ್ ಈ ಹೈದನ ತಲೆನ ಸವರಿಕಂಡ್. ಆಗ್ಲಿ ಮಂಜ ಸ್ನೇಹಿತರ್ ಇದ್ರೆ ಹಿಂಗೆ ಇರೋಕುತ್ತೇಳಿ ಸಮಧಾನ ಪಟ್ಟ್‌ಕಂಡೊ. ಆಗ Mr. ಮಹೇಂದ್ರಪಾಲ್ ಕೇಳ್ತ್. ಅವ್ವಾ ನಂಗೆ ಹೊಟ್ಟೆಗೆ ಏನಾದ್ರೂ ಇದ್ರೆ ಬೇಕ್. ನಾನ್ ಮೈಸೂರ್‌ಂದ್ ಬೆಳಿಗ್ಗನೆ ಹೊರಟೊಳೆ ತಾ ಕೇಳ್ತ್. ಆಗ ಮಗಳು ಸೋಭ ಬೇಗ ಹೋಗಿ ಒಳಗಿಂದ ಅಕ್ಕಿರೊಟ್ಟಿ, ಕಾಯಿ ಪೊಜ್ಜಿನ ತಂದ್ ಬಡ್ಸಿಕೊಟ್ಟತ್ ಬೋಪಜ್ಜ ಮೈಸೂರ್‌ಂದ ತಂದಿದ್ದ ಇಂಪೋರ್ಟೆಡ್ ವಿಸ್ಕಿನ ಮೂರು ಗ್ಲಾಸ್‌ಗೆ ಬೊಗ್ಗಿಸಿ ಒಂದ್ ಗ್ಲಾಸ್‌ನ ಅವ್ವಂಗೂ ಒಂದ್ ಗ್ಲಾಸ್‌ನ ಮಹೇಂದ್ರಪಾಲ್ ಮಂಜಂಗೂ ಕೊಟ್ಟೊ. ಎಲ್ಲಾ

ಒಟ್ಟಿಗೆ ಅದರ ತಕಂಡೊ. ಆ ಮೇಲೆ ಎಲ್ಲಾ ಒಟ್ಟಿಗೆ ಖುಷೀಲಿ ಮದ್ವೆ ಜಂಬಾರದ ಕೆಲ್ಸನ ಶುರು ಮಾಡಿಕೆ ತಯಾರಾದೊ.

ಅವ್ವಂಗೂ, ತಂಗೆ ಶೋಭಂಗೂ ಅಣ್ಣಾ ಬರ್ವ ವರ್ತಮಾನ ಕೇಳಿ ತುಂಬಾ ಖುಷಿ ಆಗಿಹೋತ್. ಇನ್ನ್ ಮೊದ್ವೆಗಿರುವ ಕಾರ್‌ಬಾರ್‌ನ ಮಾಡದೆ ಸುಮ್ಮನೆ ಕುದ್ದಿರಿಕ್ಕಾಗದ್ ತಾ ಸಮಧಾನ ಪಟ್ಟ್‌ಕಂಡೋ. ಮಹೇಂದ್ರ ಪಾಲ್ ಹೊತ್ತ್‌ಕಂಡ್ ಬಂದಂತಹ ಪಾರ್ಸಲ್‌ಗಳನೆಲ್ಲಾ ಅಲ್ಲೆ ಬಿಚ್ಚಿ ನೋಡ್ವ ಆತುರ ತಂಗೆಗಾತ್. ಒಂದ್‌ಕಡೇಂದ ಒಂದೊಂದು ಗಂಟ್‌ಗಳ ಬಿಚ್ಚಿನೋಡ್ತ್. ಅಬ್ಬಾ ಒಳ್ಳೊಳ್ಳೆ ಸೀರೆಗ, ಬ್ಲೌಸ್‌ಗ, ನಾನಾ ತರದ ತುಂಬಾ ಖುಷಿ ಆಗುವಂತಹ ಬಟ್ಟೆಬರೆಗ, ಅವ್ವಂಗೂ ಪಪ್ಪಂಗೂ ಎಲ್ಲವಕೂ ಬೇಕಾದಷ್ಟ್ ಬಟ್ಟೆಗಳ ತಂದಿತ್. ಇನ್ನಂದ್ ಸಣ್ಣ ಗಂಟ್‌ಲಿ ಎರಡ್ ರೇಶ್ಮೆ ಸೀರೆ. ಒಂದ್ ಜೊತೆ ಚೂಡಿದಾರ, ಪೆಟ್ಟಿಕೋಟ್ ಇತ್ತ್. ಅದರ ನೋಡಿಕಾಕನ ತಿಂಡಿತಿಂಬತಿದ್ದ ಪ್ರೆಂಡ್ ಮಹೇಂದ್ರ ಹೇಳ್ತ್. ಆ ಸಿಂಪಲ್ ಡಿಸೈನ್ ಬಟ್ಟೆ ರಾಜು ಅಣ್ಣ ಮದ್ವೆ ಆಗುವ ಗೂಡೆಗೆ. ಅಂದರೆ ನಾಳೆ ಬರ್ವ ನಿನ್ನ ಅತ್ತಿಗೆ ಗೋಸ್ಕರ. ಮತ್ತೆ ಅದ್ರಲ್ಲಿರುವ ಆಭರಣಗ ಕೂಡಾ ಅವಳಿಗೋಸ್ಕರ ಇರೋಕುತ್ತೇಳ್ತ್. ಎಲ್ಲಾ ಪಾರ್ಸಲ್‌ಗಳ ಬಿಚ್ಚಿ ಬಿಚ್ಚಿ ತಂಗೆ ಶೋಭಗೂಡೆನೋಡ್ತ್. ಪಪ್ಪಂಗೆ, ಅಮ್ಮಂಗೆ ಇರ್ವ ಬಟ್ಟೆಗಳ ತೆಗ್ದ್ ಅವುಕೆ ಕೊಟ್ಟತ್. ತನಿಗೆ ತೆಗ್ದಿದ್ದ ತುಂಬಾ ಬಟ್ಟೆಬರೆಗಳ, ಆಮೇಲೆ ಚಿನ್ನಾಭರಣಗಳ ನೋಡಿ ಶೋಬಂಗೆ ತುಂಬಾ ಕುಷೀ ಆಗಿಹೋತ್. ಬಂದ ನೆಂಟ್ರಗಳ ಟ್ರೀಟ್‌ಮೆಂಟ್ಸ್‌ಗೋಸ್ಕರ ದೊಡ್ಡ ಸೈಜ್‌ನ ಎರಡ್ ಬಾಕ್ಸ್ ಪುಲ್ ಡ್ರಿಂಕ್ಸ್‌ಗ, ಮತ್ತೆ ಬೀಡಿ, ಸಿಗರೇಟ್ಸ್, ಸ್ವೀಟ್, ಸುಪಾರಿ ಪೆಟ್ಟಿಗೆ, ಕಾರ, ಸಿಹಿ ತಿಂಡಿ ಪೊಟ್ಟಣಗ ಎಲ್ಲಾ ತುಂಬಾ ಇತ್. ಇದರೆಲ್ಲಾ ತೆಗ್ದ್ ತಂಗೆ ಶೋಭ ಒಳಗೆ ಎತ್ತಿಕಂಡ್ ಹೋಗಿ ಜೋಡ್ಸಿ ಮಡಗಿತ್.

ಆದ್ರೇ ಅಣ್ಣಯ್ಯನ ಕೆಲವಾರು ವಿಚಾರಗ ಬಹಳ ಆಶ್ಚರ್ಯಕರವಾಗಿಯೂ ಬಹಳ ಗುಟ್ಟ್‌ನ ವಿಚಾರ ಆಗಿಯೂ ಕಂಡ್ ಬಾತ್. ಯಾವುದಕ್ಕೂ ಸರಿಯಾದ ಉತ್ತರಗ ಇವುಕೆ ಸಿಕ್ಕ್‌ತ್‌ಲೆ. ಎಲ್ಲಾ ನಮ್ಮ ರಾಜು ಮಂಜ ಬಂದ ಮೇಲೆ ಗೊತ್ತಾದು. ಆದ್ರೆ ಅಲ್ಲಿವರ್ಗೂ ನಮ್ಮ ರಾಜು ಅಣ್ಣನ ಗುಟ್ಟ್‌ನ ವಿಚಾರನ ಹೊರಗಡೆ ಜನಿಕೆ ಹೇಳಿಕಂಬಕಾಗದ್. ನಾವೇ ಇನ್ನಷ್ಟ್ ಆಪತ್‌ನ ತಂದ್‌ಕಂಬಕಾಗದ್ ತಾ ಮಾತಾಡಿಕಂಡೊ.

ಎಲ್ಲಾ ಕುದ್ದ್‌ಕಂಡ್ ಮಾತುಕತೆ ಆಡಿ ಆದಮೇಲೆ ಈ ರಾಜಣ್ಣನ ಫ್ರೆಂಡ್ ಪಪ್ಪನ ಹತ್ರ ಕೇಳ್ತ್. ಪಿತಾಜಿ ಇಂದ್ ಮಾಡಿಕಿರುವ ಕೆಲ್ಸಗ·ಯಾವ್ಯಾವುದು ಉಟ್ಟು. ಅದರ ನಂಗೆ ಸ್ವಲ್ಪ ಹೇಳಿ ನಾನ್ ನಿಮ್ಮ ಮನೆ ಹುಡುಗರ ಜೊತೆಲಿ ಸೇರಿಕಂಡ್ ಎಲ್ಲಾ ಕೆಲ್ಸನ ಮಾಡಿನೆ. ನಾನ್ ಬಂದ ಮೇಲೆ ಇನ್ನ್ ನೀವು ಯಾವ ತೊಂದರೆನೂ ತಕೊಂಬೊದು ಬೇಡ ತಾ ಕೇಳಿ ಕಂಡತ್. ಅಷ್ಟೊತ್ತಿಗೆ ಬೋಪಜ್ಜನ ಮನೆ ಮಕ್ಕ, ನೆರೆಮನೆ ಮಕ್ಕ ಎಲ್ಲಾ ಬಂದ್ ಅಲ್ಲಿಗೆ ಸೇರ್ದೊ. ಆಗ Mr. ಪಾಲ್ ಅವುಕೆ ವಿಶ್‌ಮಾಡಿ ತನ್ನ ಪರಿಚಯನ, ಮಾಡಿಕಂಡತ್. ಹಂಗೇ ಆ ಬಂದಿದ್ದ ಪ್ರೆಂಡ್ಸ್‌ಗಳಿಗೆಲ್ಲಾ ಬಹಳ ಖುಷೀಲಿ ನೆಗೆ ಆಡಿಕಂಡ್ ಅವರನ್ನೂ ನಗಿಸಿಕೊಂಡ್ ಆ ಹುಡುಗರಿಗೆಲ್ಲಾ ಒಂದೊಂದು ಸಿಗರೇಟ್‌ನ ಆಫರ್ ಮಾಡ್ತ್. ಹಂಗೇ ಮಾತ್‌ಕತೆನ ಆಡಿಕಂಡ್ ತಂಗೆ ಶೋಭನ ಮದ್ವೆ ಜಂಬಾರದ ಕೆಲಸಗಳ ಮಾಡಿಕೆತ್ತೇಳಿ ನಾನ್ ಮೊದ್ಲ್ ಬಂದದ್. ಇವಳ ಅಣ್ಣ ರಾಜು ಈಗಳೆ ಬಾಕೆ ಆದುಲ್ಲೆ. ಆದ್ರಂದ ನಾವೆಲ್ಲಾ ಒಟ್ಟಿಗೆ ಸೇರಿಕಂಡ್ ಇನ್ನ್ ಏನ್ ಕೆಲ್ಸಗ ಇದ್ರೂ ಮಾಡಿಕೊಂಬನ ತಾ ಹೇಳಿ ಆ ಹುಡುಗರನೆಲ್ಲಾ ಒಪ್ಪಿಸಿತ್. ಹಂಗೆ ಬಂದಿದ್ದ ಈ ಹುಡುಗರಿಗೆಲ್ಲಾ ನೋಡಿ ನಾನ್ ನಿಮ್ಮಂತಹ ಪ್ರೆಂಡ್ಸ್‌ಗಳಿಗೆ ಕೊಡೋಣತ್ತೇಳಿ ಇಂಪೋರ್ಟೆಡ್ ಜಿನ್ ನ ಮೈಸೂರ್‌ಂದ ತಂದೊಳೆ. ಎಲ್ಲವೂ ಒಂದೊಂದ್ ಪೆಗ್‌ನ ತಕಣಕ್ಕುತ್ತೇಳಿ ಆ ಹುಡುಗರಿಗೆಲ್ಲಾ ಒಂದೊಂದ್ ಪೆಗ್ ಜಿನ್‌ನ ಕೊಟ್ಟ್ ಅವರ ವಿಶ್ವಾಸನ ಗಿಟ್ಟಿಸಿಕಂಡತ್.


ಆಮೇಲೆ ಬೋಪಜ್ಜ ಹೇಳ್‌ತಿದ್ದ ಒಂದೊಂದು ಕೆಲಸಗಳ ಈ ಹುಡುಗರ ಜೊತೆಲಿ ಸೇರಿಕಂಡ್ ಅವರೊಟ್ಟಿಗೆ ನಗೆ ಆಡಿಕಂಡ್ ಒಂದೊಂದು ಜೋಕ್ಸ್‌ಗಳ ಸೇರ್ಸಿಕಂಡ್ ಬೇಗ ಬೇಗ ಕೆಲ್ಸಗಳ ಮಾಡಿಕೆ ಶುರುಮಾಡಿದೊ. ಕೆಲವು ಹುಡುಗರ್ ಚಪ್ಪರಕೆ, ಕಂಬಗಳ, ಗಳೆಗಳ ಕಡ್ದ್ ತಾಕೆ ಹೋದರೆ ಇನ್ನ್ ಕೆಲವು ಚಪ್ಪರಕೆ ಬೇಕಾದ ಹಲಸ್ ಮರದ ಸೊಪ್ಪನ ಕಡ್ದ್ ತಾಕೆ ಹೋದೊ. ಇದಾದಂಗೆ ಕೆಲವು ಹುಡುಗರ್ ಅಕ್ಕಪಕ್ಕದ ಮನೆಗಳಿಂದ, ಕುರ್ಚಿಗಳ, ಬೆಂಚ್‌ಗಳ, ಹಂಡೆಗಳ ಪಾತ್ರೆಗಳ ಹೊತ್ತ್‌ಕಂಡ್ ಬಾಕೆ ಹೋದೊ. ಇಲ್ಲಿ ಕೆಲವು ಹುಡುಗರ್ ಮರದ ಕಂಬಗಳ ಊರಿ ಚಪ್ಪರ ಹಾಕಿದೊ. ಇದರ ಮಧ್ಯೆ ಕೆಳಗೆ ಮನೆ ನವೀನ ಹೈದ ಈ ಮಹೇಂದ್ರ ಪಾಲ್‌ನ ಜಾವಬೈಕ್ ಮೇಲೆ ಕುರ್ದಿಸಿಕಂಡ್ ಇ ನ್ನೂ ಬಾಕಿ ಹಂಚಿಕಿದ್ದ ಮದ್ವೆಕಾಗದಗಳ ಹಂಚಿಕೆ ಹೊರಟೊ. ಹಿಂಗೇ ಉಳಕಂಡಿದ್ದ ತುಂಬಾ ಕಾರು ಬಾರುಗಳು ಪೈಕಿ ಒಂದೊಂದೇ ಕೆಲ್ಸಗಳ ಮಕ್ಕಳಿಗೆ ಬೋಪಜ್ಜ ಹೇಳ್ತಿತ್. ಹಂಗೇನೇ ಈ ಹುಡುಗರೆಲ್ಲಾ ಸೇರಿಕಂಡ್ ಅವು ಹೇಳ್ವ ಕೆಲ್ಸಗಳ ಮಾಡಿ ಮಾಡಿ ಮುಗ್ಸ್‌ತಿದ್ದೊ.

ಎಲ್ಲವರೊಟ್ಟಿಗೂ ಈ ಮಹೇಂದ್ರಪಾಲ್ ಟಿಬೇಟ್ ಹುಡುಗ ಇಷ್ಟೊಂದ್ ಇಂಟ್ರೆಸ್ಟ್‌ಲಿ ನಮ್ಮ ಸೋಭ ಗೂಡೆನ ಮದ್ವೆಕಾರ್‌ಬಾರ್‌ಲಿ ಓಡಾಡಿಕಂಡಿರ್ದುರ ನೋಡಿ ಇವೆಲ್ಲಾ ಆಶ್ಚರ್ಯ ಪಟ್ಟ್‌ಕಂಡೊ. ಅಲ್ದೇ ನಮ್ಮ ರಾಜಣ್ಣ ಓಡಿಹೋದಂವ. ಯಾಕೆ ಇಷ್ಟ್‌ದಿನಾದ್ರೂ ವಾಪಾಸ್ ಬಾತ್‌ಲೇ ತ್ತೇಳ್ದುಕೆ ಸರಿಯಾದ ಕಾರಣನ ತಿಳ್ಕೆಂಬಕಾತ್ಲೆ. ಎಲ್ಲಾ ಬರೇ ಗುಟ್ಟು, ಗುಟ್ಟು, ಏನೋ ಒಂದು ಅನುಮಾನ. ಯಾರೊಬ್ರೂ ಇದರ ಬಗ್ಗೆ ಸರಿಯಾಗಿ ಬಾಯಿ ಬುಡ್ದುಲೆ !! ಸರಿ ಈಗ ಇವರ ಮಂಜ ಇವರ ಮನೆಲಿ ಇಲ್ಲೆ. ಆದ್ರಂದ ನಮ್ಮ ತಂಗೆನ ಮೊದ್ವೆನ ನಾವೆಲ್ಲಾ ಸೇರಿಕಂಡ್ ಏನೂ ಒಂದ್ ಚ್ಯುತಿ ಬಾರದಂಗೆ ನಡ್ಸುದು ಈಗ ಮನೆ ಮಕ್ಕಳಾದ ನಮ್ಮಗಳ ಕರ್ತವ್ಯತ ಆ ಹುಡ್‌ಗರ್ ತಿಳ್ಕೊಂಡ್ ಎಲ್ಲಾ ಒಟ್ಟಿಗೆ ಕೆಲ್ಸಗಳ ಮಾಡ್ತಿದ್ದೊ.

(ಮುಂದಿನ ಸಂಚಿಕೆಲಿ ರಾಜಣ್ಣ ಯಾಕೆ ಇನ್ನೂ ಬಾತ್ಲೇ?)

ಉತ್ತರದಿಂದ ದಕ್ಷಿಣದ್ವಾರಗಮನ – ಕರಗದ ಸಿರಿಗದು ಆಹ್ವಾನ

ಪತ್ರ ವಿಭಾಗ



ಮಾನ್ಯರೇ,

ನಿಮ್ಮಂತ ಲಾಯಿಕ ತಿಳಿದವರ ತಿಳುವಳಿಕೆಗೆ

ನೀವು ಕೊಡಗು ಸಂಗಾತಿಯ ವಿಷಯ ಬರೆದುದನ್ನು ನೋಡಿ ತುಂಬಾ ಬೇಸರವಾಯ್ತು.

ಒಂದು ವರ್ಷದವರೆಗೆ ಕೊ.ಸ. ಓದಿ ಬೇಸತ್ತಾಗ, ಕಳುಹಿಸಿದ ಚಂದವಾಯಿದೆ ಮುಗಿಯುವುದರೊಳಗೆ "ಮುಂದೆಗೆ ಪತ್ರಿಕೆಯನ್ನು ಕಳುಹಿಸುವುದು ಬೇಡ" ಎಂದು ಸಂಗಾತಿ ಕಛೇರಿಗೆ ನೀವು ತಿಳಿಸಬೇಕಿತ್ತು. ಅದು ನೀವು ಮಾಡಿಲ್ಲ. ಮಾನ್ಯ ಸದಸ್ಯರು ಮರೆತೋ, ಏನೋ ತೊಂದರೆಯಿದ್ದೋ, ಸದಸ್ಯತನವನ್ನು ನವೀಕರಿಸಿಕೊಳ್ಳಲಿಲ್ಲವೆಂದು ಓದುಗರ ಮೇಲೆ ಅಭಿಮಾನವಿಟ್ಟು ಮುಲಾಜಿಗೆ ಸಂಗಾತಿ ಪತ್ರಿಕೆಯನ್ನು ನಿಮಗೆ ಕಳುಹಿಸುತ್ತಾ ಬಂದಿರಬಹುದು. ಇದು ಅವರ ತಾಳ್ಮೆಯನ್ನು ತೋರಿಸುತ್ತದೆ. ಆದರೆ 25 ಪೈಸೆಯ ಪೋಸ್ಟ್‌ಕಾರ್ಡಿನಲ್ಲಿ ವಿಷಯ ತಿಳಿಸುವ ಬುದ್ದಿ ನಿಮಗೆ ಬೇಡವೆ ?

ಒಂದು ಪತ್ರಿಕೆಯನ್ನು ನಡೆಯಿಸಿಕೊಂಡು ಹೋಗುವುದು ಅಷ್ಟು ಸುಲಭದ ಕೆಲಸವೇನೂ ಅಲ್ಲ. ಸರಕಾರದ ಕಾನೂನು, ಕಾಯಿದೆ, ಕಟ್ಟು, ಬದ್ಧತೆಗಳಂತೆ ನಡೆಯಿಸಿಕೊಂಡು ಹೋಗಲು ಹಣಬೇಕು. ಇದನ್ನು ಜಾಹಿರಾತು, ಲೇಖನ ಇನ್ನಿತರ ವಿಷಯದ ಮೂಲಕ ಸಂಗ್ರಹಿಸಬೇಕು. ಯಾವ ಪತ್ರಿಕೆ ಹಣವಿಲ್ಲದೆ ಪ್ರಕಟನೆ ಮಾಡುವುದೆಂದು ತಿಳಿಸಿ. ಪ್ರಭಾಕರರವರು ಅವರಿಂದ ಇವರಿಂದ ದುಡ್ಡು ತೆಗೆದುಕೊಂಡು ದಪ್ಪ ಆಗಿರುವರೆಂದು ಲಿಖಿತದಲ್ಲಿ ನಿಂದಿಸುವುದು ನ್ಯಾಯವಲ್ಲ, ಗೌಡ ಧರ್ಮವೂ ಅಲ್ಲ. ಅತೀ ಕೀಳು ಮನೋಭಾವನೆಯ, ಹೊಟ್ಟೆಉರಿಯ ಮನುಷ್ಯರು ನೀವು.

ಈ ಹಿಂದೆ "ಗೌಡ ಧ್ವನಿ" ಎಂಬ ಪತ್ರಿಕೆ ಬೆಂಗಳೂರಲ್ಲಿ ತೊಡಗಿ ಒಂದು ವರ್ಷದೊಳಗೆ ನಿಂತು ಹೋಯ್ತು. ಕೊ.ಸ. ಈಗ 4½ ವರ್ಷಗಳಿಂದಲೂ ನಮ್ಮ ಜನಾಂಗದ ಆಗು ಹೋಗುಗಳನ್ನು ಕೊಡಗಿನ ಉದ್ದಗಲಕ್ಕೆ ಮಾತ್ರವಲ್ಲ ದೇಶದ ಮೂಲೆ ಮೂಲೆಗೂ ಅಲ್ಲದೆ ನಮ್ಮ ಹೊರದೇಶದ ನಿವಾಸಿಗಳಿಗೂ ತಿಳಿಸುತ್ತಿದೆ.

ಓದುಗರೆ! ಈಗಿನ ಮದುವೆ ಹಬ್ಬ, ಹರಿದಿನಗಳಲ್ಲಿ ಕಡುಬಡವನಾದರೂ ನಮ್ಮ ಜನಾಂಗದವರು ಎಷ್ಟು ಆಡಂಬರದಿಂದ ಖರ್ಚುಮಾಡುವರೆಂದು ನೀವೇ ನೋಡಿರಬಹುದು. ಹೀಗಿರುವಾಗ ನಮ್ಮ ಜನಾಂಗದ 75% ಜನರಿಗೆ ವರ್ಷಕ್ಕೆ 150/- ಚಂದಕೊಟ್ಟು ಕೊ.ಸ. ಓದುವುದು ದೊಡ್ಡ ಹೊರೆಯಾಗಲಾರದು. ಕೊ.ಸ. ಓದಿ, ಉಳಿಸಿ, ಬೆಳೆಸಿ.

— ನಂಗಾರು ಅಪ್ಪಾಜಿ. ಬೆಂಗಳೂರು.

ಸಂಪಾದಕೀಯರೆ,

ನಿಮ್ಮ 16-4-2001ರಿಂದ ತಾ. 30-5-2001ರ ವರೆಗಿನ ಕೊಡಗು ಸಂಗಾತಿ ಪತ್ರಿಕೆಯನ್ನು ಓದಿದೆನು.

ಅದರಲ್ಲಿ ಶ್ರೀ ಪಟ್ಟಡ ಶಿವಕುಮಾರ್‌ರವರು ಗೌಡ ಸಾಂಸ್ಕೃತಿಕ ಅಕಾಡಮಿಯ ವಾರ್ಷಿಕ ಮಹಾಸಭೆಯ "ಗೌಡ ಸಮ್ಮೇಳನ " ನಡೆಸಿ ನಮ್ಮ ಸಂಸ್ಕೃತಿ ಬಿಂಬಿಸುವ ನಿರ್ಧಾರವೆಂಬ ವರದಿಯಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಅರೆ ಭಾಷಿಕ (ಗೌಡ ಕನ್ನಡ) ಗೌಡ ಜನಾಂಗದವನ್ನು ಸೇರಿಸಿ ಮಡಿಕೇರಿಯಲ್ಲಿ ಬೃಹತ್ ಸಮ್ಮೇಳನವನ್ನು ಸಂಘಟಿಸಿ ಎಂಬದಾಗಿ ವರದಿ ಮಾಡಿದ್ದಾರೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ತಿಳಿಯಪಡಿಸಲು ಇಚ್ಛಿಸುತ್ತೇನೆ. ಅದೇನೆಂದರೆ,

"ಗೌಡ " ರ ಸಮ್ಮೇಳನವನ್ನು ನಡೆಸುವಾಗ ಬರೇ ಅರೆಭಾಷೆ ಗೌಡರನ್ನ ಮಾತ್ರ ಸಮ್ಮೇಳನಕ್ಕೆ ಕರೆಯುವುದೇ ಅಥವಾ ಗೌಡರೆಂದು ಕರೆಯಲ್ಪಡುವ ಕೊಡಗು ಮತ್ತು ದಕ್ಷಿಣ ಕನ್ನಡದ ಜನರನ್ನು ಕರೆಯುತ್ತಾರೆಯೇ ಎಂಬ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ.

1985ರಲ್ಲೂ ನಡೆದ ಸುಳ್ಯದ "ಗೌಡ" ಸಮ್ಮೇಳನದಲ್ಲಿ ದಕ್ಷಿಣ ಕನ್ನಡ ಮತ್ತು ಕೊಡಗಿನ ಗೌಡರನ್ನೆಲ್ಲಾ ಸೇರಿಸಿ ಕರೆಯಲಾಗಿತ್ತು. ಅದರ ನಂತರ ಕರೆದ ಸುಳ್ಯದ ಸಮ್ಮೇಳನದಲ್ಲಿ ಎಲ್ಲಾ ಗೌಡರನ್ನು ಕರೆದಿದ್ದರು ಎಂದು ತಿಳಿದು ಬರುತ್ತದೆ.

ಕೊಡಗಿನಲ್ಲಿ ಮಾತ್ರವಾದರೆ "ಅರೆಭಾಷೆ ಗೌಡ" ರೆಂದರೆ ಸರಿ ಹೋದೀತು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೌಡರನ್ನು ಸೇರಿಸಿಕೊಳ್ಳುವುದಾದರೆ ಆ ಸಮ್ಮೇಳನಕ್ಕೆ ಅರೆಭಾಷಿಕ ಗೌಡರ ಸಮ್ಮೇಳನವೆಂದು ಹೇಳುವುದು ಸರಿಯಾಗುವುದಿಲ್ಲ. ಯಾಕೆಂದರೆ ಕರ್ನಾಟಕದಲ್ಲಿ "ಗೌಡ"ರೆಂದು ಜಾತಿಯ ಹೆಸರನ್ನು ಹೇಳುವ ಜನಾಂಗ ದಕ್ಷಿಣ ಕನ್ನಡ ಮತ್ತು ಕೊಡಗಿನಲ್ಲಿ ಮಾತ್ರ ಇರುವುದು. ಇವರನ್ನು ಹಾಲು ಒಕ್ಕಲು ಮಕ್ಕಳು ಎಂದು ಶೃಂಗೇರಿ ಜಗದ್ಗುರು ಕೊಟ್ಟ 1913ನೇ ಇಸವಿಯ ನಿರೂಪದಲ್ಲಿ ಹೇಳಿದ್ದಾರೆ. ಈ ಗೌಡರಲ್ಲಿ ಅರೆಭಾಷೆ ಮತ್ತು ತುಳುಭಾಷೆ ಮಾತಾಡುವ ಗೌಡರೆಲ್ಲಾ ಸೇರಿದ್ದಾರೆ. ಕೊಡಗಿನ ವಿರಾಜಪೇಟೆ ತಾಲ್ಲೂಕು, ಮಡಿಕೇರಿ ತಾಲೂಕು ಮತ್ತು ಸೋಮವಾರಪೇಟೆ ತಾಲೋಕುಗಳಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬೆಳ್ತಂಗಡಿ ಮತ್ತು ಬಂಟ್ವಾಳ ತಾಲೋಕು ಹಾಗೂ ಕೇರಳದ ಕಾಸರಗೋಡು ಪ್ರದೇಶಗಳಲ್ಲಿ ನೆಲಸಿದ್ದಾರೆ. ಈಗಿನ ಮೈಸೂರಿನ ಪಿರಿಯಾಪಟ್ಟಣ ಮತ್ತು ಹಾಸನದ ಅರಕಲಗೋಡು ತಾಲೋಕುಗಳಲ್ಲಿ ನೆಲೆಸಿದ್ದಾರೆ. ಕೊಡಗಿನಲ್ಲಿ ತುಳು ಮಾತಾಡುವ ಗೌಡರೂ ಇದ್ದಾರೆ. ಉದಾಹರಣೆಗೆ ತೋಟಂಬೈಲು, ಮಂಞ್ಞಿಪುರ, ಮುಕ್ಕಾಟಿ ಮತ್ತು ಇತರ ಕೆಲವು ಮನೆತನದವರು ತುಳು ಭಾಷೆಯನ್ನಾಡುತ್ತಿದ್ದರು. ಹಾಗಿರುವಾಗ ಅರೆಭಾಷೆಮಾತಾಡುವ ಗೌಡರ ಸಮ್ಮೇಳನವೆಂದು ಕರೆದರೆ ಸರಿಯಾಗದು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸುಳ್ಯ ತಾಲೋಕಿನಲ್ಲಿ ಮಾತ್ರ ಅರೆಭಾಷೆಯನ್ನಾಡುತ್ತಾರೆ. ಪುತ್ತೂರು, ಬೆಳ್ತಂಗಡಿ ಮತ್ತು ಬಂಟ್ವಾಳ ತಾಲೋಕಿನ ಗೌಡರು ತುಳು ಭಾಷೆಯನ್ನಾಡುತ್ತಾರೆ.

ಒಂದು ಭಾಷೆಯ ಆಧಾರದ ಮೇಲೆ ಜಾತಿಯನ್ನು ವಿಂಗಡಿಸುವುದು ಸರಿಯಲ್ಲ. ಒಂದು ಭಾಷೆಯನ್ನು ಜಾತಿಯ ಹೆಸರು ಹೇಳಿ ಕರೆಯುವುದು ಸರಿಯಲ್ಲ. ಉದಾಹರಣೆಗೆ ಮರಸ್ಸು ಒಕ್ಕಲಿಗರು ಕನ್ನಡವನ್ನು ಮಾತಾಡುತ್ತಾರೆ. ತೆಲುಗು ಭಾಷೆಯನ್ನೂ ಮಾತಾಡುತ್ತಾರೆ. ಅವರನ್ನು ತೆಲುಗು ಮರಸ್ಸು ಒಕ್ಕಲಿಗರು, ಕನ್ನಡ ಮರಸ್ಸು ಒಕ್ಕಲಿಗರು ಎಂಬದಾಗಿ ಕರೆಯುವುದಿಲ್ಲ. ಅದೇ ರೀತಿ ಐಯ್ಯಂಗಾರ್ ಬ್ರಾಹ್ಮಣರು ತಮಿಳು ಮಾತಾಡುವವರು ಇದ್ದಾರೆ. ತೆಲುಗು ಮಾತಾಡುವವರೂ ಇದ್ದಾರೆ. ಅವರನ್ನು ತೆಲುಗು ಐಯ್ಯಂಗಾರರು, ತಮಿಳು ಐಯ್ಯಂಗಾರರು ಎಂಬದಾಗಿ ಕರೆಯುವುದಿಲ್ಲ. ಅದೇ ರೀತಿ ಪ್ರೊ|| ಮರಿಯಪ್ಪ ಭಟ್ಟರು ಅರೆಭಾಷೆಯನ್ನು ಗೌಡ ಕನ್ನಡವೆಂದು ಕರೆದಿರುವುದು ಸರಿಯಲ್ಲ. ಕಾರಣವೇನೆಂದರೆ ಗೌಡರಲ್ಲಿ ಅರೆಭಾಷೆಯನ್ನು ತುಳು ಭಾಷೆಯನ್ನು ಆಡುವ ಗೌಡರು ಇರುವುದ ರಿಂದ ಅರೆಭಾಷೆಯನ್ನು ಗೌಡಕನ್ನಡ ಎಂಬುದಾಗಿ ಕರೆಯುವುದು ಸರಿಯಲ್ಲ. ಒಂದು ಜಾತಿಯ ಜನಾಂಗದ ಚರಿತ್ರೆ, ಸಂಸ್ಕೃತಿ ಸಂಪ್ರದಾಯಗಳನ್ನು ಪ್ರತಿಬಿಂಬಿಸುವ ಸಮ್ಮೇಳನ ಬರೇ ಭಾಷೆಯ ಮೇಲೆ ಪ್ರತ್ಯೇಕಿಸಿದರೆ ಸಾಂಸ್ಕೃತಿಕ ಸಮ್ಮೇಳನದ ಅರ್ಥವೇ ಬದಲಾಗುತ್ತದೆ. ಇದರಿಂದ ಒಂದು ಜಾತಿಯ ಮೂಲಭೂತ ಸಂಸ್ಕೃತಿಗೆ ಪೆಟ್ಟು ಬೀಳುತ್ತದೆ. ಈ ವಿಷಯದಲ್ಲಿ ವಿದ್ಯಾವಂತ ಹಾಗೂ ಬುದ್ಧಿವಂತರು ಚಿಂತಿಸಲಿ ಎಂಬುದಾಗಿ ನನ್ನ ಸೂಚನೆ

— **ಪ್ರೊ. ಪೂಜಾರಿ ಮೊಣ್ಣಪ್ಪ**.

10 ನೇ ಪುಟದಿಂದ

ಶಿಕ್ಷಣದ ಅಧ್ಯಾಯಗಳಿಗೂ ಜೀವನಕ್ಕೂ ಸಮನ್ವಯ ಕಲ್ಪಿಸಿ ಬೋಧಿಸಿದರೆ ಅದು ಪರಿಣಾಮಕಾರಿಯಾಗುತ್ತದೆ.

ಮಕ್ಕಳಿಗೆ ಪ್ರಿಯವಾದ ಯೋಜನಾಪದ್ಧತಿ, ನಾಟಕೀಯಪದ್ಧತಿ, ಕ್ರೀಡಾಪದ್ಧತಿ ಮೊದಲಾದ ಪದ್ಧತಿಗಳ ಮೂಲಕ ಆಕರ್ಷಣೀಯ ಬೋಧನೆ ನೀಡುವುದು.

ರಾಷ್ಟ್ರದ ಆಗುಹೋಗುಗಳ ಬಗ್ಗೆ ಚಿಂತಿಸುವುದು, ಮೂಲಭೂತ ಹಕ್ಕುಗಳು ಮತ್ತು ಪೌರನಾಗಿ ತನ್ನ ಕರ್ತವ್ಯಗಳು, ರಾಷ್ಟ್ರನಿರ್ದೇಶಾತ್ಮಕ ತತ್ವಗಳನ್ನು ಪರಿಣಾಮಕಾರಿಯಾಗಿ ಅರಿಯಲು ಬೋಧಕರು ಸಹಾಯಕರಾಗಬೇಕು.

ಒಟ್ಟಾರೆ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯಾಗಬೇಕು. ಕಲ್ಯಾಣ ರಾಷ್ಟ್ರದ ಕನಸು ಹೊತ್ತಿರುವ ನಮ್ಮ ಭಾರತಮಾತೆಯ ಕನಸು ನನಸಾಗ ಬೇಕು. ಸ್ವಾವಲಂಬಿತರಾಗಿ, ಉತ್ತಮ ಚಾರಿತ್ರ್ಯ ಉಳ್ಳವಾರಾಗಿ, ಜವಾಬ್ದಾರಿಯುತವಾಗಿ, ಸಮಾಜದೊಂದಿಗೆ ಹೊಂದಿಕೊಂಡು ನಡೆಯುವಂತಹ ಪ್ರಜೆಗಳ ನಿರ್ಮಾಣ ಉಪಾಧ್ಯಾಯರಿಂದ ಮಾತ್ರ ಸಾಧ್ಯ. ಅಂತೆಯೇ "Teacher is a Friend, Guide and Philosopher" ಎಂಬ ಮಾತನ್ನು ಸತ್ಯವಾಗಿಸಬೇಕು. ಇದು ಇಂದಿನ ನಮ್ಮ ಸಮಾಜಕ್ಕೆ ಸ್ಫೂರ್ತಿಯಾಗಲಿ.

— ಸಂಗ್ರಹ : ಚಿಲ್ಲನ ಪಿ. ದರ್ಶನ್, ಕುಯ್ಯಂಗೇರಿ.

15 ನೇ ಪುಟದಿಂದ

ಪಾತ್ರೆ ಪಗಡಿಗಳನ್ನು ಓರಣವಾಗಿ ಹೊಂದಿಸಿಡುವುದು, ಬಟ್ಟೆ ಬರೆ ತೊಳೆಯುವುದು, ಕಾಳು ಕಡ್ಡಿ ಹಸನ ಮಾಡುವುದು ಕ್ಯಾಲರಿಗಳ ಖರ್ಚಿಗೆ, ಬೊಜ್ಜು ಇಳಿಕೆಗೆ, ಮೈಮಾಟ ನೀಟಾಗಿ ಉಳಿಯಲು ಸಹಾಯಕವಾಗುತ್ತದೆ ಎಂಬುದನ್ನು ಮಧ್ಯಮ ವಯಸ್ಸಿನ ಮಹಿಳೆಯರು ನೆನಪಿಡಬೇಕು. ಇದರಿಂದ ದೈಹಿಕ, ಮಾನಸಿಕ ಸ್ವಾಸ್ಥ್ಯಕ್ಕೆ ಭದ್ರ ಬುನಾದಿಯಾಗುವುದಲ್ಲದೇ, ಆಹಾರ ಸೇವನೆ ಹಾಗೂ ಬೊಜ್ಜು ಶೇಖರಣೆಯ ನಡುವಿನ ಶೀತಲ ಸಮರ ಶಾಂತಿಯಲ್ಲಿ ಅಂತ್ಯಗೊಳ್ಳುತ್ತದೆ. ಆಳು ನಂಬಿ ಗೋಳಾಡುವುದು ತಪ್ಪುತ್ತದೆ.ಇದನ್ನ ನಮ್ಮ ಜನಾಂಗ ಅಳವಡಿಸಿದರೆ ಉತ್ತಮ.

— ಸಂಗ್ರಹ : **ಸಂಗಾತಿ**

ಹೊಸ + ಒಕ್ಲು = ಹೊಸೊಕ್ಲು

ಗುಹ್ಯ ಗ್ರಾಮದ ಹೊಸೋಕ್ಲು ಮನೆಯವ್ಕೆ ಐನ್‌ಮನೆ ಚೇಲಾವರ ಗ್ರಾಮದ ಕೋಳಿಮಾಡನ ಮನೆ ಬಹಳ ಪಂಡ್ ಈ ಮನೆಯವರ ಅಜ್ಜಂದರ್ ಗುಹ್ಯಗ್ರಾಮಕ್ಕೆ ಬಂದ್ ಹೊಸ್ದಾಗಿ ಜಾಗ ತಕಂಡ್ ಮನೆ ಮಾಡ್ದೊ. ಹೊಸ ಜಾಗಕ್ಕೆ ಬಂದ್ ಕುದ್ದ ಒಕ್ಲುದವು ಹೊಸೊಕ್ಲುದವುತ ಹೇಳ್ದೊ. ಕ್ರಮೇಣ ಹಿಂಗೆ ಆಗ್‌ತ ಇಂದ್ ಹೊಸೋಕ್ಲುತ ಹೇಳ್ವೆ. ಇದ್ ಹೆಚ್ಚಿನ ನಂಮ ಜನಕ್ಕೆ ಗೊತ್ತಿರ್ಲಿಕ್ಕಿಲ್ಲೆ. ಸಿದ್ದಾಪುರದ ಗುಹ್ಯ ಗ್ರಾಮದ ಹೊಸೋಕ್ಲು ಮನೆಯವರ ಐನ್‌ಮನೆ ಚೇಲಾವರ ಗ್ರಾಮದ ಕೋಳಿಮಾಡನ ಮನೆಯೇ ಹೌದು.

— **ಹೊಸೊಕ್ಲು ಟಿ. ಗೋಪಾಲ,**
ಗುಹ್ಯಗ್ರಾಮ, ಸಿದ್ದಾಪುರ

ನಗೆ ಹನಿ

ಗಂಡನ ಇಂಗ್ಲೀಷ್


ದಿನೋಳು ಗಂಡ ಕುಡ್ಕಂಡು ಬಾಕನ, ಹೆಣ್ಣ್ ಕಿರಿಕಿರಿ ಮಾಡ್ತೆ.

ಒಂದು ದಿನ ಗಂಡ ಹೆಣ್ಣಿಗೆ ಹೇಳ್ದೆ ಯಾಗೋಳು ನಾ ಬಾಕನ ನೀನ್ ಹಿಂಗೆ ಕಿರಿಕಿರಿ ಮಾಡಿದ್ರೆ ನಾನ್ ನಿನ್ನನ್ನ ಡೈವಾಸ್ ಮಾಡ್ವೆ ಗೊತ್ತಾ? ನನ್ನ ಏನ್‌ತಾ ತಿಳ್ಕೊಂಡಳಾ ನೀನ್? ಗಂಡ ತಾ ಸ್ವಲ್ಪ ಹೆದರಿಕೆ ಬೇಕು ಹೆಣ್ಣಿಗೆ ಹೂ... ಡೈವೋರ್ಸ್ ಅಂತೇಳ್‌ವ ಬದ್ಲ್

— **ಶ್ರೀಮತಿ ಕೊಂಪುಳೀರ ಪೊನ್ನು** ಬಸಪ್ಪ, ಮಡಿಕೇರಿ.

ಕೊಡಗು ಸಂಗಾತಿಯನ್ನು ಕೊಂಡು ಓದಿರಿ.

ದಿ. ಪೊಕ್ಕುಳಂಡ್ರ ಚಣ್ಣಪ್ಪಚಂಗಪ್ಪ
ಗುಡ್ಡೂರು ಮಾಲ್ದಾರೆ



ಜನನ : 15-8-1949
ಮರಣ : 26-5-1999

2ನೇ ವರ್ಷದ ಚಿರಸ್ಮರಣೆ

ಮಲೆಯ ಮಾರುತದಂತೆ, ನದಿಯ ಓಘದಂತೆ, ಕಾರಂಜಿಯ ನೀರ್ಗುಳ್ಳೆಯಂತೆ, ಮರೆಯಾದರೂ ನೀವು ಅಮರ. ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮೆಲ್ಲರಲ್ಲಿ ಹಚ್ಚಹಸಿರಾಗಿ ಉಳಿದಿದೆ. ನಿಮ್ಮ ಆದರ್ಶ ಗುಣಗಳು ನಮಗೆ ಮಾರ್ಗದರ್ಶನವಾಗಿದೆ. ನಿಮ್ಮ ಆತ್ಮಕ್ಕೆ ಆ ಭಗವಂತನು ಸದಾ ಚಿರಶಾಂತಿಯನ್ನು ನೀಡಲೆಂದು ನಾವೆಲ್ಲರೂ ದೇವರಲ್ಲಿ ಪ್ರಾರ್ಥಿಸುತ್ತೇವೆ.

ದುಃಖಿತಪ್ತ ಪತ್ನಿ : ಸೀತಮ್ಮ ಚಣ್ಣಪ್ಪ
ಮಕ್ಕಳು : ಚಿತ್ರ, ಬಾನು, ಸುರಜ್ ಹಾಗೂ
ಅಪಾರ ಬಂಧು-ಬಳಗದವರು. ✆ : 08274/68517

ಅಗ್ನಿ ಪರೀಕ್ಷೆ : ಮರಣ ಶಯ್ಯೆಯಲ್ಲಿ ಕೊಡಗು ಸಂಗಾತಿ !

1997ನೇ ಯುಗಾದಿಯಂದು ಕೊಡಗು ಸಂಗಾತಿ ಕುಚೇಲನ ಬಡ ಗುಡಿಸಲಲ್ಲಿ ಜನನವಾಗಿ ಇಂದಿಗೆ 4 ಸಂವತ್ಸರಗಳನ್ನು ದಾಟಿ ಐದನೇ ವರ್ಷಕ್ಕೆ ಕಾಲಿಟ್ಟಿದೆ. ಜನಾಂಗದ ಮತ್ತು ಓದುಗರ ಸಹಕಾರ ಪ್ರೀತಿ, ವಿಶ್ವಾಸಗಳಿಂದ ಇಲ್ಲೀ ತನಕ ನಡೆದು ಬಂದಿದೆ. ಪ್ರತಿ ಚಂದದಾರರ ಮನೆ ಬಾಗಿಲಿಗೆ ನವೀಕರಣಕ್ಕಾಗಿ ಹೋಗಲು ಬಹು ತ್ರಾಸ ಮತ್ತು ಕಠಿಣ ಕೆಲಸವಾಗಿದೆ. ಪತ್ರಿಕೆಯನ್ನು ಚಂದದಾರರ ಮನೆಗೆ ಎಡೆಬಿಡದೆ ಕಳುಹಿಸುತ್ತಿದ್ದರು ಸಹ ಹೆಚ್ಚಿನವರಿಂದ 2 ವರ್ಷ, 1 ವರ್ಷ, 6 ತಿಂಗಳು, 3 ತಿಂಗಳುಗಳೆಂದು ವಾಯಿದೆ ಮೀರಿದೆ. ವಾಯಿದೆ ಮೀರಿದ ಹಣವೂ ಸಾಕಷ್ಟು ಚಂದದಾರರಾದ ನಿಮ್ಮಲ್ಲಿಯೇ ಉಳಿದಿದೆ. ದಯವಿಟ್ಟು ಕೂಡಲೇ ಕಳುಹಿಸಿದಲ್ಲಿ ಸಂಗಾತಿ ಅಗ್ನಿ ಪರೀಕ್ಷೆಯಿಂದ ಹೊರಬರುವುದಲ್ಲದೆ ಮರಣ ಶಯ್ಯೆಯಿಂದ ಗುಣಮುಖಿಯಾಗಿ ಮೇಲೆಳಲು ಖಂಡಿತ ಸಾಧ್ಯವಿದೆ. ಪ್ರಯತ್ನ ನಮ್ಮದು, ಫಲ ನಿಮ್ಮದು ಹಾಗೂ ಜನಾಂಗಕ್ಕೆ ಎಂಬ ಅರಿವಿದ್ದರೆ ನಮಗದೆ ತೃಪ್ತಿ.


— ಪಟ್ಟಡ ಪ್ರಭಾಕರ, ಗೌರವ ಸಂಪಾದಕ
ಕೊಡಗು ಸಂಗಾತಿ

ವಿಶೇಷ ಸೂಚನೆ : 1-6-2001 ರಿಂದ ಕೊಡಗು ಸಂಗಾತಿ ತಿಂಗಳಿಗೊಂದೆ !

8-4-1997 ರಿಂದ 31-5-2001 ರ ತನಕ ಪ್ರತಿ ತಿಂಗಳು, ತಿಂಗಳಿಗೆ 2 ಪತ್ರಿಕೆಯಂತೆ ಕೊಡಗು ಸಂಗಾತಿಯನ್ನು ಮುದ್ರಿಸಿ ತಪ್ಪದೆ ಎಲ್ಲಾ ಚಂದಾದಾರರಿಗೆ ಕಳುಹಿಸಿದ್ದೇವೆ. ಪತ್ರಿಕೆ ನಡೆಯಿಸುವುದು ಕಠಿಣ ಮತ್ತು ತ್ರಾಸದಾಯಕ ಕೆಲಸವಾಗಿದೆ. ತ್ರಾಸವಾದರು ಪರವಾಗಿಲ್ಲ. ನಾವು ಕಳುಹಿಸುತ್ತಿದ್ದ ಪತ್ರಿಕೆಗೆ ಸಾಕಷ್ಟು ಹಣ ಬರಬೇಕಿದೆ. ಸರಾಗವಾಗಿ ಬರದೆ ಇರುವುದರಿಂದ ಹಿರಿಯರ ಮತ್ತು ಅನುಭವಸ್ಥರ ಸಲಹೆ ಮೇರೆ ಅನಿವಾರ್ಯವಾಗಿ ತಿಂಗಳಿಗೊಮ್ಮೆ ಮುದ್ರಿಸುವಂತೆ ಸಧ್ಯಕ್ಕೆ ಸಂಗಾತಿ ಬಳಗ ತೀರ್ಮಾನಿಸಿದೆ. ಹಲವಾರು ಎಡವಟ್ಟುಗಳ ಮಧ್ಯೆಯು ಚಂದಾದಾರರಿಗೆ ನಿರಂತರವಾಗಿ ಕಳುಹಿಸಲು ಹೆಣಗಿದೆ. ಹಾಲಿ ಚಂದದಾರರು ಈ ಹಿಂದಿನಂತೆ ತಾವು ಕಳುಹಿಸಿದ ವಾಯಿದೆಗೆ ಬದ್ದರಾಗಿರುವಂತೆ ವಿನಂತಿ. ಮುಂದೆ ಆರ್ಥಿಕ ಪರಿಸ್ಥಿತಿ ಸುಧಾರಿಸಿದಲ್ಲೂ ಖಂಡಿತವಾಗಿಯೂ ಹಿಂದಿನಂತೆ ತಿಂಗಳಿಗೆ 2 ಪತ್ರಿಕೆಯಂತೆಯೂ ಸಾಧ್ಯವಾದರೆ ವಾರಪತ್ರಿಕೆಯಾಗಿ ಮಾರ್ಪಡಿಸಲು ಶ್ರಮಿಸುತ್ತೇವೆ. ಹಣ ಪಾವತಿಸದ ಚಂದಾದರರು ಕೂಡಲೆ ನವೀಕರಿಸಿಕೊಳ್ಳುವುದು. ಅಂತೆಯೇ 31-2-2000 ರ ತನಕ ನವೀಕರಣಗೊಳ್ಳದೆ ಉಳಿದಿರುವ ಚಂದದಾರ ಕೂಡಲೇ ನವೀಕರಿಸಬೇಕು. ಇಲ್ಲವಾದಲ್ಲಿ ಅವರಿಗೆಲ್ಲ ಪತ್ರಿಕೆಯನ್ನು ಸಧ್ಯದಲ್ಲೆ ನಿಲ್ಲಿಸಲಾಗುವುದು. ಚಂದದಾರರು ವರ್ಷಕ್ಕೆ ರೂ. 150/- ಕಳುಹಿಸುವುದಲ್ಲದೆ ಈ ಹಿಂದಿನಂತೆ ಸಹಕರಿಸುವಂತೆ ವಿನಂತಿ. ಈ ಮೇಲಿನ ವ್ಯವಸ್ಥೆ ತಾತ್ಕಾಲಿಕವಾಗಿರುತ್ತದೆ.

ತಮ್ಮ ವಿಶ್ವಾಸಿ.

ಪಟ್ಟಡ ಪ್ರಭಾಕರ, ಗೌರವ, ಸಂಪಾದಕ, ಕೊಡಗು ಸಂಗಾತಿ.



ಕಾಳೇರಮ್ಮನ ಗಣಪತಿ

4ನೇ ವರ್ಷದ ಪುಣ್ಯಸ್ಮರಣೆ

ಜನನ : 8-9-1938 ಮರಣ : 15-6-1997

ನೀವು ನಮ್ಮನ್ನಗಲಿ 4 ವರ್ಷಗಳೇ ಕಳೆದರೂ ನಿಮ್ಮ ಚಿರನೆನಪು ಆಗಿಂದಾಗ್ಗೆ ಮರುಕಳಿಸುತ್ತಿದ್ದು, ನಿಮ್ಮ ಪ್ರೀತಿ, ವಾತ್ಸಲ್ಯ, ತ್ಯಾಗದ ಆದರ್ಶ ಜೀವನ ನಮಗೆ ಅನುದಿನವು ಮಾರ್ಗದರ್ಶನವಾಗಿದೆ. ನಿಮ್ಮ ನಿಷ್ಕಲ್ಮಶ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಆ ಭಗವಂತನು ನೀಡಲೆಂದುಅನುದಿನವು ಪ್ರಾರ್ಥಿಸುತ್ತಿರುವೆವು.

ಪತ್ನಿ : ಭಾಗೀರಥಿ ಮಕ್ಕಳು : ಮೀರ ಮತ್ತು ನಮಿತಾ,
ಶಿವನಂಜಪ್ಪ ಬಡಾವಣೆ, ನೆಹರುನಗರ, ಮಂಡ್ಯ 571 401 ☎ : 08232 - 23700

Reg. No. KA/SK/MYS-88 Registered : 10-01-96 TCI Kar. 09592

ಅಮರ ಸುಳ್ಯದ ಕ್ರಾಂತಿಯ ಕೊಡಗಿನ ರೂವಾರಿ ಗುಡ್ಡೆಮನೆ ಅಪ್ಪಯ್ಯಗೌಡರ ವೀರ ಸಾಹಸದ ಚರಿತ್ರೆಯನ್ನು ಪುಸ್ತಕದ ರೂಪದಲ್ಲಿ ಹೊರತರುವಲ್ಲಿ.


1837ನೇ ಇಸವಿಯ ಕೊಡಗು ಮತ್ತು ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ದಂಗೆಯಲ್ಲಿ ಭಾಗವಹಿಸಿ 31-10-1837ನೇ ತಾರೀಖ್‌ನಂದು ಮಡಿಕೇರಿಯ ಈಗಿನ ಕೋಟೆ ಆವರಣದಲ್ಲಿ ಊರಿನ, ನಾಡಿನ ಪಟೇಲರ ಮತ್ತು ಸಾರ್ವಜನಿಕ ಹಾಗೂ ಬ್ರಿಟಿಷ್ ಗುಲಾಮರ ರೂಬ್ ರೂಬ್‌ನಲ್ಲಿ ಗಲ್ಲಿಗೇರಿಸಿದ್ದು ನಮ್ಮ ನಾಡಿನ ಮತ್ತು ಜನಾಂಗದ ದುರಂತವೇ ಸರಿ. ಈ ನಿಟ್ಟಿನಲ್ಲಿ ನಮ್ಮ ಮುಂದಿನ ಯುವ ಪೀಳಿಗೆಯ ಅವಗಾಹನೆಗಾಗಿಯೂ ಅನುಕೂಲಕ್ಕಾಗಿಯೂ ದಿವಂಗತರ ಆತ್ಮಚರಿತ್ರೆ ಹಾಗೂ ಸಾಹಸ ವಿಚಾರಗಳನ್ನು ಪುಸ್ತಕ ರೂಪದಲ್ಲಿ ಹೊರತರಲು ಸಂಗಾತಿ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಓದುಗರಿಂದಲೂ ಆಸಕ್ತರಿಂದಲೂ ಸುಮಾರು 200 ಪುಟಗಳ ಪುಸ್ತಕವೊಂದನ್ನು ಬರೆಯಿಸಲು ಆಶಿಸುತ್ತದೆ.

ಮಾನ್ಯ ಲೇಖಕರಿಗೆ ಸೂಕ್ತ ಸಂಭಾವನೆ ನೀಡಲಾಗುವುದು. ಈ ರೀತಿ ಮಣ್ಮರೆಯಾಗಿ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತನ್ನ ತನು ಮನ ಧನ ಸರ್ವಸ್ವವನ್ನು ಒತ್ತೆ ಇಟ್ಟ ಈ ಮೂಲ ಪುರುಷನನ್ನೂ ನೆನೆಯುವುದು ಯುವ ಪೀಳಿಗೆಯವರಾದ ನಮ್ಮ ನಿಮ್ಮೆಲ್ಲರ ಕರ್ತವ್ಯವಲ್ಲವೇ! ಬನ್ನಿ ಸಹಕರಿಸಿ, ಒಂದಾಗಿ ಸೇರಿ ಬಲಿಷ್ಠ ಸಮಾಜವನ್ನು ನಿರ್ಮಾಣ ಮಾಡುವ. ಆಸಕ್ತರು ಹೆಚ್ಚಿನ ವಿವರಗಳಿಗೆ ಸಂಗಾತಿಯನ್ನು ಸಂಪರ್ಕಿಸುವುದು.

- ☎ : 0821/516771



8-4-2001ರಲ್ಲಿ ನಡೆದ ಲಾಟರಿ ಬಹುಮಾನದೊಂದಿಗೆ ಸಂಪಾದಕಿ ಪಟ್ಟಡ ಶೀಲಾಮಣಿ



ಸಂಗಾತಿಗೆ ಪ್ರಥಮ ಜೀವಾವಧಿ ಸದಸ್ಯತನ ನೀಡಿದ ಸೂದನ ಮೋಹನ್, ಗೀತಾಂಜಲಿ ದಂಪತಿಗಳಿಂದ ಲಾಟರಿಯ ಪ್ರಥಮ ಬಹುಮಾನ ಎತ್ತುವಿಕೆ.



ಪೋರೆಯನ ಬೇಬಿ ಚಾಂದಿನಿಯು ಲಾಟರಿ ಚೀಟಿ ಎತ್ತುವುದು.



ಮುಖ್ಯ ಅತಿಥಿಗಳ ಜೊತೆ ಸಂಗಾತಿ ದಂಪತಿಗಳು, ಹುದೇರಿ ಮದು, ಪಟ್ಟಡ ಜಯರಾಮ್, ಪೇರಿಯನ ಉತ್ತೈಯ್ಯ, ಗುಡ್ಡೇರ ಕುಮಾರಪ್ಪ, ಮಂಞ್ಞಪುರ ಧರಣಿ, ಹುದೇರಿ ಟೀನಾ ಇತರರನ್ನೂ ಕಾಣಬಹುದು.

Kodagu Sangathi Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.